(SRI B. D. JATTI)

a quantity of about 65 tonnes (Maida, Soji, Atta) was being allotted to Chickmagalur District every month. Since the supply position of wheat products has improved recently, the allotment to the District during December 1967 has been raised to 91 tonnes.

In view of the general difficulties in maintaining supplies of wheat products, efforts have been made to supplement district quotas by other foodgrains, like Jowar, Bajra etc. A total quantity of 800 tonnes of these grains was allotted to the District during the last six months from July, 1967 upto December, 1967. In order to help the Plantation labour in the District, a bulk quantity of 100 tonnes of wheat and 200 tonnes of Jowar has also been allotted to the Mysore State Planters Association, Chickmagalur for distribution to the Plantation labour.

Government are alive to the situation and we are taking every possible step to alleviate the difficulties.

CONSIDERATION OF THE REPORT OF THE COMMITTEE ON THE MAHARASHTRA-MYSORE-KERALA BOUNDARY DISPUTES

(*Debate contd*).

MR. SPEAKER.— Now before the debate is resumed, I wish to point out that a number of members have ignored the provisions of Rule 279. Mr. Krishnan I do not know whether he is here, wants to give notice of an amendment. Mr. Kadam has given notice of what he calls a substitute motion. There are one or two amendments. It is not a normal motion that is before the House. Nobody has got a right to give notice of an amendment. The Member must kindly observe the Rule which provides for certain special procedure. Otherwise, the debate will run out without anything. In order that the result of the debate might be assessed, it is decided that at the conclusion of the debate, at the appointed hour, the member moves the substantive motion in the proper terms to be approved by the Speaker. That is ignored. The Speaker must see whether they are proper or not. Nobody says that the approval of the Speaker is not wanted. It looks as if substantive motions are a matter of right. It is not enough if the Members simply say that they want to move them. They must satisfy me. The Speaker must be convinced whether the words have been properly used or wrongly used. More appropriateness will come by another substantive motion or by an amendment. Mr. Krishnan has merely addressed a letter to the Secretary. The Secretary has no power to approve ; it is the Speaker who has to approve.

Sri M. S. KRISHNAN (Malleswaram).—Yesterday I have addressed the communication to the Secretary.

Mr. SPEAKER.—So far as the particular matter before the House is concerned, it is not very apt to say that I want the decision of House.

Sri M. S. KRISHNAN.—Rule 281 deals with the scope of amendments and suggests amendments.

Mr. SPEAKER.—Amendment to what?

Sri M. S. KRISHNAN.—On the motion which has been proposed by Mr. Jatti.

Mr. SPEAKER.—I have to examine to correctness of this reasoning. I have to approve the amendment to the motion. The member thinks that he has a right to move an amendment for which no approval of the Speaker is necessary. It is an amendment under rule 279. Rule 279 prescribes a special procedure on which the terms are not as the Members want. It says "unless a member moves a substantive motion in appropriate terms to be approved by the Speaker." This is the point that is agitating my mind. If the member convinces me, I am prepared to permit it. I indicated the procedure, and I indicated the scope of the debate. If he wants he may convince me and give another substitute motion which is to be approved by me.

Sri M. S. KRISHNAN.—I will think over and let you know, Sir.

Sri B. P. KADAM (Karwar).—I have addressed my letter to you only, Sir.

Mr. SPEAKER.—I am disallowing nothing. The members must follow the procedure.

Sri B. P. KADAM.—Yesterday, I was intimated to come to your Chambers but I was already on my way home.

Mr. SPEAKER.—Yesterday I tried to contact this member but he had left. I am not finding fault with anybody. If he does not observe rules, let him not think that I am in any way opposed one way or the other. I do not want to shut out. The House cannot take notice of it until I allow. I will allow the mover to move this motion provided I am satisfied.

Sri B. P. KADAM.—I will satisfy you.

Mr. SPEAKER.—When?

Sri B. P. KADAM.—I am coming to the Chambers.

Mr. SPEAKER.—Not necessary, he may move it. Let one matter be over.

Sri B. P. KADAM.—I beg to move :

"That this House, having considered the Report of the Mahajan Commission on Maharastra-Mysore-Kerala Boundary

(SRI B. P. KADAM)

Disputes urges upon the Central Government to reject the same *in toto* and in its place immediately find a just solution on demoratic lines accepting language, contiguity, wishes of the people and village as unit for demarcating the borders of the States concerned."

Mr. SPEAKER.—Substitute motion given notice of by Sri Kadam has been approved by me. Motion moved :

> "That this House, having considered the Report of the Mahajan Commission on Maharashtra-Mysore-Kerala Boundary Disputes urges upon the Central Government to reject the same to *in toto* and in its place immediately find a solution on democratic lines accepting language, contiguity, wishes of the people and village as a unit for demarking the boundaries of the States concerned."

† ಶ್ರೀ ಎಸ್. ಆರ್. ಬೊಮ್ಮಾಯಿ (ಕುಂದಗೋಳ್).—ಮಾನ್ಯ ಮಂತ್ರಿಗಳಾದ ಶ್ರೀ ಜತ್ತಿಯವರು ಈ ಸಭೆಯ ಮುಂದೆ ಒಂದು ಸೂಚನೆಯನ್ನು ಇಟ್ಟಿದ್ದಾರೆ. ಅದು ಹೀಗಿದೆ :

> "........and also vehemently opposes any proposal or suggestion for obtaining 'National consensus' or taking 'Opinion poll' ".

ನಾವು ಈ ದಿವಸ ಪತ್ರಿಕೆಯಲ್ಲಿ ಓದಿದ ಪ್ರಕಾರ ಕೇಂದ್ರ ಮಂತ್ರಿಗಳಾದ ಶ್ರೀ ಚವಾಣರು ಎಲ್ಲಾ ಪಾರ್ಟಿಯವರ ಒಂದು ಸಭೆ ಕರೆದು ಅದರಲ್ಲಿ "Consensus" ಅಭಿಪ್ರಾಯಗಳನ್ನು ತೆಗೆದು ಕೊಳ್ಳಬೇಕೆಂದು ಕರೆದಿದ್ದಾರೆ ಅದನ್ನು ನಾಳೆಯದಿನ ಇಟ್ಟುಕೊಂಡಿದ್ದಾರೆ. ಈ ಸಮಯದಲ್ಲಿ ಇಂತಹ ಒಂದು ಮೋಷನ್ ಇಲ್ಲಿ ತೆಗೆದುಕೊಂಡು ಚರ್ಚೆ ಮಾಡುವುದರಿಂದೇನು ಪ್ರಯೋಜನ ? ಈ ಬಗ್ಗೆ ನಮ್ಮ ಸರಕಾರದವರು ಸುಮ್ಮನೆ ಕೈಕಟ್ಟಿಕೊಂಡು ಕುಳಿತಿದ್ದಾರೆಯೇ, ಅಥವಾ ಏನಾದರೂ ಬೇರೆ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ ತಿಳಿಸಬೇಕೆಂದು ಕೇಳುತ್ತೇನೆ.

Mr. SPEAKER.—There is no point of order in this. Point of order arising whenever there is a breach of rule or contravention of an article of the Constitution relating to the procedural matter or a question of interpretation.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮಿ ಒಂದು ಇನ್‌ಫರ್‌ಮೇಷನ್ನು ಬೇಕಾಗಿದೆ. ನಾವು ಇಂದು ಪತ್ರಿಕೆಗಳಲ್ಲಿ ಓದಿದ ಪ್ರಕಾರ ನಾಳೆ ದಿನ ಕೇಂದ್ರ ಮಂತ್ರಿಗಳಾದ ಚವಾಣರವರು ಸರ್ವಪಕ್ಷಗಳ ಸಭೆ ಕರಿದಿದ್ದಾರೆಂದು ತಿಳಿದುಬರುತ್ತದೆ. ಆ ಕಾರಣ ಈಗ ಇಲ್ಲಿ ತಂದಿರುವ ನಿರ್ಣಯವನ್ನು ಸ್ಪಷ್ಟವಾದ ರೀತಿಯಲ್ಲಿ ಮಾಡಿ ಈ ಸಭೆಯ ಅಭಿಪ್ರಾಯಗಳನ್ನು ತಿಳಿಸಲು ಇಂದೇ ಈ ನಿರ್ಣಯದ ಚರ್ಚೆ ಹನ್ನೆರಡು ಗಂಟೆಯೊಳಗೇ ಮುಗಿಯುವಂತೆ ಸರ್ವರೂ ಸಹಕರಿಸಬೇಕೆಂದು ಹೇಳುತ್ತೇನೆ. ಮತ್ತು ನಮ್ಮ ವಿರೋಧ ಪಕ್ಷದವರ ಹಾಗೂ ಎಲ್ಲರ ಸಹಕಾರವು ಇದಕ್ಕೆ ಬೇಕು. ಇಂದು ಈ ನಿರ್ಣಯ ಪಾಸಾದ ನಂತರ ಮಾನ್ಯ ಮುಖ್ಯ ಮಂತ್ರಿಗಳು ಇನ್ನೂ ದೆಹಲಿಯಲ್ಲೇ ಇರುವುದರಿಂದ ಅವರಿಗೆ ತಂತಿ ಮೂಲಕ ಈ ವಿಚಾರವನ್ನು ತಿಳಿಸಲು ಅನುಕೂಲವಾಗುವಂತೆ ಈ ನಿರ್ಣಯ ಇಂದು 12 ಗಂಟೆಯೊಳಗೇ ಮುಗಿಸಬೇಕು. ಅದಕ್ಕೆ ಎಲ್ಲರೂ ಸಹಕರಿಸಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಎಸ್. ಶೆಟ್ಟರ್ (ಹುಬ್ಬಳ್ಳಿ).—ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ : Rule 27[illegible] contemplates :

> "A motion that the policy or situation or statement or any other matter be taken into consideration shall not be put

to the vote of the Assembly, but the Assembly shall proceed to discuss such matter immediately after the mover has concluded his speech and no further question shall be put at the conclusion of the debate at the appointed hour unless a member moves a substantive motion in appropriate terms to be approved by the Speaker........"

The word used here is "a member" which cannotes a single member. Already the hon'ble Minister has made a motion. My objection is that Sri Kadam cannot move another substantive motion which can be agitated in this House.

Mr. SPEAKER.—The House never carries on any agitation. Please do not use inappropriate words.

Sri S. S. SHETTAR.—Very well, Sir. I will use the word 'deliberate'. The word used is 'a member' and not 'two members'. So, the second motion moved by Sri Kadam cannot sustain at all.

Mr. SPEAKER.—The point of order raised by Sri Shettar is not sustainable. It would mean: if a person commits an offence he is punishable and if two persons commit an offence, they cannot be convicted because the section says 'a person'. I do not think there is anything in it. Precedent shows that more than one member has been allowed. 'A member' means, one member cannot move two motions, not that when a member moves all the other motions go. If the member desires and if it is in order subject to my approval, it may be moved. It may also be remembered, that if this is put to vote, it is the Hon'ble Minister's motion that would be put to vote first and if that is carried, all the other motions automatically vanish. Therefore, there is no trouble at all. Now Sri Nanje Gowda.

Sri H. N. NANJE GOWDA (Arkalgud).—I have given notice of an amendment to the substitute motion.

Mr. SPEAKER.—I told Sri M. S. Krishnan that amendments may not be a proper procedure. If he wants he may move a substitute motion. To help the member as an exceptional case, I will treat the amendment as a substitute motion. But, members must look into it and try to understand.

Sri M. S. KRISHNAN.—I will treat this as a separate motion and satisfy you. I am drafting the motion.

Mr. SPEAKER.—All right; I will deal with it.

Sri K. H. PATIL (Gadag).—Sir, a substantive motion has been moved by Sri B. D. Jatti. When the motion is in possession of the House having been duly admitted by the hon'ble Speaker, any other motion that comes before this House will be in the form of an amendment. By whatever word we call it, it will be in the form of an amendment. If the amendment or any substantive motion coming later on, is quite contrary to the original proposal that is brought before this House.

Mr. SPEAKER.—Which is the substantive motion ?

Sri K. H. PATIL.—Mr. Jatti has.........

Mr. SPEAKER.—There the member is going wrong. Original motion is a matter to be taken into consideration. That is why it is called a substitute motion. Substitute motion is not the original motion.

Sri K. H. PATIL —When the motion for consideration was before this House, the Mover of that motion moved a substitute motion which was duly admitted and it is before this House for consideration. At this stage any fresh substantive motion can be moved is the point and even if it is moved, it can be considered in the form of an amendment. If Mr. Kadam's motion is asking for changes here and there, then it is all right. But he wants to negative the original motion. Original motion before the House should not be allowed to be negatived by another fresh proposal.

Mr. SPEAKER.—Now the Hon'ble Member Sri K. H. Patil should in the first place have been more alert. If he thought that this cannot be moved, he should have urged his case much earlier and when I made it very clear that there is a motion given notice of by the Hon'ble Member Mr. Kadam, he should have objected at that stage. I do not know why he did not object at that stage. I will over look that aspect. I am saying this for future guidance.

After it is admitted and after he has moved, raising this as a point of order, it does not become a point of order.

He thinks that the original motion before the House is the substitute motion which has been moved by the Hon'ble Minister for Food. The original motion was that a certain matter may be taken into consideration. That is why a substitute motion is given notice of. It is called and designated as a substitute motion. Eeven when this has been pointed out, he still persists in thinking that the substitute motion is the original motion and the amendment to the substitute motion is given notice of by Mr. Kadam is an amendment having regard to the language of the substitute motion which is radically inconsistent...

Sri K. H. PATIL.—It is true that the original motion was there. When the substitute motion was permitted, it is in possession of the House and any motion coming afterwards to negative the substance of that motion is not relevant. That is what I want to point out.

Mr. SPEAKER.—The Hon'ble Member should not disturb me when a ruling is being given. He should have a little patience. It is my ruling to be noted for future guidance that when the Chair is ruling, it is the most elementary principle in a parliamentary institution that no member should get up and interject. This is the most elementary principle and that has to be respected. I am giving it as a ruling.

Later on, this Hon'ble Member represented that when a substitute motion has been moved by the Hon'ble Minister for Food, it becomes

the original motion and anything inconsitent with that cannot be admitted as an amendment. This again proceeds on a wrong premises. The Hon'ble Minister for Food has given notice of a motion and he has moved and the House has accepted it. The position was made very clear with a view to facilitating the work a special procedure is followed having regard to the peculiarities attached to this aspect of the debate this is being admitted. This was made very clear, so that, this point has already been dealt with sufficiently.

Sri H. N. NANJE GOWDA.—Sir, I gave notice of an amendment to the substitute motion. If the Chair permits me I will move it.

Mr. SPEAKER.—The Hon'ble Member should understand that he will have to move this motion only with my approval and not in his own right.

Sri H. N. NANJE GOWDA.—Sir, I beg to seek your permission to move it. I beg leave of the House to move my amendment to the substitute motion moved by Sri B. D. Jatti on 19th December 1967. It is as follows :

That At the end of the Motion the following shall be added:

"That this House further declares that if in case the Government of India does not treat the report as an award between the parties and act thereby then all the Members of this Assembly shall resign their membership."

Mr. SPEAKER.—I would like to make it distinctly clear that this will not be creating any precedent. Having regard to the peculiar circumstance of this debate, and in order to save time I have allowed these amendments to be moved: Amendment moved:

" At the end of the Motion the following shall be added:

" that this House further declares that if in case the Government of India does not treat the report as an award between the parties and act thereby then all the Members of this Assembly shall resign the Membership "

If the Hon'ble Member Mr. Krishna is anxious, I will permit it to save time. In some instances, it has been permitted in Lok Sabha. Normally I do not agree with that procdure.

Sri M. S. KRISHNAN-—Sir, I beg leave to move my amendment which is as follows:

" that In the Substitute motion on the Report of the Commission on Maharashtra - Mysore - Kerala boundary disputes for the words " in spite of the fact that the Commission has failed to recognise the just claims of the State of Mysore and that some of its recommendations are quite injurious to the legitimate interests of the State of Mysore " Substitute " without any modifications or amendments".

Mr. SPEAKER.—Amendment moved:

" That in the Substitute motion on the Report of the Commission on Maharashtra Mysore Kerala boundary disputes for the words :

" in spite of the fact that the Commission has failed to recognise just the claims of the State of Mysore and that some of its recommendations are quite injurious to the legitimate interests of the State of Mysore " Substitute "without any modifications or amendments. "

Sri S. Sharan Gowda also may move his amendment

Sri SHARANGOUDA INAMDAR (Jewargi).—Sir, I beg to move my amendment which is as follows :

" (i.) That In line four delete the word " immediately "

(ii) For the words beginning with " in spite of " in line five to words " also " in line nine substitute " treating it as an award ".

(iii) In line ten before the word "vehemently" insert " further, this House ".

(iv) At the end after the word " Poll " add " in respect of this boundary disputes."

Mr. SPEAKER.—Amendment moved:

(i) "That in line four delete the word " immediately "

(ii) For the words beginning with " in spite of " in line five to words " also " in line nine substitute " treating it as an award ".

(iii) In line ten before the word " vehemently " insert "further, this House. "

(iv) At the end up to the word " Poll " add " in respect of this boundary disputes."

Mr. DIGAMBAR RAO B. KALMANKAR.—may also move his amendment.

Sri DIGAMBAR RAO B. KALMANKAR (Aland).—Sir, I beg to move:

" That in line five after the word " Commission " the words " *in toto* as an award " may be inserted."

At the end of the motion add the words: " in the larger interests of national unity and to give finality to the matter".

Mr. SPEAKER.—Amendment moved :

" That in line five after the word " commission " the words " *in toto* as an award " may be inserted.

At the end of the motion add the words : " in the larger interests of national unity and to give finality to the matter."
Mr. Venkatagiriappa may move his amendment.

Sri P. VENKATAGIRIAPPA (Kolar).—Sir, I beg to move:

"That for the words commencing from "in spite of" in line five to the word "Poll" in the last line substitute "only if the report is accepted by the other parties as the final decision and if the other parties failed to agree, the report may be dropped and the *statuo que* may be continued."

Mr. SPEAKER.—Amendment moved.

"That For the words commencing from "in spite of" in line five to the word "Poll" in the last line substitute "only if the report is accepted by the other parties as the final decision and if the other parties failed to agree, the report may be dropped and the *statue quo* may be continued."

10 A.M.

Sri S. S. SHETTAR.—Sir, regarding the substantive motion moved yesterday by the Hon'ble Minister for Food and Civil Supplies, a ruling was given to the effect that only one substantive motion can be moved and not two. My submisson is whether it can be revived now.

Mr. SPEAKER.—I will look into it.

ಶ್ರೀ ಎಂ. ಎಂ. ಜಾಲಿಸಟಗಿ (ಭಟ್‌ಕಲ್).—ಮಾನ್ಯ ಅಧ್ಯಕ್ಷರೇ, ಮಾನ್ಯ ನ್ಯಾಯಾಧೀಶ ಮಹಜನ್ ಕಮಿಷನ್ನಿನ ವರದಿಗೆ ಸಂಬಂಧಪಟ್ಟಹಾಗೆ ಈಚೆಕಡೆಯವರು ಮತ್ತು ಆಚೆಕಡೆಯವರು ಬಹಳ ಜನ ಮಾತನಾಡಿದ್ದಾರೆ. ನಮ್ಮ ಜಿಲ್ಲೆಯವರಾದ ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ಕದಂ ಅವರು ಈ ವಿಷಯದಲ್ಲಿ ಮಾತನಾಡುತ್ತಾ ಕೆಲವು ವಿಷಯಗಳನ್ನು ಹೇಳಿದ್ದಾರೆ. ಶ್ರೀಮಾನ್ ಕದಂರವರೂ ಸಹ ಕೊಂಕಣಿ ಮಾತೃ ಭಾಷೆಯಾಗುಳ್ಳವರು. ನನ್ನದು ಸಹ ಮಾತೃಭಾಷೆ ಕೊಂಕಣಿ. ನಾನು ಕಲಿತದ್ದು ಕನ್ನಡ. ಶ್ರೀಮಾನ್ ಕದಂ ಅವರೂ ಕನ್ನಡ ವಿದ್ಯಾಭ್ಯಾಸ ಮಾಡಿದ್ದಾರೆ.

ಶ್ರೀ ಬಿ. ಪಿ. ಕದಂ.—ಕನ್ನಡ ಅಲ್ಲ. ಮರಾಠಿ ಓದಿದೆ.

ಶ್ರೀ ಎಂ. ಎಂ. ಜಾಲಿಸಟಗಿ.—ನಮ್ಮ ಜಿಲ್ಲೆ ಕನ್ನಡ ಜಿಲ್ಲೆ. 1862ನೇ ಇಸವಿಯಲ್ಲಿ ಆಗಿನ ಆಳರಸರು ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ಎಂದು ಎರಡು ಭಾಗ ಮಾಡಿದರು. ಅಂದಿನಿಂದ ಇಂದಿನವರೆಗೂ ನಮ್ಮ ಕಾರವಾರ ಎಂಬುದು ನಮ್ಮ ಕನ್ನಡ ಜಿಲ್ಲೆಯ ರಾಜಧಾನಿ. ಬ್ರಿಟಿಷರ ಆಡಳಿತದಲ್ಲಿ ನಮ್ಮ ಜಿಲ್ಲೆಗೆ ಬಹಳ ದ್ರೋಹ ಮಾಡಿದ್ದಾರೆ. ನಮ್ಮ ಜಿಲ್ಲೆಯನ್ನು ಬ್ರಿಟಿಷರು ಮಹಾರಾಷ್ಟ್ರಕ್ಕೆ ಸೇರಿ ಬಹಳ ಅನ್ಯಾಯ ಮಾಡಿದ್ದರು. ಮಹಾರಾಷ್ಟ್ರದಲ್ಲಿ ಮರಾಠಿ ಭಾಷೆಗೆ ಹೆಚ್ಚಿನ ಪ್ರಾಧಾನ್ಯ ಇದ್ದಿತು. ನಮ್ಮ ಉತ್ತರ ಕನ್ನಡ ಜಿಲ್ಲೆಯ ಜನ ಸರ್ಕಾರಿ ನೌಕರಿಯ ಬೇರೆ ಬೇರೆ ಉದ್ಯೋಗದಂಥೆಗೆ ಮಹಾರಾಷ್ಟ್ರಕ್ಕೆ ಹೋಗಿ ಅಲ್ಲಿಯೇ ಉಳಿದು ಅವರ ಮಕ್ಕಳೂ ಮರಾಠಿ ಭಾಷೆಯನ್ನು ಕಲಿತಿದ್ದಾರೆ. ಆದ್ದರಿಂದ ಆ ಪ್ರದೇಶದಲ್ಲಿ ಸ್ವಲ್ಪ ಮರಾಠಿ ಭಾಷೆ ಇದೆ. ಮರಾಠಿ ಭಾಷೆಯನ್ನು ಕಲಿತವರಿಗೆ ನೌಕರಿ ಸಿಕ್ಕುತ್ತಿತ್ತು, ಬೇರೆಯವರಿಗೆ ನೌಕರಿ ಸಿಕ್ಕುತ್ತಿರಲಿಲ್ಲ. ಈ ರೀತಿಯಾಗಿ ನಮ್ಮ ಉತ್ತರ ಕನ್ನಡ ಜಿಲ್ಲೆಗೆ ಮಹಾ ದ್ರೋಹಮಾಡಿದ್ದರು ಬಹಳ ಅಪಕಾರ ಮಾಡಿದ್ದರು.

(MR. DEPUTY SPEAKER in the Chair.)

ಆಮೇಲೆ ಹರಿದು ಹಂಚಿಹೋಗಿದ್ದ ಕನ್ನಡನಾಡು 1956ನೇ ಇಸವಿಯಲ್ಲಿ ಒಂದಾದರೂ ಕೂಡ ಈಗಿನ ಆಳರಸರು, ಎಂದರೆ, ಕಾಂಗ್ರೆಸ್ಸಿನವರು ನಮ್ಮ ಜಿಲ್ಲೆಗೆ ಹೆಚ್ಚಿನ ಲಕ್ಷ್ಯ ಕೊಡಲಿಲ್ಲ. ನಮ್ಮ ಜಿಲ್ಲೆಗೆ ಸರ್ಕಾರದವರು ಹೆಚ್ಚಿನ ಲಕ್ಷ್ಯ ಕೊಟ್ಟಿದ್ದರೆ ಶ್ರೀಮಾನ್ ಕದಂ ಅವರು ಆ ಮಾತನ್ನು ಹೇಳುತ್ತಾ ಇರಲಿಲ್ಲ. 1952ರಲ್ಲಿ ಅವರು ಮುಂಬೈ ವಿಧಾನಸಭೆಗೆ ಆರಿಸಿ ಬಂದಾಗ ಅವರನ್ನು ಕನ್ನಡಿಗರು ಎಂದು ಹೇಳುತ್ತಿದ್ದರು. ಆಮೇಲೆ 1957ನೇ ಇಸವಿಯಲ್ಲಿ ಈ ನಮ್ಮ ವಿಧಾನಸಭೆಗೆ ಚುನಾವಣೆ ನಡೆದಾಗ ಅವರು ಕಮ್ಯುನಿಸ್ಟ್ ಆದರು.

Sri B. P. KADAM.—It is very 'stupid.'

Sri L. SRIKANTAIAH (Nanjangud).—The word 'stupid' is unparliamentary and it should be expunged.

Mr. DEPUTY SPEAKER.—It is not unparliamentary.

ಶ್ರೀ ಎಂ. ಎಂ. ಜಾಲಿಸಟಗಿ.—ಶ್ರೀಮಾನ್ ಕದಂ ಅವರ ಬಗ್ಗೆ ನನಗೆ ವಿಶೇಷ ಗೌರವವುಂಟು. ಅವರು ಒಳ್ಳೆಯ ಸಮಾಜ ಕಾರ್ಯಕರ್ತರು. ಹಳ್ಳಿಗಾಡಿನ ಜನರಿಗಾಗಿ ಅವರು ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಆದ್ದರಿಂದಲೇ ರೀ ಆರ್ಗನೈಜೇಷನ್ ಆದಮೇಲೆ ಕೂಡ 1962ರ ಚುನಾವಣೆಯಲ್ಲಿ ಮತ್ತು 1967ನೇ ಇಸವಿಯಲ್ಲಿ ನಡೆದ ಚುನಾವಣೆಯಲ್ಲಿ ಈ ವಿಧಾನಸಭೆಗೆ ಚುನಾಯಿತರಾಗಿದ್ದಾರೆ. ಈ ರೀತಿ ಅವರು ಈ ಸಭೆಗೆ ಆರಿಸಿ ಬಂದಿರುವುದು ಹಳ್ಳಿಗಾಡಿನ ಜನರಲ್ಲಿ ಸಂಪರ್ಕವನ್ನು ಇಟ್ಟುಕೊಂಡು, ಹಳ್ಳಿಗಾಡಿನ ಜನರಿಗಾಗಿ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿ ಕನ್ನಡ ಜನರ ಒಲವಿನ ಮೇರೆಗೇ ವಿನಾ ಭಾಷೆಯ ಆಧಾರದ ಮೇಲಲ್ಲ. ಈ ದೃಷ್ಟಿಯಿಂದ ಶ್ರೀ ಕದಂ ಅವರು ಒಳ್ಳೆಯ ಸಮಾಜ ಕಾರ್ಯಕರ್ತರಾಗಿ ಜನರ ಪ್ರೀತಿಯನ್ನು ಗಳಿಸಿಕೊಂಡು ಅದರ ಮೇಲೆ ಅವರು ಈ ಸಭೆಗೆ ಆರಿಸಿ ಬಂದಿದ್ದಾರೆಯೇ ವಿನಾ ಮಹಾರಾಷ್ಟ್ರ ಏಕೀಕರಣ ಸಮಿತಿಯಿಂದ ಆರಿಸಿ ಬಂದಿಲ್ಲ. ಅವರು ಒಳ್ಳೆಯ ಅಡ್ವೋಕೇಟರು. ಅವರು ಮಹಾರಾಷ್ಟ್ರ ಏಕೀಕರಣ ಸಮಿತಿಯ ಸಂಪರ್ಕವನ್ನು ಇಟ್ಟುಕೊಂಡು ಮರಾಠಿ ಭಾಗಗಳು ಮತ್ತು ಮರಾಠಿ ಭಾಷೆಯ ಪರವಾಗಿ ವಾದ ಮಾಡಿದ್ದಾರೆ.

Sri B. B. SAYANAK (Belgaum).—I want to know whether the Hon'ble Member is talking about Mahajan Report or about Kadam Report.

ಉಪಾಧ್ಯಕ್ಷರು.—ರಿಪೋರ್ಟಿನ ವಿಷಯದಲ್ಲಿ ಹೇಳಿ.

ಶ್ರೀ ಎಂ. ಎಂ. ಜಾಲಿಸಟಗಿ.—ಮಹಾಜನ್ ಕಮಿಷನ್ನಿನ ಬಗ್ಗೆಯೇ ನಾನು ಹೇಳುತ್ತಿದ್ದೇನೆ. ನಮ್ಮ ಮಾನ್ಯ ಮಿತ್ರರು ಕೊಂಕಣಿ ಮರಾಠಿಯ ಉಪಭಾಷೆ ಎಂದು ಹೇಳಿದರು. ಕೊಂಕಣಿ ಮರಾಠಿಯ ಉಪಭಾಷೆಯಲ್ಲ. ಇದನ್ನು ನಾನು ಹಿಂದೆಯೇ ಸಿದ್ಧಮಾಡಿ ತೋರಿಸಿದ್ದೇನೆ. ಒಬ್ಬರು ಮೇಲ್ಮನೆಯ ಸದಸ್ಯರು ಕೊಂಕಣಿ ಮರಾಠಿಯ ಉಪಭಾಷೆ ಎಂದು ಹೇಳಿದ್ದಾರೆಂದು ಗೊತ್ತಾಯಿತು. ಅದು ಅವರ ಅಜ್ಞಾನವನ್ನು ತೋರಿಸುತ್ತದೆ. ಅವರು ನನ್ನ ಸಂಗಡ ಬರಲಿ ಕೊಂಕಣಿ ಮರಾಠಿಯ ಉಪಭಾಷೆಯಲ್ಲ ಎಂಬುದನ್ನು ಅವರಿಗೇ ತೋರಿಸುತ್ತೇನೆ. ಕೊಂಕಣಿ ಸ್ವತಂತ್ರ ಭಾಷೆ. ಮಹಾಜನ್ ಅವರೂ ಸಹ ತಮ್ಮ ವರದಿಯಲ್ಲಿ ಕೊಂಕಣಿ ಮರಾಠಿಯ ಉಪಭಾಷೆಯಲ್ಲ ಎಂದು ಹೇಳಿದ್ದಾರೆ. ಮತ್ತು ಇನ್ನೂ ಅನೇಕ ತಜ್ಞರು ಕೊಂಕಣಿ ಮರಾಠಿಯ ಉಪಭಾಷೆಯಲ್ಲ ಎಂದು ಹೇಳಿದ್ದಾರೆ. ಕೊಂಕಣಿ ಮರಾಠಿಯ ಉಪಭಾಷೆ ಎಂದು ಹೇಳಿದ ನಮ್ಮ ಮಿತ್ರರು ಕೊಂಕಣಿ ಮರಾಠಿಯ ಉಪಭಾಷೆಯಲ್ಲ ಎಂದು ಹೇಳಿ ಬರೆದಿರತಕ್ಕ ಪುಸ್ತಕಗಳನ್ನು ಓದಲಿ ಎಂದು ನಾನು ವಿನಂತಿಸಿಕೊಳ್ಳುತ್ತೇನೆ.

ನಾನು ಚುನಾವಣೆಯಲ್ಲಿ ಗೆದ್ದಿರುವುದರಿಂದ ಕಾರವಾರ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಶ್ರೀ ಕದಂ ಅವರು ಹೇಳುವುದು ಸರಿಯಲ್ಲ. ಆ ರೀತಿ ನೋಡುವುದಾದರೆ ನಮ್ಮ ನಾಡಕರ್ಣಿಯವರು ಸಹ ಕೊಂಕಣಿಯವರೆ, ಅವರು ಚುನಾವಣೆಯಲ್ಲಿ ಆರಿಸಿ ಬಂದಿರುವುದು ಜನಸೇವೆಯ ಮೂಲಕವೇ ಹೊರತು ಕೊಂಕಣಿ ಭಾಷೆ ಮಾತನಾಡುವ ಜನರ ಸಹಾಯದಿಂದ ಅಲ್ಲ. ಏಕೆಂದರೆ ಆ ಭಾಗದಲ್ಲಿ ಕೊಂಕಣಿ ಮಾತನಾಡುವವರು 5 ಸಾವಿರ ಮಾತ್ರ ಇದ್ದಾರೆ. ನಮ್ಮ ನಾಡಕರ್ಣಿಯವರು 6 ಸಾವಿರ ಬಹುಮತದಿಂದ ಆರಿಸಿ ಬಂದಿದ್ದಾರೆ. ಅವರು ಮಾಡತಕ್ಕಂಥ ಜನಸೇವೆಯನ್ನು ಅಲ್ಲಿಯ ಜನರು ಮೆಚ್ಚಿಕೊಂಡಿದ್ದಾರೆ. ಆ ಪ್ರದೇಶದಲ್ಲಿ ಕನ್ನಡ ಮಾತನಾಡುವ ಜನರಿಗೂ ಕೊಂಕಣಿ ಮಾತನಾಡುವ ಜನರಿಗೂ ದ್ವೇಷವಿಲ್ಲ. ನಾನು ಆರಿಸಿ ಬಂದಿರುವ ಬಟ್ಕಲ್ ಕ್ಷೇತ್ರದಲ್ಲಿ ಕನ್ನಡ ಮಾತನಾಡುವ ಜನರು ಹೆಚ್ಚು ಇದ್ದಾರೆ. ಕೊಂಕಣಿ ಮಾತನಾಡುವವರು ಬಹಳ ಕಡಿಮೆ ಇದ್ದಾರೆ. ನನ್ನನ್ನು ಅಲ್ಲಿಯ ಜನರು ಆರಿಸಿರುವುದು ನಾನು ಕಳೆದ 36 ವರ್ಷದಿಂದ ಆ ಕ್ಷೇತ್ರದಲ್ಲಿ ಜನಸೇವೆ ಮಾಡುತ್ತಿರುವುದರಿಂದಲೇ ಹೊರತು, ನಾನು ಕೊಂಕಣಿ ಭಾಷೆ ಮಾತನಾಡುವವನು ಎಂದು ಅಲ್ಲ. ನನ್ನ ಕ್ಷೇತ್ರದಲ್ಲಿ 90 ಪರ್‌ಸೆಂಟ್ ಕನ್ನಡದವರು ಇದ್ದಾರೆ, ಕೇವಲ 10 ಪರ್‌ಸೆಂಟ್ ಕೊಂಕಣಿಯವರು ಇದ್ದಾರೆ. ಇಲ್ಲಿ ಭಾಷೆಯ ಪ್ರಶ್ನೆ ಬರುವುದಿಲ್ಲ. ಯಾರು ಜನಸೇವೆಯನ್ನು ಚೆನ್ನಾಗಿ ಮಾಡುತ್ತಾರೋ, ಅಂತಹವರು ಚುನಾವಣೆಯಲ್ಲಿ ಆರಿಸಿ ಬರುತ್ತಾರೆ. ಆದ್ದರಿಂದ ಮಾನ್ಯ ಕದಂ ಅವರು ಹೇಳುವುದರಲ್ಲಿ ಯಾವ ಅರ್ಥವೂ ಇಲ್ಲ. ಸೂಪ, ಹಲಿಯಾಳ ಮತ್ತು ಕಾರವಾರದಲ್ಲಿ

ಮರಾಠಿಗರೇ ಹೆಚ್ಚು ಎಂದು ಶ್ರೀ ಕದಂ ಅವರು ಹೇಳುವುದು ಸರಿಯಲ್ಲ. ಅಲ್ಲಿಯ ಜನ ಮಾತನಾಡುವ ಕೊಂಕಣಿಗೂ ಮರಾಠಿಗೂ ಯಾವ ಸಂಬಂಧವೂ ಇಲ್ಲ. ನನ್ನ ಕ್ಷೇತ್ರದಲ್ಲಿರುವ ಜನಸಂಖ್ಯೆ 515,753. ಇದರಲ್ಲಿ ಕನ್ನಡ ಮಾತನಾಡುವವರು 2,83,024. ಕೊಂಕಣಿ ಮಾತನಾಡುವವರು 1,53,732; ಮರಾಠಿ ಮಾತನಾಡುವವರು ಕೇವಲ 5,218.

ಶ್ರೀ ಬಿ. ಪಿ. ಕದಂ.—ನಾನು ಸಹ ವಿವರಗಳನ್ನು ಕೊಡುತ್ತೇನೆ.

ಶ್ರೀ ಎಂ.ಎಂ. ಜಾಲಿಸಟಗಿ.—ತಮ್ಮ ಎಲ್ಲಾ ಅಂಕಿ ಅಂಶಗಳನ್ನೂ ಮಹಾಜನ್ ಕಮಿಷನ್ ತಮ್ಮ ಮುಂದೆ ಇಟ್ಟಿದ್ದೀರಿ. ಆ ಆಧಾರದ ಮೇಲೆ ಅವರು ತಮ್ಮ ತೀರ್ಪನ್ನು ಕೊಟ್ಟಿದ್ದಾರೆ. ಇನ್ನು ಹಲಿಯಾಳ ಕ್ಷೇತ್ರದಲ್ಲಿ ಕೂಡ ಕೊಂಕಣಿ ಮತ್ತು ಕನ್ನಡ ಮಾತನಾಡುವವರೇ ಜಾಸ್ತಿ ಇದ್ದಾರೆ. ಶ್ರೀ ಕದಂ ಅವರು 1931ನೇ ಇಸವಿಯ ಜನಗಣತಿ ಆಧಾರದಮೇಲೆ ಮರಾಠಿ ಮಾತನಾಡುವವರು ಜಾಸ್ತಿ ಇದ್ದಾರೆಂದು ಹೇಳುತ್ತಿದ್ದಾರೆ. ಇವತ್ತಿನ ದಿವಸ ಕಾರವಾರದಲ್ಲಿ ಕೂಡ ಎಲ್ಲಾ ವ್ಯವಹಾರಗಳೂ ಕನ್ನಡದಲ್ಲಿಯೇ ನಡೆಯುತ್ತಿದೆ. ಇದು ಶ್ರೀ ಕದಂ ಅವರಿಗೂ ಗೊತ್ತು. ಏಕೆಂದರೆ ಅವರು ಸಹ ವಕೀಲರಾಗಿದ್ದಾರೆ. ಎಲ್ಲಾ ಕೋರ್ಟುಗಳಲ್ಲೂ ಸಹ ಕನ್ನಡದಲ್ಲಿ ವ್ಯವಹಾರ ನಡೆಯುತ್ತಿದೆ. ಮರಾಠಿಯಲ್ಲಿ ವ್ಯವಹರಿಸುವುದಕ್ಕೆ ಅವಕಾಶವಿದ್ದರೂ ಸಹ, ಸರ್ಕಾರದವರು ಅನುಮತಿ ಕೊಟ್ಟಿಲ್ಲ. ಕಾರವಾರದ ಬಾರ್ ಅಸೋಷಿಯೇಷನ್ ಅವರು ಹಲಿಯಾಳದ ಬಾರ್ ಅಸೋಷಿಯೇಷನ್ ಅವರು ಒಂದು ನಿರ್ಣಯಮಾಡಿ ಕಳಿಸಿದ್ದಾರೆ; ಏನೆಂದರೆ, ಕಾರವಾರ ಮೈಸೂರಿನಲ್ಲೇ ಇರಬೇಕೆಂದು. ಇದೇ ರೀತಿ ಅನೇಕ ಸಂಘ ಸಂಸ್ಥೆಗಳೂ ಸಹ ಕಾರವಾರವನ್ನು ಮಹಾರಾಷ್ಟ್ರಕ್ಕೆ ಸೇರಿಸಬಾರದೆಂದು, ಕರ್ನಾಟಕದಲ್ಲೇ ಇರಬೇಕೆಂದು ನಿರ್ಣಯ ಮಾಡಿ ಸರ್ಕಾರಕ್ಕೆ ಕಳಿಸಿದ್ದಾರೆ. ಏಕೆಂದರೆ ಸೂಪ, ಹುಲಿಯಾಳ, ಕಾರವಾರದ ವ್ಯವಹಾರವೆಲ್ಲಾ ಹುಬ್ಬಳ್ಳಿ, ಧಾರವಾಡದೊಡನೆ ನಡೆಯುತ್ತಿದೆಯೇ ಹೊರತು ಮಹಾರಾಷ್ಟ್ರದೊಡನೆ ನಡೆಯುತ್ತಿಲ್ಲ. ಕಾರವಾರವನ್ನು ಮಹಾರಾಷ್ಟ್ರಕ್ಕೆ ಸೇರಿಸಲಿಲ್ಲವೆನ್ನುವ ಕಾರಣದಿಂದ ಅಲ್ಲಿಯ ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟ್ ಅವರು ಯಾವ ಮೀಟಿಂಗ್‌ಗಳನ್ನೂ ಸಹ ಕರೆಯುತ್ತಿಲ್ಲ. ಕಾರವಾರದಲ್ಲಿ ಉತ್ತಮ ರೀತಿಯ ಬಂದರು ಇದೆ. ಇಲ್ಲಿಗೆ ರೈಲ್ವೆ ಸಂಪರ್ಕವನ್ನು ಏರ್ಪಡಿಸಿದರೆ ವ್ಯಾಪಾರಕ್ಕೆ ಇನ್ನೂ ಹೆಚ್ಚಿನ ಅನುಕೂಲವಾಗುತ್ತದೆಂದು ತಜ್ಞರ ಅಭಿಪ್ರಾಯವಿದೆ. ನಮ್ಮ ಉತ್ತರ ಕರ್ನಾಟಕ ಜಿಲ್ಲೆ ಮೊದಲು ಬೊಂಬಾಯಿ ಪ್ರಾಂತ್ಯದಲ್ಲಿತ್ತು. ಆಗಿನ ಕಾಲಕ್ಕೆ ಮಹಾರಾಷ್ಟ್ರದವರು ನಮ್ಮ ಜಿಲ್ಲೆಗೆ ಬಹಳ ಅನ್ಯಾಯ ಮಾಡಿದ್ದಾರೆ. ಸುಮಾರು 90 ಭಾಗ ನಮ್ಮಲ್ಲಿ ಕಾಡಿದೆ. ಯಾವ ಅಭಿವೃದ್ಧಿ ಕಾರ್ಯಗಳನ್ನೂ ಸಹ ಅವರು ಮಾಡಿಲಿಲ್ಲ. ಮೊದಲು ನಮ್ಮ ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ಉತ್ತಮವಾದ ಹಾಲು, ಬೆಣ್ಣೆ ಮತ್ತು ತುಪ್ಪ ಸಿಗುತ್ತಿತ್ತು. ಮುಂಬಯಿ ಸರ್ಕಾರದಲ್ಲಿ ನಮ್ಮ ಜಿಲ್ಲೆ ಇದ್ದಾಗ, ಆ ಸರ್ಕಾರದವರು ಒಂದು ಕೆಟ್ಟ ಧೋರಣೆಯಿಂದ ನಮ್ಮಲ್ಲಿ ಇದ್ದಂಥ ಕವಾಡಿಗರನ್ನು ಹಳೆಯ ಮೈಸೂರಿಗೆ ಓಡಿಸಿದರು. ಈಗ ನಮಗೆ ಹಾಲು, ಬೆಣ್ಣೆ, ತುಪ್ಪ ಯಾವುದೂ ಸಹ ಸರಿಯಾಗಿ ಸಿಗುತ್ತಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಹೆಂಡ ಸಿಗುತ್ತದೆಯೆ ?

ಶ್ರೀ ಎಂ. ಎಂ. ಜಾಲಿಸಟಗಿ.—ಮೊದಲು ನಮ್ಮಲ್ಲಿ ಐದು ಸಾವಿರ ಎಕರೆಯಷ್ಟು ತೆಂಗಿನ ತೋಟವಿತ್ತು. ಅದನೆಲ್ಲಾ ಮುಂಬೈ ಸರ್ಕಾರದವರು ಸರಿಯಾಗಿ ನೋಡಿಕೊಳ್ಳದೆ ಎಲ್ಲಾ ಕಾಡು ಮಾಡಿಬಿಟ್ಟರು. ಇದರಿಂದ ನಮ್ಮ ಕಷೆಯ ಗಂಡಸರೆಲ್ಲಾ ಬಸರಾದರು. 1945ನೇ ಇಸವಿಯಿಂದ ಇದುವರೆಗೆ ಅನೇಕ ಕೊಂಕಣೀ ಸಮ್ಮೇಳನಗಳು ನಡೆದಿವೆ. ಮುಂಬೈನಲ್ಲಿ ಕೊಂಕಣಿ ಪರಿಷತ್‌ನವರು ಒಂದು ಕಾನ್‌ಫರೆನ್ಸ್ ಮಾಡಿದರು. ವಾದಕ್ಕೆ ವಾದ ಎನ್ನುವಂತೆ ಮಾನ್ಯ ಕದಂ ಅವರು ಅದನ್ನು ಪೇಪರ್ ಕಾನ್‌ಫರೆನ್ಸ್ ಎಂದು ಹೇಳಿದರು. ಬೆಂಗಳೂರಿನಲ್ಲಿ ಬೇಕಾದರೆ ಒಂದು ಕೊಂಕಣಿ ಪರಿಷತ್ತನ್ನು ಏರ್ಪಡಿಸಲಿ, ಅಲ್ಲಿ ಶ್ರೀ ಕದಂ ಅವರು ಕೊಂಕಣಿ ಸ್ವತಂತ್ರ ಭಾಷೆ ಎಂದು ಹೇಳುತ್ತಾರೋ ಅಥವಾ ಕೊಂಕಣಿ ಮತ್ತು ಮರಾಠಿ ಭಾಷೆ ಎರಡೂ ಒಂದೇ ಎಂದು ಹೇಳುತ್ತಾರೋ ನೋಡೋಣ. ಅಧಿಕಾರಿ ವರ್ಗದವರು ಕಾಂಗ್ರೆಸ್ಸಿನವರ ಸಮ್ಮತಿ ತೆಗೆದುಕೊಂಡು ಕಾರವಾರ ಬಂದರು ಅಭಿವೃದಿ ಕಾರ್ಯ, ಹುಬ್ಬಳ್ಳಿ-ಕಾರವಾರ ರೈಲ್ವೆ ಲೈನ್ ರಚನೆ ಬಗ್ಗೆ ಒತ್ತಾಯ ಮಾಡಬೇಕು. ಹೊಸಪೇಟೆಯಿಂದ ಕಬ್ಬಿಣ ಅದಿರು ಮದ್ರಾಸಿಗೆ ಹೋಗುತ್ತದೆ. ಹಾಗೂ ಬೇರೆ ಕಡೆ ಹೋಗುತ್ತದೆ. ಹುಬ್ಬಳ್ಳಿ, ಕಾರವಾರ ರೈಲ್ವೆ ಲೈನ್ ಹಾಕಿದರೆ ಅನುಕೂಲವಾಗುತ್ತದೆ ಆದುದರಿಂದ ಕಾರವಾರ ಬಂದರನ್ನು ಸರ್ವ ಋತು ಬಂದರನ್ನಾಗಿ ಮಾಡಬೇಕು ಎಂದು ಹೇಳುತ್ತೇನೆ. ಕಾರವಾರದ ಹಿನ್ನೆಲೆ ಪ್ರದೇಶ ಅಭಿವೃದ್ಧಿ ಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಕಾರವಾರ-ಸೂಪಾ ಪ್ರದೇಶಕ್ಕೆ ಲಕ್ಷ್ಯ ಕೊಡಬೇಕು. ಆದಷ್ಟು ಬೇಗ ಹುಬ್ಬಳ್ಳಿ-ಕಾರವಾರ ರೈಲ್ವೆ ಲೈನ್ ರಚನೆ ಮಾಡುವುದು, ಕಾರವಾರ ಬಂದರನ್ನು ಉತ್ತಮ ಬಂದರನ್ನಾಗಿ ಅಭಿವೃದ್ಧಿಗೊಳಿಸಿ ಕೆಲಸ ಮಾಡುವುದಕ್ಕೆ ಲಕ್ಷ್ಯ

(ಶ್ರೀ ಎಂ. ಎಂ. ಜಾಲಸಟಗಿ)

ಕೊಡಬೇಕು ಎಂದು ಮತ್ತೊಮ್ಮೆ ಹೇಳುತ್ತೇನೆ. ಇಲ್ಲದಿದ್ದರೆ ಈ ಪ್ರದೇಶ ನಮ್ಮ ಕೈ ಬಿಟ್ಟು ಹೋಗುವ ಸಂದರ್ಭ ಬರಬಹುದು. ಮಹಾಜನ್ ಕಮಿಷನ್ ರಿಪೋರ್ಟ್‌ಗೆ ಫೈನಾಲಿಟಿ ಕೊಡುವ ಬಗ್ಗೆ ಈಗಿನಿಂದಲೇ ಇವರು ಪ್ರಯತ್ನ ಮಾಡಬೇಕು. ಸಮಗ್ರ ಕನ್ನಡ ನಾಡಿನ ಹಿತ ದೃಷ್ಟಿಯಿಂದ ಇದನ್ನು ವಿಚಾರ ಮಾಡಬೇಕು ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

Sri B. P. KADAM.—I just want two clarifications from the hon'ble member. If Maharashtra State is bad, why, after the Reorganisation of States, my hon'ble friend has sent his yonger brother for employment there? Is it not a fact that the hon'ble member was a Congress party member and just prior to the elections shifted on to Opposition?

† ಶ್ರೀ ಪಿ. ವೆಂಕಟಗಿರಿಯಪ್ಪ.—ಈ ಸಭೆಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರು ಕಳೆದ ಹತ್ತು ವರ್ಷಗಳಿಂದ ಮಹಾರಾಷ್ಟ್ರಕ್ಕೆ ಅನ್ಯಾಯವಾಗಿದೆ ಅವರು ಬೇಡುವ ಪ್ರದೇಶವನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂದು ಚಳವಳಿ ನಡೆಸುತ್ತಾ ಬಂದಿದ್ದಾರೆ. ಈ ಚಳವಳಿಯಲ್ಲಿ ಅವರಿಗೆ ಶ್ರದ್ಧೆ ಸಹಾನುಭೂತಿ ಇದ್ದಿತು ಈ ಸಭೆಗೆ ಐದಾರು ಜನ ಸದಸ್ಯರು ಆರಿಸಿ ಬಂದಿದ್ದರು. ಮಹಾರಾಷ್ಟ್ರದವರಿಗೆ ಈ ಸಮಿತಿಯ ಬಗ್ಗೆ ಆಶೆ ಇದ್ದಿತು. ಈ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದು ಎಂದು ಸಲಹೆ ಮಾಡಿದ್ದರು. ಮಹಾಜನ್ ಕಮಿಷನ್ ರಚನೆ ಮಾಡಬೇಕು ಎಂದು ಮಹಾರಾಷ್ಟ್ರ ಏಕೀಕರಣ ಸಮಿತಿ ಸರಕಾರದ ಮೇಲೆ ಒತ್ತಾಯಪಡಿಸಿದ ಮೂಲಕ ಈ ಸಮಿತಿ ರಚನೆಯಾಯಿತು. ಈ ಸಮಿತಿ ರಚನೆಯಾದಮೇಲೆ ಕೂಡ ತೀರ್ಮಾನ ಕೊಟ್ಟ ಮೇಲೆ ಈ ಸಮಸ್ಯೆ ಬಗೆಹರಿಯುತ್ತದೆ ಎಂದು ಬಹಳ ಆತುರದಿಂದ ಇದ್ದರು. ಆದರೆ ಈ ಸಮಿತಿಯ ಅಧ್ಯಕ್ಷರಾದ ಮಹಾಜನ ಅವರು ಯಾವ ಪಕ್ಷಕ್ಕೂ ಸೇರಿದವರು ಅಲ್ಲ. ಇವರು ಶ್ರೇಷ್ಠ ನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಾಧೀಶರು ಆಗಿದ್ದರಿಂದ ಅವರ ಬಗ್ಗೆ ಯಾರಿಗೂ ಏನೂ ಹೇಳುವುದಕ್ಕೆ ಅವಕಾಶ ವಿಲ್ಲ ಎನ್ನುಕ್ಕಂಥ ವ್ಯಕ್ತಿ ಎಂದು ಕಮಿಷನ್ ನೇಮಕ ಮಾಡಿದರು. ಅವರು ತೀರ್ಮಾನ ಕೊಡುವವರೆಗೆ ಕೂಡ ಮಹಾರಾಷ್ಟ್ರ ಸರಕಾರ ಏಕೀಕರಣ ಸಮಿತಿ ಅವರ ತೀರ್ಮಾನವನ್ನು ಒಪ್ಪಿಕೊಳ್ಳುವುದಕ್ಕೆ ಒತ್ತಾಯ ಪಡಿಸುತ್ತಿದ್ದರು. ಒಪ್ಪಿಕೊಳ್ಳಲೇ ಬೇಕು, ಇದು ಕಡೇ ತೀರ್ಮಾನ ಎಂದು ಅವರು ಮಾತನಾಡಿದ ಬಗ್ಗೆ ಆಧಾರ ಇವೆ. ಈಗ ಸಮಿತಿಯ ತೀರ್ಮಾನ ಬಂದಮೇಲೆ ಅವರು ಕೇಳಿದ್ದೆಲ್ಲಾ ಸಿಕ್ಕಲಿಲ್ಲ ಎಂದು ಈ ಸಮಸ್ಯೆಯನ್ನು ಜೀವಂತ ಇಡಲು ಪ್ರಯತ್ನ ಮಾಡುವುದು ನಿಜವಾಗಿಯೂ ಜನತೆಗೆ ಉಪಕಾರ ಮಾಡಿದಂತೆ ಆಗುವುದಿಲ್ಲ ಎಂಬುದನ್ನು ಮಹಾರಾಷ್ಟ್ರದ ಜನತೆಗೆ ಏಕೀಕರಣ ಸಮಿತಿಗೆ ಈ ಸಂದರ್ಭದಲ್ಲಿ ತಿಳಿಸಲು ಬಯಸುತ್ತೇನೆ. ಈ ಬೌಂಡರಿ ಸಮಸ್ಯೆಯನ್ನು ಅನಾವಶ್ಯಕ ವಾಗಿ ದೊಡ್ಡದು ಮಾಡಿ, ನಿಜವಾಗಿಯೂ ಇಂದು ಜನತೆಗೆ ಮೂಲಭೂತವಾಗಿ ಬೇಕಾಗಿರತಕ್ಕಂಥ ಅವಶ್ಯಕವಾಗಿರುವ ಅನ್ನ ಬಟ್ಟೆ ವಸತಿ ಜನಗಳಿಗೆ ಒದಗಿಸಿಕೊಡುವುದಕ್ಕೆ ಗಮನ ಕೊಡದೆ ಆ ಸಣ್ಣ ಸಮಸ್ಯೆಯ ಬಗ್ಗೆ ಮನಸ್ಸು ತೊಡಗಿಸುತ್ತಿರುವುದು ಇದೊಂದು ದೊಡ್ಡ ಅಪಾಯವಾಗಿದೆ. ಇದರಿಂದ ಯಾರಿಗೂ ಯಾವ ಪ್ರಯೋಜನವಿಲ್ಲ. ಯಾವುದೇ ಕಮಿಷನ್ ಇರಲಿ ಯಾವುದೇ ತೀರ್ಮಾನ ಮಾಡಿ ದರೂ ಕೂಡ ಮಹಾರಾಷ್ಟ್ರದವರು ಬೇಡುವ ಎಲ್ಲವನ್ನೂ ಮಹಾರಾಷ್ಟ್ರಕ್ಕೆ ಸೇರಿಸಲು ಸಾಧ್ಯವಿಲ್ಲ. ಬೌಂಡರಿ ಪ್ರದೇಶದಲ್ಲಿ ಯಾವಾಗಲೂ ಉಭಯ ಭಾಷೆ ಮಾತನಾಡತಕ್ಕಂಥವರು ಇರಲೇಬೇಕು. ಮೂವತ್ತು ನಾಲ್ವತ್ತು ಮೈಲಿ ಗಡಿ ಪ್ರದೇಶದಲ್ಲಿ ಇರತಕ್ಕ ಹಳ್ಳಿಗಳಲ್ಲಿ ಉಭಯ ಭಾಷೆ ಮಾತನಾಡ ತಕ್ಕಂಥ ಜನ ಇರಲೇ ಬೇಕು. ಕೋಲಾರ ಜಿಲ್ಲೆಯ ಪ್ರದೇಶ ತೆಗೆದುಕೊಂಡರೆ ಅಲ್ಲಿ ತೆಲುಗು ಮಾತ ನಾಡುವವರು ಕನ್ನಡ ಮಾತನಾಡುವವರು ಈ ಕಡೆ ನಮ್ಮ ಗಡಿಯಲ್ಲಿಯೂ ಇದ್ದಾರೆ, ಅತ್ತ ಕಡೆ ಆಂಧ್ರದಲ್ಲಿಯೂ ಇದ್ದಾರೆ. ಈ ಬಗ್ಗೆ ಪೂರ್ಣವಾಗಿ ತೀರ್ಮಾನ ಮಾಡಲು ಇದೇನು ಪಾಕಿಸ್ತಾನ ಹಿಂದುಸ್ತಾನ ಪಾಪ್ಯುಲೇಷನ್ ಮೇಲೆ ವಿಭಾಗ ಮಾಡತಕ್ಕದ್ದೇ? ಮಹಾರಾಷ್ಟ್ರ ಗಡಿ, ಕನ್ನಡ ನಾಡಿನ ಗಡಿ, ಅದನ್ನು ಇದಕ್ಕೆ ಸೇರಿಸಬೇಕು ಇದನ್ನು ಅದಕ್ಕೆ ಸೇರಿಸಬೇಕು, ಎರಡೂ ಬೇರೆ ಬೇರೆ ಎಂದು ಹೇಳತಕ್ಕಂಥ ಅಪಾಯದ ಪರಿಸ್ಥಿತಿ ಒದಗುತ್ತದೆ. ನನಗೆ ಅನಿಸುತ್ತದೆ ಮಹಾರಾಷ್ಟ್ರದವರ ಮೊಂಡುತನ, ನಾಯಕರ ಅವಿವೇಕದಿಂದ ಇದಕ್ಕೆ ಬೆಂಬಲ ದೊರೆತಿದೆ. ಕನ್ನಡ ಜನರಮೇಲೆ ದಕ್ಷಿಣ ಹಿಂದುಸ್ಥಾನದವರ ಮೇಲೆ ದ್ವೇಷವನ್ನು ಎತ್ತಿ ಕಟ್ಟುವುದಕ್ಕೆ ಮಹಾರಾಷ್ಟ್ರದಲ್ಲಿ ಶಿವಸೇನೆ ಚಳವಳಿ ನಡೆಯುತ್ತಿದೆ. ಈ ಚಳವಳಿ ಇದೇ ರೀತಿ ಮುಂದುವರೆದರೆ ಬರೀ ಮಹಾರಾಷ್ಟ್ರ ಮೈಸೂರಿಗೆ ಅಷ್ಟೇ ಅಲ್ಲ ಇಡೀ ಹಿಂದುಸ್ಥಾನದ ಐಕ್ಯತೆಗೆ ಭಂಗ ಬರುವ ಪರಿಸ್ಥಿತಿ ಬರುತ್ತದೆ. ಕೇಂದ್ರ ಸರಕಾರ ಬರೀ ಹೆದರಿಕೆಯಿಂದ ಮತ್ತು ತಮ್ಮ ತಮ್ಮ ರಾಜಕೀಯ ಸ್ಥಾನಮಾನ ಉಳಿಸಿ

ಕೊಳ್ಳಲಿಕ್ಕೆ ಮಹಾರಾಷ್ಟ್ರದ ನಾಯಕರು ಅಡಿದಂಥ ಮಾತಿಗೆ ಬೆಲೆ ಕೊಡುವ ಒಂದು ನಿರ್ದಿಷ್ಟ ಧೋರಣೆ ಅನುಸರಿಸುತ್ತಿದ್ದಾರೆ. ಚವಾಣರು ಕೇವಲ ಮಹಾರಾಷ್ಟ್ರದವರ ಮಂತ್ರಿಯಲ್ಲ ಅವರು ಕೇಂದ್ರದ ಗೃಹ ಮಂತ್ರಿಗಳು ಎಂಬುದನ್ನು ಮರೆಯಬಾರದು ಎಂದು ತಿಳಿಸಲು ಬಯಸುತ್ತೇನೆ. ಚವಾಣರಿಗಿಂತ ಕೇಂದ್ರ ಸರಕಾರ ಹೆಚ್ಚಿನದಾಗಿದೆ. ಕೇಂದ್ರ ಸರಕಾರದ ಅಶಕ್ತತೆಯಿಂದ ಚವಾಣರು ಇಂಥ ನೀತಿ ಅನುರಿಸುತ್ತಿದ್ದಾರೆ ಇಂಥ ಅನೀತಿ ದೋರಣೆ ಅವರು ಅನುಸರಿಸಿದರೆ ನಮ್ಮ ರಾಷ್ಟ್ರದ ಬೌಂಡರಿ ಪ್ರದೇಶ ಸುರಕ್ಷಿತವಾಗಿ ಉಳಿಯಲಾರದು. ನಮ್ಮ ಕೈ ಬಿಟ್ಟು ಹೋಗುತ್ತದೆ. ಯಾಕೆಂದರೆ ಚವಾಣರು ಅಧಿಕಾರದಲ್ಲಿದ್ದಾರೆ. ಹೊಸ ಹೊಸ ಸಮಸ್ಯೆಗಳು ಉದ್ಭವಿಸುತ್ತಿವೆ. ಬೌಂಡರಿ ವಿಷಯದಲ್ಲಿ ಮಹಾಜನ ಕಮಿಷನ್ ರಿಪೋರ್ಟ್‌ಗಿಂತಲೂ ಒಳ್ಳೆಯ ದಿಪೋರ್ಟ್ ತಯಾರು ಮಾಡಲಿಕ್ಕಾಗುವುದಿಲ್ಲ. ಈ ಮೊದಲು ಎಷ್ಟೋ ಕಮಿಷನ್ನುಗಳು ನೇಮಕವಾಗಿವೆ. ಎಷ್ಟೋ ಕಮಿಷನ್ನುಗಳು ಅದರೂ ಕೂಡ ಎಲ್ಲರಿಗೂ ಸಮಾಧಾನವಾಗುವ ರೀತಿಯಲ್ಲಿ ತೀರ್ಮಾನ ಕೊಡಲು ಸಾಧ್ಯವಾಗಿಲ್ಲ. ಎಲ್ಲ ರೀತಿಯಿಂದ ಮೈಸೂರು ರಾಜ್ಯಕ್ಕೆ ಹಾನಿಯಾಗಿದೆ. ನಿಪ್ಪಾಣಿಯಂಥ ಭಾರಿ ವ್ಯಾಪಾರದ ಕೇಂದ್ರವಾಗಿರುವ ಪಟ್ಟಣ ಮಹಾರಾಷ್ಟ್ರಕ್ಕೆ ಹೋಗಲಿದೆ. ಮಹಾಜನ್ ಕಮೀಷನ್ ವರದಿಯನ್ನು ಒಪ್ಪಿಕೊಳ್ಳುವಾಗ ನಮ್ಮ ಸರಕಾರ ಇದು ಅಂತಿಮವಾಗಿ ತೀರ್ಮಾನವಾಗಲಿ, ಈ ಜಗಳ ಕೊನೆಯಾಗಲಿ ಎಂಬ ದೃಷ್ಟಿಯಿಂದ ಒಪ್ಪಿಕೊಂಡಿದ್ದಾರೆ. ಅದೇ ರೀತಿ ಮಹಾರಾಷ್ಟ್ರದವರೂ ಸಹ ಒಪ್ಪಿಕೊಳ್ಳಬೇಕು ಎಂದು ಒತ್ತಾಯ ಪೂರ್ವಕ ಕೇಳಿಕೊಳ್ಳುತ್ತೇನೆ. ಒಂದು ವೇಳೆ ಅವರು ಒಪ್ಪಿಕೊಳ್ಳದಿದ್ದರೆ ಶ್ರೀಮಾನ್ ಜತ್ತಿಯವರು ಮಂಡಿಸಿದ ನಿರ್ಣಯ ನಾನು ಕಳಿಸಿದ ತಿದ್ದುಪಡಿಯನ್ನು ಸಹ ಈ ಸಭೆ ಒಪ್ಪಿಕೊಳ್ಳಬೇಕಾಗಿಲ್ಲ. ಮೊದಲು ಬೌಂಡರಿ ಹೇಗೆ ಇತ್ತೋ ಹಾಗೇ ಇರಲಿ ಸ್ಟೇಟಸ್‌ಕೋ ಕಂಟೀನ್ಯೂ ಆಗಲಿ ಎಂಬ ಧೋರಣೆಯನ್ನು ನಮ್ಮ ಸರಕಾರ ಮತ್ತು ಜನರು ತಳೆದಿರಬೇಕು. ಮಹಾರಾಷ್ಟ್ರದವರು ವರದಿ ಒಪ್ಪಿಕೊಳ್ಳದಿದ್ದರೆ ನಾವೂ ಕೂಡ ಅದನ್ನು ಒಪ್ಪಿಕೊಳ್ಳ ಬೇಕಾಗಿಲ್ಲ. ಮೊದಲು ಇದ್ದ ಬೌಂಡರಿ ಇರಲಿ ಎಂದು ಹೇಳಬೇಕು. ನಾವು ಕೂಡ ಒಪ್ಪಿಕೊಳ್ಳುವುದಿಲ್ಲ. ಮೊದಲನಿಂದ ಇದ್ದಂತೆ ಬೌಂಡರಿ ಮುಂದುವರಿಯಬೇಕು ಎಂದು ಹೇಳಬೇಕು. ನಮ್ಮ ರಾಜ್ಯ ಸರಕಾರ ಈ ಧೋರಣೆ ಅನುಸರಿಸಬೇಕು ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

10-30 A.M.

†ಎಸ್. ಎಸ್. ಪಾಟೀಲ್ (ಸಾದಲ್ಗ).—ಮಾನ್ಯ ಸಭಾಪತಿಯವರೇ, ಮಾನ್ಯ ಅಹಾರ ಮಂತ್ರಿಯವರು ಮಂಡಿಸಿರುವ ಮೈಸೂರು-ಮಹಾರಾಷ್ಟ್ರ ಕೇರಳ ಗಡಿ ಬಗ್ಗೆ ಕೇಂದ್ರ ಸರ್ಕಾರ ತಕ್ಷಣ ಕಾರ್ಯಗತ ಮಾಡಬೇಕು ಎಂದು ಒತ್ತಾಯಪಡಿಸುವ ಗೊತ್ತುವಳಿಯನ್ನು ನಾನು ಬೆಂಬಲಿಸುತ್ತ ಎರಡು ಸಲಹೆಗಳನ್ನು ಮಾಡಬಯಸುತ್ತೇನೆ.

ಮಹಾಜನ್ ವರದಿಯಿಂದ ನಮ್ಮ ಮೈಸೂರು ದೇಶಕ್ಕೆ ಲಾಭವಾಗಿದೆ ಎಂದು ಮಹಾರಾಷ್ಟ್ರ ಮತ್ತು ಇನ್ನಿತರ ದೇಶದ ಅನೇಕ ಜನರು ಮಾತನಾಡುತ್ತಿದ್ದಾರೆ. ವಿಶದವಾಗಿ ನೋಡಿದರೆ ನಮ್ಮ ಮೈಸೂರಿಗೆ ನಷ್ಟವಾಗಿದೆಯೇ ವಿನಾ ಲಾಭವಾಗಿಲ್ಲ. ಏಕೆಂದರೆ ನಮಗೆ ಬರಬೇಕಾದ ಅನೇಕ ಭಾಗಗಳು ಬರಲಿಲ್ಲ. ಚಂದಘಡ, ಅಥವಾನಿ, ಶಿರೋಳ ತಾಲ್ಲೂಕಿನ ಕೆಕವು ಭಾಗವು ಮತ್ತು ಇನ್ನೂ ಇತರ ಭಾಗಗಳು ಬರಬೇಕಾಗಿತ್ತು, ಬರಲಿಲ್ಲ. ನಮ್ಮ ಮೈಸೂರು ರಾಜ್ಯದಿಂದ ಹೋಗುವಂಥ ವಿಭಾಗಗಳನ್ನು ನೋಡಿದರೆ ಇವತ್ತು ಬೆಳಗಾಂ ತೆಗೆದುಕೊಂಡರೆ ಅದನ್ನು ಮುಂದೆ ವಿಸ್ತರಿಸುವುದಕ್ಕೆ ಆಗುವುದಿಲ್ಲ, ಅದಕ್ಕೆ ಅವಕಾಶವಿಲ್ಲ. ಬೆಳಗಾಂ ಸುತ್ತ ಮುತ್ತ ಇರುವ ಪ್ರದೇಶವನ್ನು ಮಹಾರಾಷ್ಟ್ರಕ್ಕೆ ಕೊಟ್ಟಿದ್ದಾಗಿದೆ. ಬೆಳಗಾಂನಲ್ಲಿ ಒಂದು ಸೆಂಟ್ರಲ್‌ಜೈಲ್ ಇದೆ. ಸುಮಾರು ಕೋಟ್ಯಾವಧಿ ರೂಪಾಯಿ ಖರ್ಚು ಮಾಡಿದಂಥ ಸೆಂಟ್ರಲ್‌ಜೈಲನ್ನು ಮಾಹಾರಾಷ್ಟ್ರಕ್ಕೆ ಕೊಟ್ಟದ್ದಾಗಿದೆ. ಬೆಳಗಾಮಿನ ಪಶ್ಚಿಮಕ್ಕೆ ಬತ್ತದ ಕಣಜದ ಪ್ರದೇಶ, ಖಾನಾಪುರದ ಅರಣ್ಯ ಪ್ರದೇಶ ಎಲ್ಲವೂ ಹೋಗಿದೆ. ಚಿಕ್ಕೋಡಿ ತಾಲ್ಲೂಕಿನ ನಿಪ್ಪಾಣಿಯನ್ನು ಹಿಡಿದು 40 ಹಳ್ಳಿಗಳು ಹೋಗಿವೆ. ಮೈಸೂರು ರಾಜ್ಯದಲ್ಲಿ ಫಲವತ್ತಾದ ಭೂಮಿ ಮತ್ತು ತಂಬಾಕು ಹೇರಳವಾಗಿ ಬೆಳೆಯುವ ನಿಪ್ಪಾಣಿ ಪ್ರದೇಶ ಹೋಗಿದೆ. ಬೀಡಿ ಮತ್ತು ತಂಬಾಕಿಗೆ ಇದಕ್ಕಿಂತ ದೊಡ್ಡದಾದ ಕೇಂದ್ರ ಹಿಂದೂಸ್ಥಾನದಲ್ಲಿ ಮತ್ತೊಂದಿಲ್ಲ. ಅದನ್ನು ಕೂಡ ಕಳೆದುಕೊಂಡಿದ್ದೇವೆ. ಟೊಬ್ಯಾಕೊ ರೀಸರ್ಚ್ ಸ್ಟೇಷನ್ ಇಲ್ಲಿದೆ. ವರ್ಷಕ್ಕೆ ಸುಮಾರು ಸೆಂಟ್ರಲ್ ಎಕ್ಸೈಸ್ ಡ್ಯೂಟಿಯಿಂದ ಮೂರು ಕೋಟಿ 25 ಲಕ್ಷ ರೂಪಾಯಿ ಬರುವುದು ನಷ್ಟವಾಗಿದೆ. ಅದೇ ಪ್ರಕಾರವಾಗಿ ವರಮಾನ ತೆರಿಗೆ ಸಹಿತ ನಮ್ಮ ಸರ್ಕಾರಕ್ಕೆ ನಷ್ಟವಾಗಿದೆ. ಚೆನ್ನಾಗಿ ಅಭಿವೃದ್ಧಿಯಾಗಿ ಉತ್ತಮ ಸ್ಥಿತಿಗೆ ಬಂದಿರುವ ಚಿಕ್ಕೋಡಿ ತಾಲ್ಲೂಕಿನ 40 ಹಳ್ಳಿಗಳನ್ನು ಕಳೆದುಕೊಳ್ಳುತ್ತಿದ್ದೇವೆ. ಅಲ್ಲಿ ನಮ್ಮ ಸರ್ಕಾರದವರು ಕಳೆದ ಐದು ವರ್ಷಗಳಲ್ಲಿ

(ಶ್ರೀ ಎಸ್. ಎಸ್. ಪಾಟೀಲ್)

ಬೇಕಾದಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಅಲ್ಲಿ 23 ಬಂಡಾರಗಳನ್ನು ಕಟ್ಟಿದ್ದಾರೆ, ಅನೇಕ ನೀರಾವರಿ ಯೋಜನೆಗಳಾಗಿವೆ. ಪ್ರತಿಯೊಂದು ಊರಿಗೂ ಶಾಲಾ ಕಟ್ಟಡಗಳಾಗಿವೆ. ಪ್ರತಿಯೊಂದು ಊರಿಗೂ ಕಾಲು ದಾರಿ, ಅಪ್ರೋಚ್ ರೋಡ್ ಆಗಿವೆ. ಚೆನ್ನಾಗಿ ಅಭಿವೃದ್ಧಿ ಯಾಗಿರುವ ಭಾಗವನ್ನು ನಾವು ಇವತ್ತು ಕಳೆದುಕೊಳ್ಳುತ್ತಿದ್ದೇವೆ. ನಮಗೆ ಬಂದಿರುವುದು ಅಕ್ಕಲ ಕೋಟೆ ವಗ್ಯೆರೆ ಭಾಗ. ಅವು ಏನೇನೂ ಅಭಿವೃದ್ಧಿಯಾಗಿಲ್ಲ. ಅಷ್ಟೇ ಅಲ್ಲ, ಅಲ್ಲಿಗೆ ಕೊಯನಾ ದಿಂದ ವಿದ್ಯುಚ್ಛಕ್ತಿಯನ್ನು ಒದಗಿಸಲು ಹಾಕಿದ್ದ ಕಂಬಗಳನ್ನು ಸಹ ಕಿತ್ತುಹಾಕುತ್ತಿದ್ದಾರೆ. ನಿಜ ವಾಗಿ ನೋಡಿದರೆ ಈ ವರದಿಯಿಂದ ನಮಗೆ ಲಾಭವಂತೂ ಇಲ್ಲವೇ ಇಲ್ಲ, ನಮಗೆ ಬಹಳ ನಷ್ಟವಾಗಿದೆ. ಇಷ್ಟೆಲ್ಲ ಇದ್ದರೂ ಕೂಡ ನಾವು ಈ ವರದಿಯನ್ನು ಏಕೆ ಒಪ್ಪಬೇಕು ಎಂದರೆ, ಇದರಿಂದ ಲಾಭವಿದೆ ಎಂದಲ್ಲ. ಈ ವಿಷಯವನ್ನು ಪೂರೈಸಬೇಕು, ಇದು ಮುಕ್ತಾಯವಾಗಬೇಕು, ಎಂದು ಮಾನ್ಯ ಮುಖ್ಯಮಂತ್ರಿಯವರು ಮತ್ತು ನಮ್ಮ ಸರ್ಕಾರದವರು ಒಪ್ಪಬೇಕು ಎಂದು ಹೇಳುತ್ತಿದ್ದಾರೆ.

ಕೇಂದ್ರದ ಗೃಹ ಮಂತ್ರಿಗಳಾದ ಶ್ರೀ ವೈ. ಬಿ. ಚವಾಣ್ ಅವರು ವಿರೋಧ ಪಕ್ಷಗಳ ನಾಯಕ ರನ್ನು ಕರೆಯಿಸಿ ಒಂದು ಪರಿಷತ್ತನ್ನು ಕೂಡಿಸುವ ಹಂಚಿಕೆ ಹಾಕಿದ್ದಾರೆ. ಇದಕ್ಕೆ ಕಾರಣವೇನೆಂದರೆ, ಮಹಾಜನ್ ಆಯೋಗದ ವರದಿಯನ್ನು ಮುಂದುವರಿಸಬೇಕು ಅಥವಾ ಅದನ್ನು ಕಡೆಗಾಣಿಸ ಬೇಕು ಅಥವಾ ಅದರಲ್ಲಿ ಬದಲಾವಣೆ ಮಾಡಬೇಕು ಎನ್ನುವ ಮೋಸ ಇದರಲ್ಲಿದೆ. ಮಹಾರಾಷ್ಟ್ರ ಏಕೀಕರಣ ಸಮಿತಿ ಮತ್ತು ಮಹಾರಾಷ್ಟ್ರ ಸಂಪೂರ್ಣ ಸಮಿತಿ ಇವರು ಹೇಳಿದ ಹಾಗೆ ಮಹಾರಾಷ್ಟ್ರ ಸರ್ಕಾರ ಕೇಳಿಕೊಂಡು ಬಂದು ಬ್ಯಾಕ್‌ಗ್ರೌಂಡ್ ಮ್ಯುಸಿಕ್ ಹೇಗೆ ಇದ್ದರೆ ಹಾಗೆ ಕುಣಿಯುತ್ತ ಬಂದಿದ್ದಾರೆ. ಅವರು ಕುಣಿಯುವುದು ಇದುವರೆಗೂ ಹಾಗೆಯೇ ನಡೆದಿದೆ. ಏನು ಮಾಡಬೇಕೆಂಬುದು ಅವರಿಗೇ ತಿಳಿಯಲೊಲ್ಲದು. ಕೇಂದ್ರ ಮಂತ್ರಿಮಂಡಲದ ವಿಚಾರವನ್ನು ಕೇಳಲಾರದೆ ವಿರೋಧ ಪಕ್ಷಗಳ ಎಲ್ಲ ನಾಯಕರನ್ನೂ ಕರೆದು ಸಮಾಲೋಚನೆಯನ್ನು ಮಾಡುತ್ತಿ ದ್ದಾರೆ. ವಿರೋಧ ಪಕ್ಷದವರನ್ನು ಕರೆದು ರಾಷ್ಟ್ರಕ್ಕಾಗಿ, ದೇಶದ ಹಿತಕ್ಕಾಗಿ ಬೇಕಾಗುವ ಕೆಲಸವನ್ನು ಮಾಡಬಹುದು, ಅದರಲ್ಲಿ ಅನ್ಯಾಯವಿಲ್ಲ. ಆದರೆ ಇವರು ಮೋಸಗಾರಿಕೆಯನ್ನು ಮಾಡುತ್ತಿದ್ದಾರಲ್ಲ, ಇದರಿಂದ ನಮಗೆ ಬಹಳ ಕಷ್ಟವಿದೆ, ಇದನ್ನು ಮಾಡುವುದು ತಪ್ಪು ಎಂದ ಹೇಳಬಯಸುತ್ತೇನೆ.

ಮಹಾಜನ್ ಅವರು ಮಾಡಿದ ವರದಿಯನ್ನು ನಾವು ಕಾರ್ಯಗತ ಮಾಡಿದರೆ ದಿವಂಗತ ಮಹಾಜನ್ ಅವರಿಗೆ ನಾವು ಗೌರವವನ್ನು ಕೊಟ್ಟಹಾಗೆ ಆಗುತ್ತದೆ. ಅವರು ಕೂಲಂಕಷವಾಗಿ ಚರ್ಚೆ ಮಾಡಿ ಎಲ್ಲ ವಿಷಯಗಳನ್ನೂ, ತಮ್ಮ ಅಭಿಪ್ರಾಯಗಳನ್ನೂ ವರದಿ ಮಾಡಿದ್ದಾರೆ. ಆ ವರದಿಯನ್ನು ತಾತ್ವಿಕ ದೃಷ್ಟಿಯಿಂದ ಒಪ್ಪಬೇಕು.

ಈಗ ನಾವು ಆದಷ್ಟು ಬೇಗನೆ ಈ ಗಡಿ ವಿವಾದದ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಕೇಂದ್ರ ಸರ್ಕಾರದವರಿಗೆ ನಾವು ಒತ್ತಾಯಪಡಿಸಬೇಕು ಮತ್ತು ಮಹಾಜನ್ ಆಯೋಗದ ವರದಿಯನ್ನು ಏನೂ ಬದಲಾವಣೆ ಮಾಡದಂತೆ ಕಾರ್ಯಗತ ಮಾಡಬೇಕು ಎಂದು ನಾನು ಹೇಳುತ್ತೇನೆ. ದಿವಂಗತ ಮಹಾಜನ್ ಅವರಿಗೆ ಗೌರವ ಕೊಡಬೇಕು ಎನ್ನುವ ದೃಷ್ಟಿಯಿಂದ, ಒಂದು ತತ್ವದ ದೃಷ್ಟಿಯಿಂದ, ಮಹಾಜನ್ ವರದಿಯನ್ನು ನಾವು ಒಪ್ಪಬೇಕಾಗಿದೆ. ಇಷ್ಟು ಹೇಳಿ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†Sri DIGAMBAR RAO B. KALMANKAR.—Mr. Speaker Sir, in the first stage, one motion came before the House wherein it was recommended that the Mahajan Commission report on Mysore–Maharashtra. Mysore-Kerala boundaries will be taken into consideration. That was the only motion before this House. Later on again another motion came wherein to many arguments and so many reasons were given and subsequent to that a new motion comes before this House wherein some other matter, that is, the failure of the Mysore State to get some legitimate areas has been mentioned. I do not understand why the Government is bringing so many motions before this House. This shows the Government is not prepared to have its say in the matter. It is these things heartening in Maharashtra and at Delhi. This unpreparedness of this Government

shows that they have no clear policy in the matter. At the first stage. Mr. Nijalingappa, the Chief Minister should have moved the motion, He did not do so. Mr. Jatti, the Food Minister, moved it. Later on the Chief Minister made a statement. He did not give any information or any suggestion to this House and that was a very vague statement made in this House. Later on by intervening in the debate, he said that it must be treated as an award. That shows how the Chief Minister who is the Leader of this House is wavering because of certain new responsibilities that have been cast on him. If he wanted to do justice to our State and if he really thinks that Mysore state should not lose anything, he would have done it in the very beginning itself.

[MR. CHAIRMAN (SRI M. H. THAMMAIAH) in the Chair]

The very fact that he did not do it, shows that this Government do not have any interest of the State in their mind and it is also a reason that we find any word of this Government does not carry any weight in the Centre. Sir, what is it that we are seeing today ? The idea of national consensus that was put forward by the Home Minister, Sri Chavan, has gained ground and it has been taken into consideration by the Prime Minister and now in spite of so much of protest that is shown in this House to that idea, that idea is gaining ground and it reflects on the weak-kneed policy of our Government at all stages. I will show how it has been a week-kneed policy of this Government. It has been clearly admitted by our Chief Minister and also the Booklet called "Volte face" that our Chief Minister was not prepared to accept the appointment of the One-Man Commission on the border dispute. It is said that the people of Mysore also did not want this appointment of the Commission. But it was due to the compulsion of the Congress Committee and the submission of our Chief Minister that that Commission was appointed. It is there that the Mysore Government lost the claim.

Secondly, there was also a stage when our Government could have insisted for appointment of a Commission to solve once and for all the border disputes that Mysore State has got, not only with Maharshtra and Kerala but also with Andhra and Tamil Nad. The Chief Minister should have taken the initiative for solving these problems also. That initiative is lost and that is how we are at the mercy of the Central Government and Maharashtra Government. Now the stage has come that the Mahajan Commission has given a report. He is a great man and great son of this land and was Chief Justice of the Supreme Court and he had no affiliation either towards Maharashtra or Mysore. While making the recommendations, he has taken certain facts into consideration. It should be remembered that when a Commission is appointed to adjudicate on any dispute, it is humanly impossible that it can satisfy both the parties fully. -In the interest of national unity, it is not necessary to carve out a unilingual State. He has rightly said on page 89 of the report :

"I am not concerned with that body, but I do feel that any agitation on the ground that a unilingual State only

(SRI DIGAMBAR RAO B. KALMANKAR)

exists for the speakers of that particular language, will cut at the root of the unity of India and may eventually lead to the dismemberment of the Union."

So, while considering this problem he has got the national attitude to the problem. It is not possible that we would have water-tight compartments in the country. He has discredited the Pataskar formula of village as a unit and the simple majority. These two considerations he has discredited. He has taken the statutory village as a unit and in that he also includes the group of villages and taken the minimnm population of 20,000. About linguistic majority group, he has said that it must not be wavering and it must be stable. So, he has discredited the district as the unit as was recommended by the S. R. C... At page 25 of the report he has said :

"It seems to me that there is no scientific yardstick in deciding matters which concern huge populations and their well being, The decision is taken at the potitical level and is subject to political pressures. It may be the death of a person who has been fasting for the cause or it may be the threatened fast unto death of another person. To meet such political situations at the politcal level the leaders of the country evolve solutions and ask a Boundary Commission to demarcate areas according to their political decision. I have not been able to discover any scientific formula evolved by social or other sciences, that a village unit is a proper yardstick for attaining linguistic homogenety. Luckily in the appointment of this One-Man Commission, no yardstick of a tehsil or village unit has been laid down by the Government of India. No formula can be rigidly implemented and there can be no scientific approach in such matters."

Therefore, the report has been on proper consideration. Sir, I want to blame this Government for their belated claim on Sholapur and the whole taluka of Chandagad. I hail from a taluk of a neighbouring district about which eight villages have been claimed by Maharashtra. Our Government is criminally negligent in not claiming so many taluks. So many villages in Humnabad taluk should have come to our State because of the language. In that respect, the Congress Government has utterly failed to make that claim.

(MR. DEPUTY SPEAKER in the Chair)

This has been admitted by the Maharshtra Government. This fact has also been noted by the Mahajan Commission. My submission is that if we have to have a very clear cut say in the matter, and if we want that Mysore State should not be subdued before the dictates of the Central Government and also Maharashtra or its opinion poll or national

consensus, I would submit the only decision that this August House can take is to declare that if this commission report is not implemented as an award *in toto*, all the members of this Assembly will resign in protest.

With this, I thank the Chair for having given me an opportunity to speak on this subject.

ಶ್ರೀ ಜೆ. ಆರ್. ಹಾಲಸ್ವಾಮಿ (ಜಗಳೂರು).—ಸನ್‌ಮಾನ್ಯ ಅಧ್ಯಕ್ಷರೇ ಸನ್‌ಮಾನ್ಯ ಮೆಹರ್‌ಚಂದ್ ಮಹಾಜನ್‌ರವರ ವರದಿಯನ್ನು ಮತ್ತು ಶ್ರೀಮಾನ್ ಜತ್ತಿಯವರು ಮಂಡಿಸಿರತಕ್ಕ ಸೂಚನೆಯನ್ನೂ ಕೂಡ ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತಾ ಕೆಲವಾರು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗಾಗಲೇ ಎರಡು ದಿವಸಗಳಿಂದ ಎರಡು ಕಡೆಯೂ ಕೂಡ ಅನೇಕ ಮಹನೀಯರುಗಳು ಈ ವರದಿಯನ್ನು ಸ್ವಾಗತಿಸುತ್ತಾ ಉತ್ತಮವಾಗಿ ಸಮರ್ಥನೆಯನ್ನು ಮಾಡಿದ್ದಾರೆ ನಾನಾದರೂ ಕೂಡ ಶ್ರೀಮಾನ್ ಕಂಠಿಯವರು, ಘೋರ್‌ಪಡೆಯವರು, ಶ್ರೀನಿವಾಸ್‌ರವರು ಮತ್ತು ಬೆಳಗಾಂನ ಸದಸ್ಯರು ಬಹಳ ಉತ್ತಮವಾದ ಅನೇಕ ನಿದರ್ಶನಗಳನ್ನು ಕೊಟ್ಟು ಈ ವರದಿಯನ್ನು ಸಮರ್ಥನೆ ಮಾಡಿದ್ದಾರೆ ಎಂದು ಹೇಳುತ್ತೇನೆ. ಅವರುಗಳು ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರಮೇಲೆ ಆದರಲ್ಲೂ ಶ್ರೀಮಾನ್ ಬಿ. ಪಿ. ಕದಂರವರ ಮೇಲೆ ವಾಗ್‌ಬಾಣದ ಸುರಿ ಮಳೆಯನ್ನೇ ಕರೆದಿದ್ದಾರೆ. ಶ್ರೇಷ್ಠ ನ್ಯಾಯಾಧೀಶರಾಗಿದ್ದು, ಒಳ್ಳೆಯ ಮೇಧಾವಿಗಳು, ನ್ಯಾಯ ಪರಿಣತರು, ನಿಷ್ಠಾವಂತರು ಅಂತ ಹೆಸರು ಪಡೆದಂತಹ ದಿವಂಗತ ಜಸ್ಟಿಸ್ ಮೆಹರ್‌ಚಂದ್ ಮಹಾಜನ್‌ರವರು ಬಹಳ ಶ್ರಮಪಟ್ಟು ದೇಶದ ಪ್ರಜೆಗಳ ಮನೋಭಾವವನ್ನು ಅರಿತುಕೊಂಡು ಈ ವರದಿಯನ್ನು ಮಂಡಿಸಿದ್ದಾರ, ಇದರಿಂದ ಯಾರಾದರೂ ಮೈಸೂರಿಗೆ ಲಾಭವಾಗಿದೆ ಎಂದು ತಿಳಿದು ಕೊಂಡಿದ್ದರೆ ಅದು ಸರಿಯಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಹುದು. ಬಹಳವಾಗಿ ಮೈಸೂರಿಗೆ ಲುಕ್ಸಾನಾಗಿದೆ, ಅನೇಕ ಫಲವತ್ತಾದ ಭೂಮಿ, ಆರಣ್ಯ ಪ್ರದೇಶ, ಖಾನಾಪುರ ತಾಲ್ಲೂಕು ಮುಂತಾದ ಅನೇಕ ಭಾಗಗಳು ನಮ್ಮ ಕೈ ತಪ್ಪಿಹೋಗಿವೆ ಎಂದು ಹೇಳಬಹುದು. ಆದರೂ ಕೂಡ ಈ ಒಂದು ಗಡಿ ಪ್ರಶ್ನೆ ಅಂತಿಮವಾಗಿ ಇತ್ಯರ್ಥವಾಗಲಿ ಎಂಬ ಒಂದೇ ಒಂದು ಉದ್ದೇಶದಿಂದ ನಾವುಗಳೆಲ್ಲಾ ಇದನ್ನು ಒಪ್ಪಿಕೊಳ್ಳುತ್ತಾ ಇದ್ದೇವೆ. ಈ ಒಂದು ಕಮಿಷನ್‌ನ್ನು ರಚಿಸಲು ಕಾರಣ ಮಹಾರಾಷ್ಟ್ರ ದವರು ಎನ್ನುವುದು ನಿರ್ವಿವಾದವಾದದ್ದು. ಕೇಂದ್ರದವರು ಗಡೀ ಹೊಂದಾಣಿಕೆಯನ್ನು ತೀರ್ಮಾನ ಮಾಡುವುದಕ್ಕೆ ಕಮಿಷನ್‌ನ್ನು ರಚನೆ ಮಾಡುತ್ತಾರ ಎಂಬುದನ್ನು ಕೇಳಿ ಮೈಸೂರು ದೇಶದಾದ್ಯಂತ ಅನೇಕ ಕಡೆ ತಾಲ್ಲೂಕು ಮಟ್ಟದಲ್ಲೂ ಕೂಡ ನಾವುಗಳೆಲ್ಲರೂ ವಿರೋಧ ಮಾಡಿದ್ದೇವೆ. ಆದರೂ ಕೂಡ ಕೇಂದ್ರದವರು ಒಂದು ಒತ್ತಾಯದ ಪರಿಣಾಮವಾಗಿ ಈ ಕಮಿಷನನ್ನು ರಚನೆ ಮಾಡಿದರು, ಈ ಕಮಿಷನ್‌ನ ವರದಿ ಹೊರಬಿದ್ದನಂತರ ಕೇಂದ್ರ ಗೃಹ ಸಚಿವ ಚವಾನ್‌ರವರ ಮತ್ತು ಮಹಾರಾಷ್ಟ್ರ ಮುಖ್ಯಮಂತ್ರಿ ವಿ. ಪಿ. ನಾಯಕ್‌ರವರ ಚಟುವಟಿಕೆ ನಿಜವಾಗಿಯೂ ವಿಷಾದನೀಯ ಎಂದು ಹೇಳ ಬೇಕಾಗಿದೆ. ಈ ಒಂದು ವರದಿಯಮೇಲೆ ಅವರು ನಡೆಸಿರತಕ್ಕ ಚಟುವಟಿಕೆ ನೋಡಿದರೆ ಮಹಾಜನ್ ವರದಿಯ ಮೇಲೆ ಒಂದು ಬಾಂಬ್ ಎಸೆದಂತಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತಿನ ದಿವಸ ಮಹಾರಾಷ್ಟ್ರದಲ್ಲಿ ನಡೆದಿರತಕ್ಕ ವಿದ್ಯಮಾನಗಳನ್ನು ನೋಡಿದರೆ ಮಹಾಜನ್ ಅವರ ವರದಿ ಯನ್ನು ಸುಡುವುದು ಮತ್ತು ಅವರ ಬಗ್ಗೆ ಬಹಳ ಕೀಳಾಗಿ ಮಾತನಾಡುತ್ತಿರುವುದು ಮೈಸೂರಿನವ ರಾದ ನಮಗೆ ಬಹಳ ವ್ಯಸನವನ್ನು ಉಂಟುಮಾಡಿದೆ. ಇದು ಪ್ರಜಾಪ್ರಭುತ್ವದ ಘನತೆಗೆ ತಕ್ಕುದಲ್ಲ ಎಂಬ ಮಾತನ್ನು ಹೇಳಬಯಸುತ್ತೇನೆ. ಮೈಸೂರಿನವರ ಶಾಂತ ಸ್ವಭಾವವನ್ನು ಅವರು ದುರುಪ ಯೋಗಪಡಿಸಿಕೊಳ್ಳುತ್ತಾ ಇದ್ದಾರೆ. ಸಂದರ್ಭ ಬಂದರೆ ಮೈಸೂರಿನವರು ಯಾರಿಗೂ ಕಡಿಮೆ ಇಲ್ಲ ಎಂತಹ ಚಳುವಳಿಯನ್ನಾದರೂ ಮಾಡಬಲ್ಲರು ಎಂಬುದನ್ನು ಈ ಸಂದರ್ಭದಲ್ಲಿ ನಾನು ಮಹಾ ರಾಷ್ಟ್ರೀಯರಿಗೆ ಎಚ್ಚರಿಕೆ ಕೊಡಬೇಕಾಗಿದೆ. ಬೆಳಗಾಂ ಏಕೆ ಮೈಸೂರಿನಲ್ಲಿರಬೇಕೆಂಬುದನ್ನು ಅನೇಕ ಸ್ನೇಹಿತರು ನಿದರ್ಶನ ಕೊಟ್ಟು ಹೇಳಿದ್ದಾರೆ. ಅಲ್ಲಿರತಕ್ಕ ಎಲ್ಲಾ ಜನರೂ ಕೂಡ ಮೈಸೂರಿ ನಲ್ಲಿ ಸುಖವಾಗಿದ್ದೇವೆ, ಮಹಾರಾಷ್ಟ್ರಕ್ಕೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಮೈಸೂರಿಗೆ ಬಂದಿರತಕ್ಕ ಕೇರಳದ ಕಾಸರಗೋಡು ತಾಲ್ಲೂಕನ್ನು ಸಂತೋಷದಿಂದ ಸ್ವಾಗತಿಸುತ್ತೇನೆ.

ಇನ್ನು ಶಿವಸೇನೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಾದರೆ, ಕನ್ನಡಿಗರಿಗೆ ಅವರು ಕೊಡುತ್ತಿರುವ ಕಿರುಕುಳ ಬಹಳ ವಿಷಾದನೀಯವಾದ ಅಂಶ, ಇಂಗ್ಲೆಂಡು, ಅಮೆರಿಕಾ ಮುಂತಾದ ಅನೇಕ ರಾಷ್ಟ್ರಗಳಲ್ಲಿ ಭಾರತೀಯರು ಇಧ್ದಾರೆ, ಅವರೆಲ್ಲರನ್ನೂ ಆ ದೇಶದವರು ಹರುಷದಿಂದ, ಶಾಂತಿಯಿಂದ, ಸೌಜನ್ಯದಿಂದ ನೋಡಿಕೊಳ್ಳುತ್ತಾ ಇರುವಾಗ ಭಾರತದಲ್ಲಿ ನಾವು ಒಂದೇ ತಾಯಿಯ

(ಶ್ರೀ ಜೆ. ಆರ್. ಹಾಲಸ್ವಾಮಿ)

ಮಕ್ಕಳಾಗಿ ಮಹಾರಾಷ್ಟ್ರೀಯರು, ಕನ್ನಡಿಗರಿಗೆ ಕಿರುಕುಳ ಕೊಡುತ್ತಿರುವುದು ನಿಜವಾಗಿಯೂ ಬಹಳ ವ್ಯಸನಕರವಾದ ವಿಷಯ. ಇದು ನ್ಯಾಷನಲ್ ಔಟ್ ಲುಕ್ ಅಲ್ಲ, ಅದಕ್ಕೆ ವಿರುದ್ಧವಾದುದು. ಈ ಬಗ್ಗೆ ಈಗಾಗಲೇ ಸಾಕಾದಷ್ಟು ಗೊಂದಲ ಆಗಿದೆ, ಇನ್ನೂ ಮತ್ತಷ್ಟು ಗೊಂದಲಗೊಳಿಸುವುದು ಬೇಡ, ವಿರೋಧ ಪಕ್ಷದವರು ನಾವು ಎಲ್ಲರೂ ಸೇರಿ ಒಟ್ಟಾಗಿ ಇದನ್ನು ಒಪ್ಪಿಕೊಳ್ಳಬೇಕೆಂದು ಕೇಂದ್ರವನ್ನು ಒತ್ತಾಯ ಮಾಡೋಣ, ಸಂದರ್ಭಬಂದರೆ ಯಾವುದೇ ಒಂದು ತ್ಯಾಗ ಮಾಡುವುದಕ್ಕೂ ಸಿದ್ಧರಾಗೋಣ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri P. B. NANDIHALI (Uchagaon).—Mr. Speaker, Sir, after a long discussion on the report of this Mahajan Commission, I have to say something on the same subject.

I am very sorry to remember Mr. Mahajan the great and late Chief Justice of India. When I first saw him in Belgaum, he expressed his opinion that it was unfortunate that he was entrusted with this great and difficult responsibility and he said so because he was against the linguistic States. And when this Commission was announced, we had been in Bombay, we opposed there and then only. The Hon'ble Members of this House should not misunderstand the Marathi-people, the people in border area that they have a disregard for the great persons like the Chief Justice. They have the same respect. But unfortunately, a man becomes small though he is great due to his work. Chief Justice Mahajan became a great man for Members of this House because he did something good for them. But he became a small man for the Marathi people as their expectations were not fulfilled. The same case about the Union Home Minister. When he was the Defence Minister he became the hero of the whole country. No doubt, every State appreciated his great work. But now unfortunately on account of differences between the people of Maharashtra and Mysore States over the boundary the Union Home Minister also became a small man. He is considered so in Maharashtra also because he did not fulfil his bounden duty and responsibility to the people of Maharashtra.

11-00 A.M.

While speaking on this Report, I remember so many Commissions appointed to resolve this boundary question—all unnecessary Commissions. The common man, the farmer or the peasant, could solve this problem easily taking the practical view and taking the facts and figures into consideration. While the same problem between Madras and Andhra was solved by the application of Pataskar formula which takes village as a unit and relative majority, geographical contiguity and the wishes of the people, this dispute between Maharashtra and Mysore also could be solved on the same principles. Now there is no dispute between Madras and Andhra States. The entire fault is that of the Central Government which has not discharged its responsibility successfully. When Bellary was in Andhra State or composite Madras State, the

dispute over Belgaum, Karwar and Bidar was there and at that time alone when Bellary was transferred to Mysore, there, should have been one common Commission or some firm policy on the part of the Central Government, which should have been executed then and there. While Bellary was included in Mysore State, unfortunately the problem regarding Belgaum, Karwar and Bidar which are Marathi areas, remained unsolved. So many commissions are appointed to resolve this dispute. After a long time, after a great movement was launched by the Marathi people and after thousands of people offered Satyagraha and went into jail, and after *Sarbandh* was resorted to, and after so many lost their lands as a result of no-tax campaign, and after several morchas, bundhs and such other demonstrations, the Congress leaders opened their eyes. At the time the A.I.C.C. Session was held in Bombay in 1966, Prime Minister Indira Gandhi was convinced of the necessity for a Commission. There was a resolution of the Congress Working Committee recommending the appointment of Boundary Commission for solving the dispute between Maharashtra and Mysore. I remember distinctly well that at that time, it was stated that public opinion would also be taken into consideration. This Commission was appointed in October 1966 to give its report after collecting all information, evidence and ascertanment of public opinion. At that time only, at the time of the appointment of the Commission, we expressed our views and said that this Commission was being appointed having the General Elections which was approaching in the near furture, in view. Otherwise, there was no necessity to appoint a Commission without the most important point, namely, time limit for commending work and giving report. We insisted imposition of time limit but our demand was not taken into consideration. Mr. Mahajan himself has reported that a high-power delegation of Congressmen from Maharashtra and Bombay led by the President of Maharashtra Pradesh Congress Committee met the Prime Minister and the Congress President and the Home Minister urged upon them that a Commission should be appointed without delay, and its terms of reference should be settled by the Working Committee. They also said that otherwise the Opposition parties in Maharashtra would exploit the situation to dislodge the Congress. It was made clear that it would be difficult for the Maharashtra Cabinet to function if there was any further delay in the setting up of this Commission. So, this Commission was appointed, taking into consideration the future elections. They were remembering the picture of the future Parliament. When the Congress leaders themselves admit that the Opposition parties would dislodge the Congress if there was delay in the appointment of the Commission, it means that if this Commission was there before the General Election, there would not have been majority for the Congress in the Parliament and they could not have formed a Government in the Centre.

Now after laborious work, the Mahajan Commission gave its decision. According to my information, this decision is not binding on the Marathi people of the border areas because their firm policy from

(SRI P. B. NANDIHALI)

the beginning of this movement to go to Maharashtra has been that this issue must be solved on the basis of the Pataskar formula. We have expressed our views at public meetings in Belgaum. We did not want a single Kannada-speaking village. At the same time, it is the responsibility of the ruling party to see that they take a practical view of the whole issue and take into consideration the good of the people and the unity of nation instead of the good and advancement of the ruling party and a particular ideology. Now we see here one party saying that injustice has been done to them and that they are not going to accept the report and the other party thinks that this must be implemented. The other day I heard somebody saying that they would not leave an inch of place. I am very sorry to hear such things. At the time of apointment of this Commission, I told my workers that this is a gamble. The Commission was to go on its own will and there was no terms of reference. Appointing this type of a Commission is nothing but a gamble. I remember such instances in history. There was a gamble in Mahabharatha when Dharmaraja gambled and lost everything. He did not know that Shakunimama arranged the cunning plot for the benefit of the Kauravas. After Duryodhana won everything, he said that he would not give even an inch of land to Pandavas. Therefore, the whole responsibility goes to the Central Government which is the cause for this bitterness. So, there is no other alternative for the Marathi people living in the border area than to continue their movement till they succeed in their demands. It is said that the common people are not interested in this issue. But, I invite my friends from both parties to come to our constituency and study the situation there. You must stay there and study the case on the spot. This problem would be solved easily if such study is undertaken on the spot.

The demand of Mysore is a great injustice. Mysore Government, in their Memorandum, page 44, have given all wrong information. They say that the village servants Kulkarni, Chougule, Patel Sanadi etc., are mostly Kannadigas. In fact these are all Marathi people who are trying for merger in Maharashtra. They have offered satyagraha and demanding the merger of Belgaum and these 86 villages with Maharashtra. It is said that Belgaum is on the border of Marathi area. It is not so, it is in the midst of Mahathi area, it is in the heart of Marathi

[Mr. Chairman (Sri S. D. KOTHAVALE) in the Chair]

area. There is Kannada area to the east of the City after the villages of Khanagaon, Balekundi, Kolokop and Nandihali. All the Gram Panchayaties have passed resolutions several times and there is a natural boundary of a hill also to show this area namely Kanabargi hill and Kolikop hill. Again, it is wrongly stated that Yamanapur, Kakati, Kanaba Kudachi, Halage and Dhamane are Kannada villages. They are, on the other hand, are predominently Marathi areas. They have

passed resolutions, voted the candidates of Samiti in every election and offerred satyagraha for the cause. It is said that we have started a movement to burn this report in every village. This is not to insult the House or insult the Commission but to give expression to the feelings of the Marathi people of the border area. Sir, with great pride I wish to bring to the notice of this House that there is no bitterness among the Marathi people and Kannada people anywhere. Once I went to the Chamber of the Chief Minister two years ago for some work. Two M.L.As. also were with me; the work was, sanction of a Hobli. One M.L.A. said that he was coming from Yellur. The Chief Minister said: "ಗಲಾಟೆ ಊರಿನವರೇನು ?" meaning people from the troblesome village. I thought that it was not the proper time to convince him on this. Really, revolutionary village is that which has worked for the freedom of India and for the progress of the country now also. But, you cannot give one instance in my area about which I am speaking now, where one single Kannadiga is hurt. In my election also they worked for me. Such is the sweet relationship between Marathi and Kannada people in my area. I am explaining this just to convince all the members about the good qualities and honesty of the Marathi people. So, the common people have taken interest in this movement and they have started this movement. These people should not be pnt to slavery against their wishes. The Mysore Government are worried about the buildings. By the transfer of these buildings to the other State, for what purpose they would be put to ? The lives of lakhs of people are more important than buildings. The Government of Maharashtra have generously offered transfer of Kannada parts to Mysore. The same generous attitude is expected from Mysore. The Mysore Government appears to be worried about the language in the colleges and say that the transfer of Belgaum would involve the question of affiliation of the college with Maharashtra. The Commission has also given importance to this point. I am sorry to say that the Commission has not seen majority of Marathi institutions. I wish to suggest that if Belgaum is merged in Maharashtra we can easily solve this problem of medium of instruction. We can get Kannada institutions there which are now affiliated to Karnatak University. Sri Mahajan himself stated while recommending Nippani in Maharashtra that the Educational institutions started by K.L.E. society should not be disturbed with medium of instruction and they should be allowed to continue in Kannada. I want to bring to the notice of the House that while recommending Nippani for Maharashtra, this Commission is worried about the Kannada language and I am surprised that he has not mentioned a single word about the Marathi medium spoken by majority of students.

On page 52 the Mysore Government says:

> "that the deposits of bauxite for the aluminium factory is found at a short distance to the west of Belgaum, mostly in Ambli Ghat and Chandgad taluka".

(SRI B. P. NANDIHALI)

It means that raw material necessary for aluminium cannot be got except in Maharashtra and it proves that this aluminium factory situated in the Marathi area must be merged along with Belgaum. In regard to the water supply scheme, the scheme is about 10 miles from the city. It also proves that this water supply scheme is in Maharashtra. It proves that Belgaum city depends upon Marathi area. So it proves that the Belgaum city should be merged in Maharashtra. But I am surprised. to read that the Commission has recommended a corridor in his report. Can anybody find such an impractical suggestion anywhere? So Mahajan's recommendations are one sided and impractical and without any principle. All the relations of Belgaum City and that of 86 Marathi villages in the Taluka are culturally, socially, economically, historically and geographically with Maharashtra. Sri Mahajan says at page 87: "that the intelligentsia of the town is Maharashtrians and they wield considerable influence in the life of the city." Though he agrees, he recommends against merger with Maharashtra. He says further:

> "all the eminent Maharathi persons had emotional urges for their language.........
>
> Kannadigas including majority of Muslims and Harijans and other groups expressed the opinion for status quo with few exceptions here and there which were caused by Marathi pressure and influence."

I am surprised at these uncharitable remarks. In fact Mysore Government has used all force to oppress the Marathi people. All the officers with police department were employed for the work of evidences against Maharashtra. We have brought to the notice of the commission about the partial behaviour of the officers at the time of their sitting in Belgaum. The officers and great Congress leaders were engaged to try to give untrue evidences. We brought to the notice of the Commission then and there that a false evidence was given in the name of the Chairman of Kudchi by a Kannada person. The Chairman of the village Kudchi is Marathi as there is a Marathi majority in in Kudchi panchayat. Majority of the Harijans and Muslims are for the merger and many of them have offered satyagraha also. All the Harijans in the Marathi part of Belgaum taluka and city learn Marathi. But the Commission had no eye to see the facts and it goes on saying:

> "In my view the common man is not concerned or bothered by the language phobia. It is only the political workers".

They have rendered valuable help and sacrifice for the progress and protection of the country.

MR. CHAIRMAN.—The hon. Member has covered everything.

11-30 A.M.

Sri P. B. NANDIHALI.—This Commission has cut the lungs and heart of Belgaum Taluk by retaining Belgaum City in Karnatak. I think the common man there will not tolerate this injustice. Mahajan Report, it is said, is an award; it is not an award, it is only recommendation. I know they will pass this resolution as they have got a majority as against five of us. While passing this resolution, I request them to suggest to the Central Government to solve this burning problem in a democratic way and once for all.

† ಶ್ರೀ ಎಂ. ದೊಡ್ಡನಗೌಡ (ಸಿರಗುಪ್ಪ).—ಮಾನ್ಯ ಸಭಾಪತಿಗಳೇ, ಈ ರಾಜ್ಯ ಕಮಿಷನ್ನನ್ನು ಏರ್ಪಾಡು ಮಾಡುವಾಗ್ಗೆ ನಮ್ಮ ನಾಯಕರು ಪ್ರತಿಭಟಿಸಿದಾಗ್ಯೂ ಮಹಾರಾಷ್ಟ್ರ ಸರ್ಕಾರದ ಒತ್ತಾಯದ ಮೂಲಕ ಕಮಿಷನ್ ಏರ್ಪಾಡು ಮಾಡಲ್ಪಟ್ಟಿತು. ಆದರೆ ಕಮಿಷನ್ ವರದಿ ಬಂದ ನಂತರ ನಮಗೆ ನಷ್ಟವಾಗುತ್ತಿದ್ದರೂ ದೇಶದ ಹಿತದೃಷ್ಟಿಯಿಂದ ನಮ್ಮ ಮೈಸೂರು ಆ ವರದಿಯನ್ನು ಸ್ವಾಗತಿಸಿತು. ಆದರೆ ಮಹಾರಾಷ್ಟ್ರ ಸರ್ಕಾರ ಆ ವರದಿಯನ್ನು ತಿರಸ್ಕರಿಸಿತು. ಹಾಗೆಯೇ ಶಿವಸೇನೆ ನಾಯಕರು ಆ ವರದಿಯನ್ನು ಸುಡುವ ಕೀಳು ಕೃತ್ಯಕ್ಕೆ ಕೈಹಾಕಿದ್ದು ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ. ನಾವು 1948ರಲ್ಲಿ ಹೈದರಾಬಾದ್‌ನಲ್ಲಿ ರಜಕಾರರ ಹಾವಳಿಯನ್ನು ಯಾವರೀತಿ ನಡೆಸಿದ್ದಾರೆಂಬುದನ್ನು ನೋಡಿದ್ದೇವೆ. ಅದೇ ರೀತಿಯಾಗಿ ಬೊಂಬಾಯಿ ಸರ್ಕಾರದಲ್ಲಿಯೂ ಇದೆಯೆಂದು ನಾವು ದುಃಖದಿಂದ ಇಲ್ಲಿ ಸೂಚನೆ ಮಾಡಬೇಕಾಗಿದೆ. ಇವರ ಈಗಿನ ಒತ್ತಾಯ ರಜಕಾರರ ಒತ್ತಾಯಕ್ಕಿಂತಲೂ ಕೀಳು ಮಟ್ಟದಲ್ಲಿದೆಯೆಂದು ಹೇಳಬಹುದು, ಈ ದೇಶದಲ್ಲಿ ಈ ಗಡಿ ಪ್ರಶ್ನೆಯನ್ನು ಕಡೆಗಾಣಿಸಬೇಕು, ಇಲ್ಲದಿದ್ದರೆ ಈ ದೇಶಕ್ಕೆ ಬಹಳ ಕಷ್ಟವಿದೆ. ಅದಕ್ಕಾಗಿ ಈ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಅವರನ್ನು ಮಟ್ಟಾ ಹಾಕಲು ತೀವ್ರಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಈ ಸಭೆಯಲ್ಲಿ ಒತ್ತಾಯಪಡಿಸುತ್ತೇನೆ. ನಮಗೆ ಈ ವರದಿಯಿಂದ ಲಾಭಕ್ಕಿಂತಲೂ ಹಾನಿಯೇ ಹೆಚ್ಚಾಗಿದ್ದರೂ ದೇಶದ ಒಂದು ಹಿತದೃಷ್ಟಿಯಿಂದ ನಾವು ಇದನ್ನು ಈಗ ಒಪ್ಪಬೇಕಾಗಿದೆ. ಇದರಿಂದ ಬಹುತೇಕ ಸದಸ್ಯರು ಕರ್ಣಾಟಕ ನಿರ್ಮಾಣವಾಗುತ್ತದೆಂಬ ಭಾವನೆಯನ್ನು ಇಟ್ಟುಕೊಂಡಿದ್ದಾರೆ. ಆದರೆ ಆಂಧ್ರ ಗಡಿ ತೀರ್ಮಾನವಾಗುವವರೆಗೂ ಕರ್ಣಾಟಕ ರಾಜ್ಯದ ತೀರ್ಮಾನ ಮುಗಿಯುವುದಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ನಮಗೆ ಬರಬಹುದಾದ ಕನ್ನಡ ಭಾಗಗಳು, ಆದವಾನಿ, ರಾಯದುರ್ಗ, ಆಲೂರು ಮತ್ತು ಕುಂಬಳ, ಈ ನಾಲ್ಕು ತಾಲ್ಲೂಕುಗಳು. ಇಲ್ಲಿ ಕನ್ನಡವನ್ನು ಬಹು ಸಂಖ್ಯೆಯಲ್ಲಿ ಮಾತನಾಡತಕ್ಕ ಗ್ರಾಮಗಳಿವೆ. ಹಿಂದೆ ನಡೆದ ಶಿವಸೇನೆಯ ಚಳುವಳಿ ಬಗ್ಗೆ ಹೇಳುವುದಾದರೆ, ನಾವು ತೀವ್ರವಾಗಿ ಅದನ್ನು ಕೂಡಲೇ ಮಟ್ಟಹಾಕುವ ಪ್ರಯತ್ನವನ್ನು ತೆಗೆದುಕೊಳ್ಳಬೇಕು. ಈ ವರದಿ ಬಂದಿರುವುದು ಶ್ರೇಷ್ಠ ನ್ಯಾಯಾಧೀಶರಿಂದ. ಗಡಿ ಪ್ರಶ್ನೆಯ ಬಗ್ಗೆ ತುಲನಾತ್ಮಕವಾಗಿ ವಿಚಾರಮಾಡಿ ಕೊಟ್ಟಂಥ ಮಹಾಜನ್ ಅವರ ವರದಿಯು ಇದಾಗಿದೆ. ಇದರಿಂದ ನಮ್ಮ ದೇಶಕ್ಕೆ ಸ್ವಲ್ಪಮಟ್ಟಿಗೆ ನಷ್ಟವಾಗಿದ್ದರೂ ನಾನು ಈ ವರದಿಯನ್ನು ಸಮರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಮಾನ್ಯ ಸಭಾಧ್ಯಕ್ಷರೇ, ಈ ದಿನ ನಾವು ಚರ್ಚಿಸುವ ವಿಷಯ ಅತಿ ವಿಚಿತ್ರವಾದುದು ಮತ್ತು 7ಗಹನವಾದುದಾಗಿದೆ. ಏಕೆಂದರೆ ಈಗ ಈ ಮಹಾಜನ್ ಸಮಿತಿಯವರ ವರದಿಯನ್ನು ನಾವು ಚರ್ಚಿಸುವ ಸಮಯದಲ್ಲಿ ಕೇಂದ್ರಸರ್ಕಾರದಲ್ಲಿ ಗೃಹ ಮಂತ್ರಿಗಳು ಮಾಡಿರುವಂಥ ಒಂದು ಕುತಂತ್ರದ ಫಲವಾಗಿ ಈ ದಿನ ಅವರು ರಾಷ್ಟ್ರದ ವಿವಿಧ ವಿರೋಧ ಪಕ್ಷಗಳ ನಾಯಕರನ್ನು ಕರೆಸಿ ಈ ರಾಷ್ಟ್ರದ ನಾಯಕರ ಮನೋಭಾವನೆಯನ್ನು ಕ್ರೋಢೀಕರಿಸುತ್ತೇವೆಂದು ಹೇಳಿದರು. ಈ ಗಡಿ ವಿವಾದ ಹೇಗಿದೆಯೆಂದರೆ, ಕಾಂಗ್ರೆಸ್ಸಿನ ವಿಷವೃಕ್ಷದಲ್ಲಿ ಬಿಟ್ಟಂಥ ಕಹಿ ಫಲದಂತೆ ವಿಚಿತ್ರವಾದ ಸಂಗತಿಯಾಗಿದೆ. ಒಮ್ಮೆ ಎಸ್.ಆರ್. ಕಮಿಷನ್ನಿನವರು ಕೊಟ್ಟಂಥ ವರದಿಯನ್ನು ಲೋಕಸಭೆಯಲ್ಲಿ ಮಂಡಿಸಿದಾಗ್ಗೆ ಅನೇಕ ತಿದ್ದುಪಡಿಗಳು ಬಂದುವು. ಆ ತಿದ್ದುಪಡಿಗಳನ್ನು ತಳ್ಳಿಹಾಕಿ ಪಾರ್ಲಿಮೆಂಟ್ ಇಡೀ ದೇಶವಲ್ಲಿ ಇದನ್ನು ಜಾರಿಗೆ ತರುವುದು ಶ್ರೇಷ್ಠವೆಂದು ಒಪ್ಪಿಕೊಂಡ ಮೇಲೆ, ಈಗ ಅಧಿಕಾರ ಪಡೆದಿರತಕ್ಕ ಈ ಒಂದು ಮಹಾ ಸಂಸ್ಥೆ ಎನಿಸಿದೆ ಅದು ಎಸ್.ಆರ್.ಸಿ. ವರದಿಯನ್ನು ಒಪ್ಪಿಕೊಂಡಿದ್ದರೂ ಮಹಾರಾಷ್ಟ್ರ ಕಾಂಗ್ರೆಸ್ ಮುಖಂಡತ್ವದ ಒತ್ತಡಕ್ಕೆ ಸಿಕ್ಕಿ ಗಡಿ ವಿವಾದವನ್ನು ಮತ್ತೊಮ್ಮೆ ಹೊರಕ್ಕೆ ತೆಗೆದಿದ್ದಾರೆ. ಇದು ಹೇಗಿದೆಯೆಂದರೆ ಯಾವುದೋ ಒಂದು ಭೂತವನ್ನು ಆಳವಾದ ಭೂಮಿಯಲ್ಲಿ ಹೂತಿಟ್ಟಿದ್ದು

(ಶ್ರೀ ಹೆಚ್. ಬಿ. ಜ್ವಾಲನಯ್ಯ)

ದನ್ನು ಪುನಃ ಹೊರಕ್ಕೆ ತೆಗೆದುತೋರಿಸುವಂತಿದೆ. ಎಸ್.ಆರ್.ಸಿ. ವರದಿಗೆ ಲೋಕಸಭೆಯಲ್ಲಿ ಮುದ್ರೆ ಬಿದ್ದಮೇಲೆ ಮತ್ತೊಮ್ಮೆ ಇಂತಹ ಬೇರೆ ಸಮಿತಿಯನ್ನು ರಚಿಸಬೇಕಾಗಿದ್ದರೆ ಮೊಟ್ಟ ಮೊದಲನೆಯದಾಗಿ ಅದು ಪಾರ್ಲಿಮೆಂಟಿಗೆ ಬರಬೇಕಾಗಿತ್ತು. ಲೋಕಸಭೆಗೆ ಬರಬೇಕಾಗಿತ್ತು. ಆ ರೀತಿ ಮಾಡುವುದನ್ನು ಬಿಟ್ಟು ಕಾಂಗ್ರೆಸ್ ಸರ್ಕಾರವೇ ಅಧಿಕಾರದ ವ್ಯಭಿಚಾರವನ್ನು ಹೀಗೆ ಮಾಡಿವೆ ಎಂದು ಹೇಳಿದರೆ ತಪ್ಪಾಗಲಾರದು. ಇದರ ಬಗ್ಗೆ ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರು ಅನೇಕ ವಿಚಾರಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಆದರೆ ಒಂದು ವಿಚಾರವನ್ನು ಅವರು ಮರೆಯಕೂಡದು. ಮಹಾರಾಷ್ಟ್ರದಲ್ಲಾಗಲೀ ಅಥವಾ ಕರ್ಣಾಟಕದಲ್ಲಾಗಲೀ ಸುಮಾರು 500 ಮೈಲಿಗಳ ಉದ್ದದವರೆಗೂ ತಕರಾರು ಇರತಕ್ಕ ಪ್ರದೇಶಗಳು ಇವೆಯೆಂಬುದನ್ನು ಅವರು ತಿಳಿಯಬೇಕು. ಈಗ ಅವು ಯಾವ್ಯಾವ ರಾಜ್ಯಕ್ಕೆ ಸೇರಿವೆಯೆಂಬುದನ್ನು ನೋಡಿದರೆ, 1901ರಲ್ಲಿ ಆಗಿನ ಸೆನ್ಸಸ್ ಪ್ರಕಾರ ಬೆಳಗಾಂ ಜಿಲ್ಲೆಯಲ್ಲಿ ಶೇಕಡ 75ರಷ್ಟು ಕನ್ನಡಿಗರು ಇದ್ದರು. 1928ರಲ್ಲಿ ಅಖಿಲಭಾರತ ಕಾಂಗ್ರೆಸ್ ಅಧಿವೇಶನ ನಡೆದಾಗ ಮಹಾರಾಷ್ಟ್ರದ ನಾಯಕರು ಬೆಳಗಾಂ ಕರ್ಣಾಟಕ ಕನ್ನಡ ರಾಜ್ಯಕ್ಕೇ ಸೇರಬೇಕೆಂದು ಹೇಳಿದ್ದಾರೆ. ಈಗ ಈ ವಿವಾದವನ್ನು ಸಮರ್ಥಿಸುವುದಕ್ಕೋಸ್ಕರ ಅನುಸರಿಸಿದ ಮಾರ್ಗವನ್ನು ಯಾವ ಪ್ರಜಾಪ್ರಭುತ್ವ ವಾದಿಗಳಿಗೂ ಕೂಡ ಅದರಲ್ಲಿ ನಂಬಿಕೆಯುಳ್ಳವರು ಖಂಡಿತವಾಗಿ ಒಪ್ಪುವುದಿಲ್ಲವೆಂಬುದಾಗಿದೆ. ಇದಲ್ಲದೆ ಈ ರಾಷ್ಟ್ರದಲ್ಲಿರತಕ್ಕ ವಿರೋಧಪಕ್ಷಗಳ ನಾಯಕರೆಲ್ಲರ ಅಭಿಪ್ರಾಯವನ್ನು ಇದರ ಬಗ್ಗೆ ಕ್ರೋಢೀಕರಿಸುತ್ತೇವೆಂಬುದಾಗಿ ಕೇಂದ್ರದ ಗೃಹಸಚಿವರಾದ ಶ್ರೀ ಚವಾಣ್ ಅವರು ಹೇಳಿದ್ದಾರೆ. ಯಾರಾದರೂ ಕೇಂದ್ರದ ಗೃಹಮಂತ್ರಿಗಳ ಈ ಅಭಿಪ್ರಾಯವನ್ನು ಸರಿ ಎಂಬುದಾಗಿ ಒಪ್ಪಿಕೊಳ್ಳುವುದಾದರೆ, ಅವರ ಆ ಒಂದು ಅಭಿಪ್ರಾಯ ಖಂಡಿತವಾಗಿ ಸಾಧುವಾದುದಿಲ್ಲ.

ರಾಷ್ಟ್ರದ ವಿರೋಧಪಕ್ಷದ ನಾಯಕರುಗಳು ಈಗ ಯಾರು ಯಾರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆಯೋ ಅವರು ಗೃಹಮಂತ್ರಿಗಳ ಒತ್ತಾಯಕ್ಕೆ ಮಣಿದು ಮಹಾರಾಷ್ಟ್ರದವರಿಗೆ ಅನುಕೂಲವಾಗತಕ್ಕಂಥ ವಿಷಯಗಳಿಗೆ ಯಾರು ಯಾರು ಒಪ್ಪಿಕೊಂಡಿದ್ದಾರೆಯೋ ಗೊತ್ತಿಲ್ಲ. ಅವರು ಏನು ಮಾಡಬೇಕಾಗಿತ್ತು ಎಂದರೆ ಪ್ರಾಂತ್ಯಗಳಲ್ಲಿರುವ ವಿರೋಧಪಕ್ಷದವರ ನಾಯಕರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾಗಿತ್ತು. ಈ ವಿಚಾರದಲ್ಲಿ ರಾಷ್ಟ್ರೀಯ ಮಟ್ಟದ ನಾಯಕರ ಅಭಿಪ್ರಾಯವನ್ನು ತೆಗೆದುಕೊಳ್ಳುವುದಕ್ಕೆ ಯೋಚನೆಮಾಡಿದ್ದು ಸರಿಯಲ್ಲ. ಈ ಒಂದು ಕಮಿಷನ್ ನೇಮಕವಾಗುವುದಕ್ಕೆ ಮಹಾರಾಷ್ಟ್ರದ ನಾಯಕರು ಮತ್ತು ಶ್ರೀಮಾನ್ ಚವಾಣ್ ಅವರೇ ಕಾರಣ ಎಂದು ಹೇಳಿದರೆ ತಪ್ಪಾಗಲಾರದು. ಮಹಾರಾಷ್ಟ್ರದವರು ಮತ್ತು ಕೇಂದ್ರದ ನಾಯಕರು ಸೇರಿಕೊಂಡು ಮಾಡಿದಂತಹ ಈ ಮಹಾಜನ್ ಸಮಿತಿ ಏನಿದೆ ಇದು ಕಾಂಗ್ರೆಸ್ಸಿನ ವ್ಯಭಿಚಾರದ ಕೂಸು. ನಾವು ಹಿಂದೆ ಏಕಸದಸ್ಯ ಆಯೋಗ ಬೇಡ ಎಂದು ಒತ್ತಾಯಪೂರ್ವಕವಾಗಿ ಹೇಳಿದ್ದೇವೆ. ಕೇಂದ್ರದ ಗೃಹ ಖಾತೆಯ ಸಚಿವರಾದ ಚವಾಣ್ ಅವರು ಮಹಾರಾಷ್ಟ್ರದವರ ಹಿತವನ್ನು ಕಾಪಾಡಿದ್ದಾರೆ. ಮಹಾರಾಷ್ಟ್ರದವರ ಕುಜೋದ್ಯಕ್ಕೆ ಪ್ರೋತ್ಸಾಹಕೊಟ್ಟು ಕೇಂದ್ರದ ನಾಯಕರನ್ನು ಒಲಿಸಿಕೊಂಡು ಅವರ ಬೆಂಬಲದಿಂದ ಏಕಸದಸ್ಯ ಯೋಗವನ್ನು ರಚಿಸಿದರು. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಹಾಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಕೂಡ ಈ ಕಮಿಷನ್ನಿನ ತೀರ್ಪನ್ನು ಒಪ್ಪಿಕೊಳ್ಳುವುದಾದರೆ ಈ ಸಮಿತಿಯ ರಚನೆಗೆ ನಾನು ಒಪ್ಪುತ್ತೇನೆಂದು ಹೇಳಿದಾಗ ಈ ಕಮಿಷನಿನ್ನ ತೀರ್ಮಾನಕ್ಕೆಒಪ್ಪಿಕೊಳ್ಳುತ್ತೇವೆ ಎನ್ನುವ ರೀತಿಯಲ್ಲಿ ಅವರು ಭರವಸೆಯನ್ನು ಕೊಟ್ಟಿದ್ದಾರೆ. ಈಗ ಆ ಭರವಸೆಯೆಲ್ಲಾ ಗಾಳಿಗೆ ತೂರಿಹೋಗಿವೆ. ಈ ಒಂದು ಸಮಿತಿ ನೇಮಕವಾದಾಗ ಮೈಸೂರಿನಲ್ಲಿಯೂ ಕಾಂಗ್ರೆಸ್ ಸರ್ಕಾರವಿತ್ತು, ಮಹಾರಾಷ್ಟ್ರದಲ್ಲಿಯೂ ಕಾಂಗ್ರೆಸ್ ಸರ್ಕಾರ ಇತ್ತು. ಮತ್ತು ಕೇಂದ್ರದಲ್ಲಿಯೂ ಕಾಂಗ್ರೆಸ್ ಸರ್ಕಾರವೇ ಇತ್ತು. ಆದ್ದರಿಂದ ಇದಕ್ಕೆ ಕಾಂಗ್ರೆಸ್ಸಿನವರೇ ಕಾರಣಬದ್ಧರಾಗಿದ್ದಾರೆ. ಈ ಒಂದು ಮುಖ್ಯವಾದ ವರದಿಯನ್ನು ಲೋಕಸಭೆಯಲ್ಲಿ ತರುವುದಕ್ಕೆ ಮುಂಚೆ ಅಲ್ಲಿ ಒಂದು ವಿಚಿತ್ರವಾದ ವ್ಯವಸ್ಥೆ ನಾಟಕ ನಡೆಯುತ್ತಿದೆ. ಅದು ಯಾವುದು ಎಂದರೆ, ಇಡೀ ದೇಶಕ್ಕೆ ಅನ್ವಯವಾಗುವ ಭಾಷಾ ಸಮಸ್ಯೆಯನ್ನು ತೆಗೆದುಕೊಂಡಿದ್ದಾರೆ. ಆ ಒಂದು ಗೊಂದಲ ಸಮಸ್ಯೆ ಇರುವಾಗ ಇಗನ್ನು ತೀರ್ಮಾನ ಮಾಡುವುದಕ್ಕೆ ಹೊರಟಿದ್ದಾರೆ. ಕೇರಳದಲ್ಲಿರತಕ್ಕ 3 ಕನ್ನಡ ಫಿರ್ಕಾಗಳು ಕರ್ನಾಟಕಕ್ಕೆ ಸೇರಬೇಕೆಂದು ಆ ಭಾಗದ ಜನರು ಕೊಟ್ಟಂತಹ ಹೇಳಿಕೆಗಳನ್ನು ಮತ್ತು ಬೇಡಿಕೆಗಳನ್ನು ಹಿಂದೆ ನಿರ್ಲಕ್ಷಿಸಿಲಾಗಿತ್ತು. ಆದರೆ ಈಗ ಈ ಮಹಾಜನ್ ಕಮಿಷನ್‌ನವರು ಎಲ್ಲಾ ವಿಷಯಗಳನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡಿ ಚಂದ್ರಗಿರಿ ನದಿಯ ಉತ್ತರಕ್ಕಿರುವ ಮೂರು ಕನ್ನಡ ಫಿರ್ಕಾಗಳೂ ಮೈಸೂರಿಗೆ ಸೇರುವಂತೆ ಈ ವರದಿಯಲ್ಲಿ ಶಿಫಾರಸ್ಸು ಮಾಡಿದ್ದಾರೆ. ಇದರಿಂದ ಕಾಸರಗೋಡಿನ ತಾಲ್ಲೂಕಿನ ಮೂರು

ಕನ್ನಡ ಫಿರ್ಕಾಗಳೂ ಮೈಸೂರಿಗೆ ಸೇರಬೇಕಾಗಿದೆ. ಈ ಕಾಸರಗೋಡಿನ ಮೂರು ಫಿರ್ಕಾಗಳು ಮಂಗಳೂರಿಗೆ 28 ಮೈಲಿಗಳಾಗುತ್ತದೆ. ಕಣ್ಣಾನೂರಿಗೆ 64 ಮೈಲಿಗಳಾಗುತ್ತದೆ. ಟ್ರಿವಂಡ್ರಮ್ ಕೂರಿಗೆ 600 ಮೈಲಿಗಳಾಗುತ್ತದೆ. ಬೆಂಗಳೂರಿಗೆ 280 ಮೈಲಿಗಳಾಗುತ್ತದೆ. ವ್ಯಾಪಾರದ ಬಾಂಧವ್ಯದ ದೃಷ್ಟಿಯಿಂದಲೂ ಕೂಡ ಆ ಮೂರು ಫಿರ್ಕಾಗಳೂ ಕರ್ನಾಟಕಕ್ಕೆ ಬರಬೇಕು. ಅಲ್ಲಿ ಮಲೆಯಾಳಿ ಸ್ಕೂಲುಗಳು 3–4 ಇವೆ. ಕನ್ನಡ ಶಾಲೆಗಳು ಬಹಳ ಹೆಚ್ಚಾಗಿವೆ; ಮತ್ತು ಅಲ್ಲಿರತಕ್ಕ ಸಬ್‌ರಿಜಿಸ್ಟ್ರಾರ್ ಅವರ ಆಫೀಸಿನಲ್ಲಿ ಕನ್ನಡ ಪತ್ರಗಳು 4–5 ಸಾವಿರ ರಿಜಿಸ್ಟರಾದರೆ ಮಲೆಯಾಳಿ ಪತ್ರಗಳು 50–60 ಪತ್ರಗಳು ರಿಜಿಸ್ಟರಾಗುತ್ತಿವೆ; ಈ ಎಲ್ಲಾ ದೃಷ್ಟಿಯಿಂದಲೂ ಕೂಡ ಆ ಪ್ರದೇಶದ ಜನಗಳು ಕರ್ನಾಟಕಕ್ಕೆ ಸೇರಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಈ ಮಹಾಜನ್ ಅವರ ವರದಿಯ ಪ್ರಕಾರ ಬಹು ಸಮೃದ್ಧಿಯಾದ ಎರಡು ಕನ್ನಡ ಪ್ರದೇಶಗಳು ನಮ್ಮ ಕೈಬಿಟ್ಟು ಹೋಗುತ್ತವೆ. ಅವು ಯಾವುವೆಂದರೆ, ನಿಪ್ಪಾಣಿ ಮತ್ತು ಖಾನಾಪುರ. ಆ ಪ್ರದೇಶಗಳು ನಮ್ಮ ಕೈಬಿಟ್ಟು ಹೋಗುವುದಕ್ಕೆ ಕಾರಣವಿಲ್ಲ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಮಹಾ ಔದಾರ್ಯದಿಂದ ಈ ವರದಿ ಬಹಳ ಚೆನ್ನಾಗಿದೆ, ಇದನ್ನು ನಾವು ಒಪ್ಪಿಕೊಳ್ಳಬೇಕು, ಇಲ್ಲದಿದ್ದರೆ ಕನ್ನಡಿಗರು ಸೌಜನ್ಯವನ್ನು ಬಿಟ್ಟಂತಾಗುತ್ತದೆ ಎಂದು ಹೇಳಿದಂತಹ ಮಾತನ್ನು ವಿಷಾದದಿಂದ ಖಂಡಿಸಬೇಕಾಗಿದೆ. ರಾಜ್ಯ ರಾಜ್ಯಗಳ ಗಡಿ ತಂಟೆಯನ್ನು ಪರಿಹರಿಸುವುದಕ್ಕೋಸ್ಕರ ಒಂದು ಕಮಿಷನ್ ನೇಮಕ ಮಾಡೋಣ ಎಂದು ಮಹಾರಾಷ್ಟ್ರದವರು ಮುಂದೆ ಬಂದು ಒಂದು ಏಕ ಸದಸ್ಯ ಆಯೋಗವನ್ನು ನೇಮಕಮಾಡುವುದಕ್ಕೆ ಪ್ರಯತ್ನ ಮಾಡಿದರು. ಈ ಒಂದು ಕಮಿಷನ್ ನೇಮಕವಾದಮೇಲೆ ನಮ್ಮ ಗಡೀ ತಂಟೆಗಳೆಲ್ಲವೂ ಪರಿಹಾರವಾಗುತ್ತವೆ ಎಂದು ಭಾವಿಸೋಣ ಎಂದು ಹೇಳಿದರು. ಆದರೆ ಇವೊತ್ತು ಈ ವರದಿ ಬಂದಮೇಲೆ ಮಹಾರಾಷ್ಟ್ರದವರು ಏನೇನೋ ತಂಟೆ ತಕರಾರುಗಳನ್ನು ಮಾಡುತ್ತಿದ್ದಾರೆ. ಈ ದೃಷ್ಟಿಯಿಂದ ನೋಡುವುದಾದರೆ ಕನ್ನಡಿಗರು ಕೆಟ್ಟದಾರಿಯಲ್ಲಿ ಹೊರಟರೆ ಕನ್ನಡದ ಒಂದು ಇಂಚು ನೆಲವನ್ನೂ ಕೂಡ ಬೇರೆಯವರಿಗೆ ಬಿಟ್ಟುಕೊಡುವುದಕ್ಕೆ ತಯಾರಿಲ್ಲ. ಹೋರಾಟ ಮಾಡುವುದಕ್ಕೆ ತಯಾರಾಗಿದ್ದಾರೆ. ಮಹಾರಾಷ್ಟ್ರ ವಾದಿಗಳು ಇದನ್ನು ವಿಚಾರ ಮಾಡಬೇಕು. ಈ ಸಭೆಯಲ್ಲಿರತಕ್ಕ ನಮ್ಮ ಮಿತ್ರರಾದ ಮಹಾರಾಷ್ಟ್ರ ವಾದಿಗಳೂ ಈ ವಿಚಾರವನ್ನು ತಿಳಿದುಕೊಳ್ಳಬೇಕು. ಮೊದಲಿನಿಂದಲೂ ಕನ್ನಡಿಗರು ಸೌಜನ್ಯ ರೀತಿಯಿಂದ ನಡೆದುಕೊಂಡು ಬಂದಿದ್ದಾರೆ. ಆದರೆ ಬೊಂಬಾಯಿಯಲ್ಲಿ ಶಿವಸೇನೆಯವರು ಕನ್ನಡಿಗರ ಮೇಲೆ ಯಾವರೀತಿ ವರ್ತನೆ ಮಾಡಿದ್ದಾರೆಂಬುದನ್ನು ನೋಡಿದರೆ ನಿಜವಾಗಿಯೂ ಅದು ಅವರಿಗೆ ತಕ್ಕುದಲ್ಲ. ಕನ್ನಡಿಗರು, ಸೌಜನ್ಯ ವ್ಯಕ್ತಿಗಳು, ಅವರಿಗೆ ಏನಾದರೂ ಕೆಟ್ಟದ್ದು ಆದರೆ ಅವರು ಯಾವ ವಿಧವಾದ ಹೋರಾಟವನ್ನು ಬೇಕಾದರೂ ಮಾಡುವುದಕ್ಕೆ ಸಿದ್ಧರಾಗಿದ್ದಾರೆ. ಇವೊತ್ತಿನ ದಿವಸ ಮಹಾರಾಷ್ಟ್ರದವರು ನಮ್ಮ ಈ ಗಡೀ ಸಮಸ್ಯೆಯ ಬಗ್ಗೆ ತಳೆದಿರತಕ್ಕ ಧೋರಣೆ, ಮಾಡತಕ್ಕಂಥ ಕೃತ್ಯಗಳನ್ನು ನೋಡಿಕೊಂಡು ನಮ್ಮ ಕನ್ನಡ ನಾಡಿನ ಮಂತ್ರಿ ಮಂಡಲದವರು ಏನು ಮಾಡುತ್ತಿದ್ದಾರೆ? ಈ ಒಂದು ಸಮಸ್ಯೆಯನ್ನು ಇತ್ಯರ್ಥಮಾಡುವುದಕ್ಕೆ ಪ್ರಯತ್ನ ಮಾಡದೆ ತೂಗಡಿಸುತ್ತಿದ್ದಾರೆ. ಕನ್ನಡಿಗರಿಗೆ ಅವಮಾನವಾಗತಕ್ಕಂಥ ಸಂದರ್ಭದಲ್ಲಿ ಇವರು ಅಧಿಕಾರಕ್ಕೋಸ್ಕರ ಅಂಟಿಕೊಂಡು ಇದರ ಬಗ್ಗೆ ಸರಿಯಾದಂತಹ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡದೇ ಇರುವುದು ಸರಿಯಲ್ಲ. ಕೇಂದ್ರದಲ್ಲಿ ಈ ಗಡೀ ಸಮಸ್ಯೆಯ ಬಗ್ಗೆ ಕೇಂದ್ರದ ಗೃಹಸಚಿವರಾದ ಶ್ರೀ ಚವಾನ್ ಅವರು ಏನೊಂದು ಕೆಲಸವನ್ನು ಮಾಡುತ್ತಿದ್ದಾರೆಯೋ ಇದನ್ನು ಇದು ಒಂದು ದಬ್ಬಾಳಿಕೆ ಎಂದು ನಾವು ಹೇಳಬೇಕಾಗಿದೆ. ಈ ಗಡೀ ಸಮಸ್ಯೆಯ ಬಗ್ಗೆ ಅವರು ರಾಷ್ಟ್ರೀಯ ಮಟ್ಟದ ವಿರೋಧಪಕ್ಷದ ನಾಯಕರ ಅಭಿಪ್ರಾಯವನ್ನು ಕ್ರೋಢೀಕರಿಸುತ್ತಿರುವುದು ಸರಿಯಲ್ಲ. ಇದನ್ನು ಪ್ರಜಾಪ್ರಭುತ್ವ ರೀತಿಯಿಂದ ಇತ್ಯರ್ಥ ಮಾಡಬೇಕಾಗಿದ್ದರೆ ಲೋಕಸಭೆಯಲ್ಲಿ ಇಟ್ಟು ಅದರ ಮಂಜೂರಾತಿಯನ್ನು ಪಡೆಯಬೇಕಾಗಿತ್ತು. ಇನ್ನೊಂದು ವಿಷಯವೇನೆಂದರೆ, ಈ ಮಹಾಜನ್ ವರದಿಯ ಬಗ್ಗೆ ಕೆಲವರು ಬಹಳ ಲಘುವಾಗಿ ಮಾತನಾಡಿದ್ದಾರೆ. ಮತ್ತು ಎಲ್ಲಿಯವರೆಗೆ ಹೋಗಿದ್ದಾರೆ ಎಂದರೆ, ಮಹಾಜನ್ ಅವರು ನಿಧನರಾದ ದಿವಸ ಮಹಾರಾಷ್ಟ್ರದವರು ಮಿಠಾಯಿ ಹಂಚಿದ್ದಾರೆ. ಮಹಾರಾಷ್ಟ್ರದವರ ಒಂದು ಒತ್ತಾಯಕ್ಕಾಗಿ ಮಹಾಜನ್ ಅವರು ಈ ಕಮಿಷನ್ನಿಗೆ ಏಕಸದಸ್ಯರಾಗಿ ಬಂದು ವಿವಾದಕ್ಕೊಳಗಾಗಿರತಕ್ಕ ಗಡೀ ಪ್ರದೇಶಗಳಲ್ಲೆಲ್ಲಾ ಸಂಚಾರ ಮಾಡಿ ಎಲ್ಲಾ ವಿಷಯಗಳನ್ನೂ ಕ್ರೋಢೀಕರಿಸಿ ಶ್ರೇಷ್ಠ ನ್ಯಾಯಾಧೀಶರ ಒಂದು ತೀರ್ಪನ್ನು ಕೊಟ್ಟಿದ್ದಾರೆ. ಈಗ ಕೇಂದ್ರದ ಗೃಹ ಖಾತೆಯ ಸಚಿವರು ಇದನ್ನು ಇದು ಅವಾರ್ಡಲ್ಲ ಒಂದು ರೆಕಮೆಂಡೇಷನ್ ಎಂದು ಹೇಳಿದ್ದಾರೆ. ಈ ಮಹಾಜನ್ ಅವರ ಸಮಿತಿಯವರು ಈ ವರದಿಯನ್ನು ಮಾಡುವುದಕ್ಕೋಸ್ಕರ ಕೇಂದ್ರ ಸರ್ಕಾರದವರು ಯಾವ ಒಂದು ಮಿತಿಯನ್ನು ಹಾಕಿಲ್ಲ, ಯಾವ ಒಂದು ಕಂಡೀಷನ್ ಅನ್ನೂ ಹಾಕಿಲ್ಲ. ಆದ್ದರಿಂದ ಮಹಾಜನ್ ಕಮಿಷನ್ನಿನವರಿಗೆ ಯಾವ ಕಂಡೀಷನ್ ಹಾಕದೆ ಅವರು ತಮ್ಮ ಒಂದು ತೀರ್ಪನ್ನು ಕೊಡಲಿ ಎಂದು ಕೇಂದ್ರದ ಗೃಹಮಂತ್ರಿಗಳಾದ ಶ್ರೀಮಾನ್ ಚವಾನ್ ಅವರು ಒಪ್ಪಿಗೆ

(ಶ್ರೀ ಎಚ್. ಬಿ. ಜ್ವಾಲನಯ್ಯ)

ಯನ್ನು ಕೊಟ್ಟಿದ್ದಾರೆ. ಈಗ ಈ ಮಹಾಜನ್ ಅವರು ಏನು ಒಂದು ವರದಿಯನ್ನು ಕೊಟ್ಟಿದ್ದಾರೆಯೋ ಅದನ್ನು ಕೇಂದ್ರ ಸರ್ಕಾರದವರು ಒಪ್ಪಿಕೊಳ್ಳದೇ ಹೋದರೆ, ಇನ್ನು ಮುಂದೆ ಇಂಥಾ ಸಮಿತಿಗಳಿಗೆ ಯಾವ ನ್ಯಾಯಾಧೀಶರನ್ನೂ ಸಮಿತಿಯ ಸದಸ್ಯರಾಗಿ ಕೆಲಸ ಮಾಡುವುದಕ್ಕೆ ಅವಕಾಶವನ್ನು ಕೊಡಬೇಡಿ ಎಂದು ಶ್ರೀಮಾನ್ ಮಹಾಜನ್ ಅವರೇ ಕೇಂದ್ರ ಸರ್ಕಾರಕ್ಕೆ ಒಂದು ಕಾಗದವನ್ನು ಬರೆಯಬೇಕೆಂದು ಯೋಚನೆ ಮಾಡುತ್ತಿದ್ದರು ಎಂದು ಗೊತ್ತಾಗಿದೆ. ಇದರಿಂದ ನ್ಯಾಯಾಲಯದ ನ್ಯಾಯಾಧೀಶರಿಂದ ಪ್ರಜಾಪ್ರಭುತ್ವದ ರಕ್ಷಣೆಯನ್ನು ಪಡೆಯುವುದಕ್ಕೆ ಸಾಧ್ಯ ಎಂಬುವನ್ನು ತೋರಿಸ ಬೇಕಾಗಿದೆ. ಈ ಎಲ್ಲಾ ದೃಷ್ಟಿಯಿಂದ ನೋಡುವುದಾದರೆ, ಎಲ್ಲಾ ಅನಾಹುತಗಳಿಗೂ, ಹಾನಿ ಹಲಕ್ಕೂ ಕಾಂಗ್ರೆಸ್ಸಿಗರೇ ಕಾರಣವೆಂದು ಹೇಳಬಹುದು. ಒಂದು ರೀತಿಯಲ್ಲಿ ನಮ್ಮ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರೇ ಕಾರಣರು ಎಂದು ಹೇಳಿದರೆ ತಪ್ಪಾಗಲಾರದು. ಶ್ರೀ ನಿಜಲಿಂಗಪ್ಪನವರ ಸ್ವಪಕ್ಷಪೂರಿತವಾದ ಭಾವನೆಯನ್ನು ಮಹಾರಾಷ್ಟ್ರದವರು ದೌರ್ಬಲ್ಯ ಎಂದು ತಿಳಿದಿದ್ದಾರೆ. ಇವತ್ತು ನಮ್ಮ ಮುಖ್ಯ ಮಂತ್ರಿಗಳು ಕಾಂಗ್ರೆಸ್ ಅಧ್ಯಕ್ಷರಾಗಿ ಹೋಗು ತ್ತಿದ್ದಾರೆ. ಇಂತಹ ಒಂದು ಸಂದರ್ಭದಲ್ಲಿ ಅವರು ಅಧ್ಯಕ್ಷರಾಗಿ ಹೋದಮೇಲೆ, ಕರ್ನಾಟಕಕ್ಕೆ ಆಗಿರುವಂತಹ ಅನ್ಯಾಯವನ್ನು ಸರಿಪಡಿಸಲಿಕ್ಕೆ ಪ್ರಯತ್ನ ಮಾಡಬೇಕು. ಈ ಸಭೆಯಲ್ಲಿ ಮಹಾಜನ್ ವರದಿಯನ್ನು ಚರ್ಚೆಮಾಡಿ, ಆ ಮೂಲಕ ಕೇಂದ್ರ ಸರ್ಕಾರ ಒಪ್ಪಿಕೊಳ್ಳುವಂತಹ ಪ್ರಾರ್ಥನಾ ಮನೋಭಾವವನ್ನು ಸರ್ಕಾರದವರು ಬಿಟ್ಟು ಇದಕ್ಕಿಂತ ವಿಶೇಷವಾದ ವ್ಯವಸ್ಥೆ ಮಾಡಬೇಕು. ನಾವು ಮತ್ತು ನೀವು ಎಲ್ಲರೂ ಕೂಡಿ ಅಖಂಡ ಸ್ಥಿತಿಯಲ್ಲಿ ಈಗ ತಂದಿರುವ ಪ್ರಸ್ತಾವವನ್ನು ಸುಧಾರಣೆ ಮಾಡಬೇಕಾಗಿದೆಯೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಲೀಲಾವತಿ ರೈ (ಬಂಟ್ವಾಳ್)—ಮಾನ್ಯ ಸಭಾಪತಿಗಳೇ, ಇಲ್ಲಿ ನಮ್ಮ ಮುಂದೆ ಮಂಡಿಸಿರುವ ಮಹಾಜನ್ ವರದಿಯನ್ನು ಪುಷ್ಟೀಕರಿಸುತ್ತಾ ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಭಾಷಾವಾರು ದೃಷ್ಟಿಯಿಂದ ಪ್ರಾಂತ್ಯಗಳನ್ನು ರಚನೆಮಾಡಿದ ಎಸ್. ಆರ್. ಸಿ. ವರದಿ ಮೇರೆಗೆ ನಮ್ಮ ಕನ್ನಡ ನಾಡಿಗೆ ಬಹಳ ಅನ್ಯಾಯವಾಗಿದೆ. ಕನ್ನಡ ನಾಡಿ ನಲ್ಲೇ ಇರಬೇಕಾದ ಕೆಲವು ಭಾಗಗಳನ್ನು ಬೇರೆ ಬೇರೆ ಪ್ರಾಂತ್ಯಗಳಿಗೆ ಸೇರಿಸಿದ್ದಾರೆ. ಬಹಳ ಪ್ರಾಮುಖ್ಯವಾದ ಕನ್ನಡದ ಭಾಗಗಳು ನಮ್ಮ ಕೈಬಿಟ್ಟು ಹೋಗಿವೆ. ಅವುಗಳಲ್ಲಿ ಕಾಸರಗೋಡು ಸಹ ಒಂದು. ಕಾಸರಗೋಡು ನಮ್ಮ ಕೈಬಿಟ್ಟು ಕೇರಳಕ್ಕೆ ಹೋದಮೇಲೆ ನನ್ನ ಮಿತ್ರರು ಹೇಳಿ ದಂತೆ, ಕಾಸರಗೋಡನ್ನು ಕೇರಳ ಸರ್ಕಾರದವರು ತಮ್ಮ ಮಗುವಿನಂತೆ ಅಂಗೀಕರಿಸದೆ, ಮಲ ತಾಯಿ ಧೋರಣೆಯಿಂದ ಕಾಣುತ್ತಿದ್ದಾರೆಂದು ನಾನು ಒತ್ತಿ ಒತ್ತಿ ಹೇಳುತ್ತೇನೆ. ಕಾಸರಗೋಡು ಕೇರಳಕ್ಕೆ ಸೇರಿ 11 ವರ್ಷಗಳಾಯಿತು. ಕೇರಳ ಸರ್ಕಾರದವರು ಆ ಭಾಗದಲ್ಲಿ ಸರಿಯಾದ ಸಾರಿಗೆ ಸಂಪರ್ಕವನ್ನು ಏರ್ಪಡಿಸಿಲ್ಲ ಮತ್ತು ಯಾವ ಒಂದು ಕಾಮಗಾರಿಗಳನ್ನೂ ಮಾಡಿಸದೆ ಕಾಡಿನಂತೆ ಬಿಟ್ಟಿದ್ದಾರೆ. ಇದನ್ನೆಲ್ಲಾ ನೋಡಿದರೆ ಕೇರಳ ಸರ್ಕಾರದವರು ಕಾಸರಗೋಡನ್ನು ಮಲತಾಯಿ ಯಂತೆ ಸಾಕುತ್ತಿದ್ದಾರೆಂದು ಗೊತ್ತಾಗುತ್ತದೆ. ಅದು ನಮ್ಮ ಮಗು ಅಲ್ಲ, ಅದು ಕನ್ನಡ ನಾಡಿನ ಮಗು ಎಂದು ಅವರು ತಿಳಿದುಕೊಂಡಿದ್ದಾರೆ. ಕಾಸರಗೋಡಿನಲ್ಲಿ ಅಡಿಕೆಯ ಬೆಳೆ ಜಾಸ್ತಿಯಿರು ವುದರಿಂದ, ಕೇರಳದವರು ಕಾಸರಗೋಡು ತಮಗೇ ಸೇರಬೇಕೆಂದು ಪದೇ ಪದೇ ಹೇಳುತ್ತಾ ಬಂದಿದ್ದಾರೆ. ಸುಮಾರು 11 ವರ್ಷಗಳಿಂದ ಕಾಸರಗೋಡಿನ ಜನರು ಕನ್ನಡ ನಾಡಿಗೆ ಸೇರಬೇಕೆಂದು ಏಕ ಮನಸ್ಸಿನಿಂದ ಕೇಳುತ್ತಾ ಬಂದಿದ್ದಾರೆ. 11 ವರ್ಷಗಳಿಂದ ಕನ್ನಡ ನಾಡಿಗೆ ಸೇರಬೇಕೆಂದು ಕಣ್ಣೀರು ಸುರಿಸುತ್ತಿದ್ದಾರೆ. ಈಗ ಮಹಾಜನ್ ಅವರು ತಮ್ಮ ವರದಿಯಲ್ಲಿ ಕಾಸರ ಗೋಡನ್ನು ಮೈಸೂರಿಗೆ ಸೇರಿಸಿದ್ದಾರೆ; ಮತ್ತು ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಮೈಸೂರಿನವರ ವಾದಕ್ಕೆ ಮಹಾಜನ್ ಅವರು ಒಪ್ಪಿ ಕಾಸರಗೋಡು ಮೈಸೂರಿಗೆ ಸೇರಬೇಕೆಂದು ಹೇಳಿರುವುದು ಪುಷ್ಟೀಕರಿಸಿದಂತಾಗಿದೆ. ಮಹಾಜನ್ ಅವರು ಕಾಸರಗೋಡನ್ನು ಮೈಸೂರಿಗೆ ಸೇರಿಸಬೇಕೆಂದು ತಮ್ಮ ವರದಿಯಲ್ಲಿ ಹೇಳಿರುವುದರಿಂದ ಕೇರಳದವರು ಕಾಸರಗೋಡು ತಮಗೇ ಸೇರಬೇಕೆಂದು ಪುಷ್ಟೀಕರಿಸುತ್ತಾ ಬಂದಿದ್ದಾರೆ. ಕೇರಳಾ ಸರ್ಕಾರದವರು ಯಾವ ಒಂದು ಆಧಾ ರವೂ ಇಲ್ಲದೆ ಕಾಸರಗೋಡು ತಮಗೇ ಸೇರಬೇಕೆಂದು ಕೇಳುತ್ತಿರುವುದರಲ್ಲಿ ಯಾವ ಅರ್ಥವೂ ಇಲ್ಲ. ಮಹಾಜನ್ ಆಯೋಗದ ಮುಂದೆ ಸಾಕ್ಷಿ ನೀಡುವುದಕ್ಕೆ ಯಾವ ಆಧಾರವೂ ಇಲ್ಲವೆ ನಾವು ಸಾಕ್ಷಿ ಕೊಡುವುದಿಲ್ಲವೆಂದು ಹೇಳಿದರು. ಈಗ ಮತ್ತೆ ತಮಗೇ ಸೇರಬೇಕೆಂದು ಅವರು ಕೇಳುವುದರಲ್ಲಿ ಅರ್ಥವಿಲ್ಲವೆಂದು ಹೇಳುತ್ತೇನೆ. ಈಗ ಪಾರ್ಲಿಮೆಂಟಿನಲ್ಲಿ ಈ ವರದಿ ಬಂದಿದೆ. ಕೇಂದ್ರದ ಗೃಹ ಸಚಿವರಾದ ಶ್ರೀ ಚವಾಣ ಅವರು ಎಲ್ಲಾ ಪಕ್ಷದ ಮುಖಂಡರನ್ನು ಕರೆದು ಅವರ ಅಭಿಪ್ರಾಯವನ್ನು ಮಹಾಜನ ವರದಿಯ ಬಗ್ಗೆ ಕೇಳಬೇಕಾಗಿದೆಯೆಂದು ಹೇಳಿದ್ದಾರೆ. ಆ ರೀತಿ ಅವರು ಹೇಳಿರುವುದು

ಸರಿಯಲ್ಲ. ನ್ಯಾಯವೂ ಅಲ್ಲ. ಅವರು ಒಂದು ದೇಶಕ್ಕೆ ನಾಯಕರಾಗಿದ್ದಾರೆಯೇ ಹೊರತು, ಒಂದು ರಾಜ್ಯಕ್ಕೆ ಅಲ್ಲ. ಪ್ರತಿಯೊಂದು ರಾಜ್ಯವೂ ಅವರಿಗೆ ಸೇರಿದೆ. ಇಡೀ ಭಾರತವನ್ನು ಸಂರಕ್ಷಿಸುವ ಭಾರ ಅವರ ಮೇಲಿದೆ. ಈ ಸಮಿತಿಯ ವರದಿಯನ್ನು ಅವರು ಸಂಪೂರ್ಣವಾಗಿ ಪುಷ್ಟೀಕರಿಸಬೇಕು.

ಶ್ರೀ ಕೆ. ಎಚ್. ಪಾಟೀಲ್.—ಕೇಂದ್ರ ಸರ್ಕಾರದಲ್ಲಿರುವ ಮೈಸೂರಿನ ಮಂತ್ರಿಗಳು ಏನು ಮಾಡುತ್ತಿದ್ದಾರೆ ?

ಶ್ರೀಮತಿ ಲೀಲಾವತಿ ರೈ.—ಇದು ಒಂದು ಪಕ್ಷದ ಕೆಲಸವಲ್ಲ. ಇದು ಎಲ್ಲರ ಕರ್ತವ್ಯ. ಗಡಿ ಪ್ರಶ್ನೆಯನ್ನು ಕಾಂಗ್ರೆಸ್‌ನವರೇ ಬಗೆಹರಿಸಬೇಕೆಂದು ವಿರೋಧ ಪಕ್ಷದವರು ಹೇಳುವುದು ಸರಿಯಲ್ಲ. ಗಡಿ ವಿಚಾರದಲ್ಲಿ ನಾವು ನಾವೇ ಜಗಳವಾಡುವುದು ಸರಿಯಲ್ಲ. ಎಲ್ಲರೂ ಅಣ್ಣ ತಮ್ಮಂದಿರಂತೆ ಕೆಲಸ ಮಾಡಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಯಾವ ರೀತಿ ನಡೆದು ಕೊಳ್ಳಬೇಕೆನ್ನುವ ಬಗ್ಗೆ ಮಹಾತ್ಮ ಗಾಂಧಿಯವರು ನಮಗೆ ಹಿಂದೆ ಅನೇಕ ಸಾರಿ ದಾರಿ ತೋರಿಸಿ ದ್ದಾರೆ. ಕಾಂಗ್ರೆಸ್ಸನ್ನು ಸ್ಥಾಪಿಸಿಕೊಟ್ಟವರು ಅವರು. ರಕ್ತಪಾತವಾದರೂ ಸರಿಯೇ, ಈ ವರದಿ ಯನ್ನು ಕೇಂದ್ರ ಸರ್ಕಾರದವರು ಒಪ್ಪಿಕೊಳ್ಳಲೇಬೇಕು, ಇಲ್ಲದಿದ್ದರೆ ಹೋರಾಟ ಮಾಡುತ್ತೇವೆಂದು ಅನೇಕ ಸದಸ್ಯರುಗಳು ಏನು ಹೇಳಿದರು, ಅದನ್ನು ನಾನೂ ಸಹ ಒಪ್ಪುತ್ತೇನೆ. ಎಲ್ಲರೂ ಒಕ್ಕೊರಲಿ ನಿಂದ ಮಹಾಜನ್ ವರದಿಯನ್ನು ಅವಾರ್ಡ್ ಎಂದು ಭಾವಿಸಿ ಪುಷ್ಟೀಕರಿಸಬೇಕೆಂದು ಹೇಳುತ್ತೇನೆ. ಎಲ್ಲ ಪಕ್ಷಗಳವರೂ ಸಹ ಒಂದೇ ಮನಸ್ಸಿನಿಂದ, ಒಂದೇ ಧ್ಯೇಯದಿಂದ ಈ ವರದಿಯನ್ನು ಒಪ್ಪಿಕೊಳ್ಳ ಬೇಕೆಂದು ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ಈ ಮಹಾಜನ ಕಮಿಷನ್ ವರದಿಮೇಲೆ ಮಾತ ನಾಡುವಾಗ ಒಂದು ವಿಧದಲ್ಲಿ ಏನು ಮಾತನಾಡಬೇಕು ? ನನ್ನ ಅಭಿಪ್ರಾಯದಲ್ಲಿ ಇಂದಿನ ಪರಿಸ್ಥಿತಿ ನೋಡಿದರೆ ಇದು ತುಂಬಾ ನಿಸ್ಸಹಾಯಕತೆ ಕಂಡುಬರುತ್ತದೆ. ಇವತ್ತು ಮಂತ್ರಿ ಮಂಡಳ ಮೂಲತಃ ಒಂದು ಮೋಷನ್ ಸಭೆಯ ಮುಂದೆ ಇಟ್ಟರು. ಅದನ್ನು ತಿದ್ದುಪಡಿ ಮಾಡಿ ಒಂದು ಸಬ್‌ಸ್ಟಿಟ್ಯೂಟ್ ಮೋಷನ್ ತಂದರು. ಈ ಹೊತ್ತು ಇನ್ನೊಂದು ಸಬ್‌ಸ್ಟಿಟ್ಯೂಟ್ ಮೋಷನ್ ತಂದಿ ದ್ದಾರೆ. ಇನ್ನೂ ಬರತಕ್ಕ ಸಬ್‌ಸ್ಟಿಟ್ಯೂಟ್ ಮೋಷನ್ಸ್ ಎಷ್ಟು ಇವೆ ಗೊತ್ತಾಗುತ್ತಾ ಇಲ್ಲ. ಒಟ್ಟಿ ನಲ್ಲಿ ಮೈಸೂರಿನ ಸ್ಥಿತಿ ಚಿಂತಾಜನಕವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಂತ್ರಿ ಮಂಡಳ ಇಷ್ಟು ಹೆದರಿದ್ದನ್ನು ನಾನು ಯಾವಾಗಲೂ ನೋಡಲಿಲ್ಲ. ಪ್ರಕೃತ ಸಂದರ್ಭದಲ್ಲಿ ಮಹಾ ಜನ ವರದಿಯಲ್ಲಿ ಕೊಟ್ಟಿರುವ ಹಾಗೆ ನಂಬೂದ್ರಿಪಾಡರವರು ಮಹಾಜನ ಅವರಿಗೆ ಬರೆದ ಪತ್ರ ಚೆನ್ನಾಗಿ ಇದೆ. ಅದನ್ನು ಓದತಕ್ಕಂಥ ವಿಚಾರ ಇದೆ. ಅವರ ಗಡಸುತನ, ಅವರ ದಿಟ್ಟತನ ನಮ್ಮ ಮೈಸೂರಿನವರಿಗೆ ಇಲ್ಲ ಎಂದು ತುಂಬಾ ವಿಷಾದವಾಗುತ್ತದೆ. ಕಾಸರಗೋಡು ಮೈಸೂರಿಗೆ ಸೇರಬೇಕು ಇಲ್ಲವೆ ಕೇರಳದಲ್ಲಿ ಸೇರಬೇಕು ಇದು ಬೇರೆ ಪ್ರಶ್ನೆ. ನಂಬೂದ್ರಿಪಾಡರ ಪತ್ರದಲ್ಲಿ ವ್ಯಕ್ತ ವಾಗತಕ್ಕಂಥ ಅಭಿಪ್ರಾಯ ಕಮಿಷನ್ ಅಪಾಯಿಂಟ್ ಮಾಡುವಾಗ ಕೇರಳದಲ್ಲಿ ಸರಕಾರದ ನಿಲುವು ಏನು ಎಂಬುದು ಚೆನ್ನಾಗಿ ಎದ್ದು ಕಾಣುತ್ತದೆ. ಈ ಪತ್ರ ವರದಿಯ 187ನೇ ಪುಟದಲ್ಲಿ ಇದೆ. ಇದನ್ನು ಓದತಕ್ಕಂಥಾದ್ದು ಪ್ರಕೃತ ಎಂದು ನನಗೆ ಕಾಣುತ್ತದೆ.

On page 187 of the Commission's report it is stated like this :

"The Chief Minister of Kerala when requested by the Commission for his views replied that his Government would not submit any memorandum to the Commission and that he would certainly meet the Commission and discuss the matter if the Commission visited Trivandrum. He, however, gave to the Commission reasons for the decision of his Government.

These being :

The present Kerala State was formed in 1956. The actual demarcation of the boundaries of this new State was the culmination of protracted discussions which continued for several months. It is true that a section of the people, *i.e.*, those whose mother tongue is Kannada, Tulu, Konkani, and so on,

(ಶ್ರೀ ಎಲ್. ಶ್ರೀಕಂಠಯ್ಯ)

were dissatisfied. Thay have naturally been agitating for re-demarcation of the boundaries. The appointment of the Commission, it should be presumed was the result of this agitation.

The question however arises: would any decision taken once be re-opened on the basis of agitation and agitation alone? If that is so, I am afraid any decision taken in pursuance of recommendations made by the present Commission will also be re-opened if there is an agitation. Is this what we are being let to?

Re-opening of questions once decided after protracted discussions can and should take place if (and if) the Government is satisfied that the earlier decision was wrong. The Central Government, however, does not say that their decision regarding the Maharashtra–Mysore and Mysore–Kerala borders was wrong. On the other hand, the Government claims that the investigation to be made by the Commission now should be in accordance with the principles of States Re-organisation (presumbly the principles on the basis of which the borders were demarcated in 1956).

The Mysore–Kerala border was demarcated on the linguistic basis with taluka as the basis. Kasaragod was included in Kerala because the Taluk as a whole has a majority of the Malayalam people. Out of a total population of 2,26,668, 1,26,414 are Malyalam–speaking (55.8 per cent). Those speakling Tulu, Kannada, Marathi and Konkani are 22.7 per cent, 12.3 per cent, 5.3 per cent and 2.9 per cent respectively according to 1961 Census. There is, therefore, no point in re-opening the question if the 1956 principles of language and contiguity with taluk as the basis were to be re-opened.

The question naturally arises: has the Government decided to give up the principles of language and contiguity with taluka as the basis? If so, what are the new principles? Are these new principles being applied to all borders between States? If not why is it being applied in relation to the Mysore–Kerala border?

I can anticipate one answer—the answer that the Mysore-Maharashtra border is also being re-opened. I am however, afraid that this stands on a different footing. With regard to Mysore-Maharashtra border, there was after all an agreement between the two Governments. There is no such agreement on the part of our Government.

May I in this connection inform you that I personally hold the view that the basic principle of 1956 Re-organisation was

wrong? I was one of those who explained to the Commission the view of my Party (not only in relation to Kerala, but to all the other States and their borders). Our view was that the principle should be language and contiguity with Village as the basis. As a matter of fact, during my previous tenure of office as Chief Minister of this State (1957–59), this very question was raised by the then Home Minister, the late Govind Ballabh Pant. He asked me whether I could concede the claim of the Kannada people. My reply to him was that, believing as I did in the above principles, I would have no objection if the Government of India were to rectify what according to me was a mistake committed in 1956 and could uniformly apply the above principle. He naturally expressed his inability to do so. The matter therefore was allowed to rest there."

But in contrast see the stand taken by the Mysore Government. Long before any principles were settled on the basis of which boundaries should be demarcated ರಾತ್ರಿ ಕಂಡ ಬಾವಿಗೆ ಹಗಲು ಹೊತ್ತಿನಲ್ಲಿ ಬಿದ್ದರು ಎಂದು ಹೇಳುವ ರೀತಿಯಲ್ಲಿ ಆಗಿದೆ. ಈ ಪ್ರಕಾರ ಈ ಸಂದರ್ಭದಲ್ಲಿ ನನ್ನ ಅಭಿಪ್ರಾಯವನ್ನು.........

12-00 Noon

MR. CHAIRMAN.—The hon'ble member may speak in English since he began in that language.

SRI L. SRIKANTIAH.—Without taking the consensus of opinion of the Assembly, the Chief Minister straightaway said that he is prepared for the Commission being appointed. To me it appears that the report is not the main question for consideration here. What I wish to say is the politics behind this entire issue. I want to make two or three points in this connection. What is the politics behind this? I have great respect for the late Justice Mahajan. To me it appears that the report is entirely an incidental thing and the politics that is hidden behind it is most important. I can summarise two or three positions emerging out of this politics. (1) You can have your way if you have sufficient strength to pressurise the Central Government. (2) The extent of presure on the Central Government is half won if you have a man in the Centre who in the eyes of the Centre can make or re-make leadership with the aid of the State vote. (3) The so called national leaders at the Centre are nothing more than men who find their self-interest and incidentally exist for their own State. (4) Lastly in the sordid game nothing is sacred. Sri Naik made this point clear.

Let me illustrate this point. He stated that the thing that prompted the Central Government to appoint this Commission was not so much that border disputes should be settled finally but because the M. E. S. was gaining ground; the opposition was gaining ground and just to take the wind out of the M. E. S. a Commission was appointed. I am informed by reliable sources that Sri Naik, the Chief Minister of Bombay was pressurised to move a resolution not to accept this report

(SRI L. SRIKANTIAH)

because the opposition would gain strength and the Congress ministry in Bombay would go to pieces. This is pure and simple politics and not either in the interest of Maharashtrian people or in the interest of Mysore people. My learned friend in the Upper House rightly remarked that politics is behind the appointment of the Commission because the Prime Minister Smt. Gandhi was interested in getting the support of Sri V. P. Naik, the Chief Minister of Bombay. So it remains that the Centre is not so much interested either in Maharashtra or Mysore. What they are interested is to see that these States and the people become pawns in their hands. The whole thing is politics and unless we have our own men at the Centre we cannot get justice from the Centre not only in this dispute but others as well. This is apparent in the case of Krishna-Godavari water dispute because we had no men in the Centre. So far in regard to the allocation of waters to several States we find there is no strong man in the Centre and fortunately or unfortunately Andhra State, Maharashtra State had their own men and leaders like Sri Chavan and Rao and they got. They think that Mysore will play to the tunes of the Central Government. Why I am dealing with these facts is to show how vital issues are made mere pawns in the big game of power politics. That aspect I want to bring out during this debate. Let me make it plain. I am not against the reorganisation of States on linguistic principle nor for adjustment of boundaries between Maharashtra and Mysore and Mysore and Kerala. But what is lacking fundamentally is the absence of any principle, as wisely pointed out by Sri E. M. S. Nambudiripad. If Maharashtrians this day proceed to make this aspect clear that they do not accept this report, why should Mysore accept it lying down? Have you not got liberty to say that we reject this totally and let there be another Commission and until another commission is done on proper principles agreed to between the parties, let the status quo continue? In the provisions of the States Reorganisation Act there was the Zonal Council and the matter could have been referred to the Zonal Council. If the Zonal Council has failed, why for is it? What reason prompted our Chief Minister to say, whatever may be, I am prepared to accept the stand taken by the Commission? Even now when great injustice has been done to Mysore, if we are prepared to accept it, why this solicitous attitude towards the Centre? I appreciate the Maharashtrians in one sense. If there is injustice they have the courage to say 'injustice is done and we reject.' Let us say in the same tone. I am not condemning the report but I am condemning the politics behind it. Let us expose that those people are mainly interested in this problem to suit their own purpose. It is this aspect that I want to impress. Therefore let us say that we are not prepared to accept this report. Let there be another Commission and let us say that we are not going to take this report lying down. Until then, let the status quo continue. This is what I wanted to say in this matter.

Thank you.

†Sri ALLUM KARIBASAPPA (Kurugod)—Mr. Speaker Sir, supporting the Mahajan Commission Report, I wanted to say a few words. Everybody is aware how the Maharashtrians are behaving particularly in Bombay and also in relation to this Mahajan Report. You know that SHIV SENA was started by the Maharashtrian leaders with the backing of Sri Chavan. I am extremely sorry that responsible people of our country are supporting such SHIV SENA and ruling the entire nation. I read in papers this morning that he is holding some conference with Opposition Members and also other Members to take their opinion on this issue. I am very sorry to say how Mr. Chavan has behaved particularly on this issue and also in other affairs. I want to say in this august House that I personally feel that Mr. Chavan wants to imitate the late SHIVAJI MAHARAJ. SHIVAJI had ambitions to conquer the entire country at the time it was ruled by other people.

(*Interruption from Sri B. P. Kadam*)

I am not yielding to my friend. SHIVAJI had that ambition to conquer the entire country. In this matter, I can easily compare Mr. Chavan to SHIVAJI but he has forgotten that we are Indians. He is trying to conquer other States forgetting that wherever we are every thing is within the Indian territory. I am very sorry to say what part he played in regard to GOA. It was he who was responsible for conducting the opinion poll by the Government of India and in this case also, he is mainly responsible. When this issue came up in Bomay session of the AICC 14 or 15 months ago, every Mysorean is aware that this decision was thrust down the throats of the Kannadigas of Mysore to accept this Commission. No Mysorean was willing for this commission. You know what incidents took place at that time. Any how, our noble and magnanimous Chief Minister accepted this proposal because he thought that at least after this was thoroughly examined by a high judicial authority as Mr. Mahajan, there will be a finality to it. Having accepted this Mahajan Commission, the Commission undertook extensive tours in the disputed territory on the Mysore-Maharashtra border and also Mysore Kerala border and he has given his impartial verdict in the matter. It is the moral duty of the Maharashtrians to accept the Mahajan Report in toto, because it is at their instance that the Commission was appointed. But now, it is a matter of great regret that they are the first Party to oppose the Report because the Maharashtrians could not achieve their purpose and their ambition could not be fulfilled. It is high time that Mr. Chavan took steps to set right these things and not use his influence as Home Minister in all such affairs. That is why I request every Member of this august House to support this Report and see that justice is done and lend a helping hand in settling this issue once for all. Language is not the only point to be taken into consideration in settling such affairs. There are so many other factors. As mentioned in this report, considering all these points, he has done

(SRI ALLUM KARIBASAPPA)

the greatest service to the country in suggesting this solution to a knotty problem and this House should now request the Government of India to implement this immediately without wasting the least time.

One of the Hon'ble Friends said that Bellary was in Andhra. I am sorry to say that Bellary was never in Andhra. Bellary was in composite Madras State and when the Andhra State was formed, Bellary was merged in Mysore State. This is for his infermation.

Further, Mysore is the only State which gives the greatest preference and protection to the minority communities. For example in Bellary District, Mr. Ghorpade is a Maharashtrian. He is now one of our Hon'ble friends in this House. It is a proof of the magnanimous way in which we treat the minorities here and we can give very good lessons to the Maharashtrians in this matter, whether for good behaviour or for spirit of tolerence.

I am very glad that an opportunity was given to me to speak on this issue. I thank you, Sir.

[MR. DEPUTY SPEAKER in the Chair].

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಪತಿಗಳೇ, ಈ ಗಡಿ ವಿವಾದ ಮತ್ತು ಮಹಾಜನ್ ಆಯೋಗದ ವರದಿ ಇವುಗಳ ಬಗ್ಗೆ ಅನೇಕ ಮಿತ್ರರು ಮಾತನಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡಿದುದನ್ನು ಬಹಳ ಕೂಲಂಕಷವಾಗಿ ಕೇಳುತ್ತಿದ್ದೆ. ಅದೇ ರೀತಿಯಲ್ಲಿ ನಮ್ಮ ಮಹಾರಾಷ್ಟ್ರ ಏಕೀಕರಣ ಸಮಿತಿಯ ಮಿತ್ರರು ಮತ್ತು ಇತರರೂ ಮಾತನಾಡಿದರು. ಅದನ್ನೆಲ್ಲ ಬಹಳ ಕೂಲಂಕಷವಾಗಿ ನಾನು ಕೇಳಿವೆ. ನಮ್ಮ ಶ್ರೀಮಾನ್ ನಿಜಲಿಂಗಪ್ಪನವರು ಮಾತನಾಡುತ್ತ, ಮೈಸೂರು ಸರ್ಕಾರ ಎಲ್ಲವನ್ನೂ ಮಾಡಿದ್ದಾರೆ, ನಾವು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತೋ ಅದನ್ನೆಲ್ಲ ತೆಗೆದುಕೊಂಡಿದ್ದೇವೆ ಮತ್ತು ನಮ್ಮ ನಿಲುವು ಮೊದಲಿನಿಂದಲೂ ಏಕಪ್ರಕಾರವಾಗಿಯೇ ಇದೆ, ಅದು ಸರಿಯಾಗಿಯೇ ಇದೆ ಎಂದು ಸಮರ್ಥನೆ ಮಾಡುವ ರೀತಿಯಲ್ಲಿ ಹೇಳಿದರು. ಇಷ್ಟೇ ಅಲ್ಲ, ಮೈಸೂರು ರಾಜ್ಯದ ಹಿತವನ್ನು ಕಾಂಗ್ರೆಸ್ಸಿನವರು ರಕ್ಷಣೆ ಮಾಡಿದ್ದಾರೆ ಎನ್ನುವುದನ್ನು ಕೂಡ ಹೇಳಿದರು. ಆದರೆ ನನಗನ್ನಿಸುವುದು ಏನೆಂದರೆ, ಈ ಮಹಾಜನ್ ಆಯೋಗದ ವರದಿ ಮತ್ತು ಅದಕ್ಕೆ ಹಿನ್ನೆಲೆ ಇವೆಲ್ಲವನ್ನೂ ಸಹ ನೋಡಿದರೆ ಮೈಸೂರು ರಾಜ್ಯದ ಹಿತವನ್ನು ಮೈಸೂರಿನ ಕಾಂಗ್ರೆಸ್ಸಿನವರಾಗಲೀ, ಆಳುವ ಪಕ್ಷವಾಗಲೀ ರಕ್ಷಿಸಿಲ್ಲ ಎನ್ನುವುದು ಸ್ಪಷ್ಟವಾಗಿ ಕಾಣುತ್ತದೆ. ಇದರಲ್ಲಿ ಹೆಚ್ಚು ವಿವರಗಳಿಗೆ ಹೋಗಬೇಕಾಗಿಲ್ಲ. ಈಗಾಗಲೇ ನಮ್ಮ ಮಾನ್ಯ ಮಿತ್ರರು ಕೆಲವರು ಹೇಳಿದ್ದಾರೆ, ಈ ಆಯೋಗ ಹೇಗೆ ರಚನೆಯಾಯಿತು ಎಂದು. ರಾತ್ರಿ ಹನ್ನೊಂದು ಗಂಟೆ ಸಮಯದಲ್ಲಿ ಆಯೋಗದ ರಚನೆಗೆ ಮುಖ್ಯಮಂತ್ರಿಗಳ ಒಪ್ಪಿಗೆ ಪಡೆದರು ಎಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನೊಂದು ವಿಷಯ. ಯಾವುದೇ ಒಂದು ಆಯೋಗ ರಚಿಸಿದರೂ ಕೂಡ ಅದಕ್ಕೆ ಒಂದು ತತ್ವ, ನಿರ್ದಿಷ್ಟವಾದ ಗುರಿ, "ಟರ್ಮ್ಸ್ ಆಫ್ ರೆಫರೆನ್ಸ್" ಇರಬೇಕು. ಶ್ರೀಮಾನ್ ಕಂಠಿಯವರು ಓದಿ ಹೇಳಿ ಅವೆಲ್ಲಾ ಇದೆ ಎಂದು ವಾದಮಾಡಿದರು. ಆದರೆ ನಾನು ನೋಡಿದ್ದರಲ್ಲಿ ಅದೆಲ್ಲಾ ಇದೆ ಎಂದು ಒಪ್ಪುವುದಕ್ಕಾಗುವುದಿಲ್ಲ, ಹಾಗೆ ನಿರ್ದಿಷ್ಟವಾಗಿದ್ದಿದ್ದರೆ ಇಷ್ಟು ಗೊಂದಲಕ್ಕೆ ಅವಕಾಶವಾಗುತ್ತಿರಲಿಲ್ಲ. ನಿರ್ದಿಷ್ಟವಾಗಿ ಅದನ್ನು ಹೇಳದೆ ಏನು ಬೇಕಾದರೂ ಮಾಡಬಹುದು ಎಂದು ಬಿಟ್ಟುಬಿಟ್ಟರು. ಇದೇಕೆ ಹೀಗಾಗಿದೆ ಎಂದರೆ ಕೇಂದ್ರದ ಒತ್ತಾಯ, ರಾಜಕೀಯ ಒತ್ತಾಯ ಬಂದದ್ದರಿಂದ ಇರುವ ಸಮಸ್ಯೆ ಪರಿಹಾರವಾಗಬೇಕೆಂಬ ದೃಷ್ಟಿಯಿಲ್ಲದೆ ಇರುವುದರಿಂದ,

ಮಹಾರಾಷ್ಟ್ರ, ಮೈಸೂರು ಮತ್ತು ಕೇರಳಗಳ ಪ್ರಶ್ನೆ ಬಗೆಹರಿಸಬೇಕೆಂಬ ಅಭಿಪ್ರಾಯ ಕೇಂದ್ರ ಸರಕಾರಕ್ಕಿಲ್ಲದಿರುವುದರಿಂದ ಎಂಬುದು ಸ್ಪಷ್ಟ. ಇಷ್ಟೇ ಅಲ್ಲ, ಈಗ ಬಂದಿರುವ ವರದಿಯನ್ನು ನೋಡಿದರೆ ಮೈಸೂರಿನವರಿಗಾಗಲಿ ಅಥವಾ ಮಹಾರಾಷ್ಟ್ರದವರಿಗಾಗಲಿ ಅದು ತೃಪ್ತಿಕರವಾಗಿದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು, ಕಾಂಗ್ರೆಸ್ಸಿನವರು ಮತ್ತು ಇತರರು ಅವರವರ ದೃಷ್ಟಿಯಿಂದ ವರದಿ ತೃಪ್ತಿಕರವಾಗಿಲ್ಲವೆಂದು ಹೇಳುತ್ತಿದ್ದಾರೆ. ಹೀಗಿರುವಾಗ ಕೇಂದ್ರ ಸರಕಾರದವರು ಮತ್ತು ಚವಾಣರು ಈ ವರದಿಯನ್ನು ತಕ್ಷಣ ಒಪ್ಪಿಕೊಳ್ಳಬೇಕು ಎಂದು ಹೇಳಬೇಕಾಗಿತ್ತು, ಆ ಬಗ್ಗೆ ಕಾರ್ಯಕ್ರಮ ಕೈಕೊಳ್ಳಬೇಕಾಗಿತ್ತು. ಆದರೆ ಈ ದಿವಸ ಒಂದು ದೊಡ್ಡ ಪಿತೂರಿ ನಡೆಯುತ್ತಿದೆ. ವರದಿಯನ್ನು ಯಾರೂ ಒಪ್ಪುತ್ತಿಲ್ಲ. ರಾಷ್ಟ್ರದ ನಾಯಕರ ಅಭಿಪ್ರಾಯ ಪಡೆಯಬೇಕು, ಕಾನ್‌ಸೆನ್ಸಸ್ ಪಡೆಯಬೇಕು ಅಥವಾ "ಒಪೀನಿಯನ್ ಪೋಲ್" ಪಡೆಯಬೇಕು ಎಂದು ಒಂದು ಕಡೆ ಚವಾಣರು, ಇನ್ನೊಂದು ಕಡೆ ಶುಕ್ಲಾರವರು ಮಾತನಾಡುವುದನ್ನು ನೋಡಿದರೆ ಖಂಡಿತವಾಗಿ ಕಾಣುವುದು ಏನೆಂದರೆ, ಕೇಂದ್ರ ಸರಕಾರಕ್ಕೆ ಒಂದು ತೀರ್ಮಾನಕ್ಕೆ ಬರಬೇಕೆಂಬ ಮನೋಭಾವವಿಲ್ಲ. ಸರಿಯಾಗಿ ಒಂದು ತೀರ್ಮಾನಕ್ಕೆ ಬರಬೇಕೆಂಬ ಜವಾಬ್ದಾರಿಯನ್ನು ಅವರು ಕಳೆದುಕೊಂಡಿರುವ ಹಾಗೆ ಕಾಣುತ್ತದೆ. ಇಷ್ಟೇ ಅಲ್ಲದೆ ಮೈಸೂರು ಸರಕಾರಕ್ಕೆ ಕೇಂದ್ರ ಸರಕಾರ ಸರಿಯಾದ ಮರ್ಯಾದೆ ಕೊಡುತ್ತಿರುವಂತೆ ಕಾಣುತ್ತಿಲ್ಲ, ಇದು ಸ್ಪಷ್ಟವಾಗಿದೆ. ಹಿಂದೆ ಎಸ್.ಆರ್.ಸಿ. ವರದಿ ಬಂದಾಗ ರಾಜ್ಯಸರಕಾರವನ್ನು ಕೇಳಿ ಅದರ ಅಭಿಪ್ರಾಯವನ್ನು ತಿಳಿದುಕೊಂಡರು. ಆದರೆ ಈಗ ಯಾರೂ ಕೇಳಲು ತಯಾರಾಗಿಲ್ಲ. ತಮಗೆ ಇಷ್ಟಬಂದ ಹಾಗೆ ಮಾಡಬಹುದು ಎಂಬ ಭಾವನೆ ಇದೆ. ಹೀಗೆ ಮಾಡಿ ಮೈಸೂರು ಸರಕಾರಕ್ಕೂ ಮತ್ತು ಕನ್ನಡಿಗರಿಗೂ ಅಪಮಾನ ಮಾಡುವ ರೀತಿಯಲ್ಲಿ ಕೇಂದ್ರ ಸರಕಾರ ಮತ್ತು ಚವಾಣರು ವರ್ತಿಸಿದ್ದಾರೆ. ಅಷ್ಟೇ ಅಲ್ಲ, ಪ್ರಧಾನಿಗಳ ಕೈವಾಡ ಕೂಡ ಇದರಲ್ಲಿದೆ. ಒಂದಾನೊಂದು ಕಾಲದಲ್ಲಿ ಇಂದಿರಾಗಾಂಧಿಯವರು ಚವಾಣರಿಗೆ ಈ ಪ್ರಶ್ನೆಯನ್ನು ಬಿಡುವುದಿಲ್ಲ, ಬಿಟ್ಟರೆ ಮೈಸೂರಿನವರಿಗೆ ಅಸಮಾಧಾನವಾಗಬಹುದು, ನಾನೇ ಪರಿಶೀಲನೆ ಮಾಡುತ್ತೇನೆ ಎಂದು ತಿಳಿಸಿ ಈ ದಿವಸ ಅವರೊಂದಿಗೆ ಸೇರಿಕೊಂಡು ಈ ವರದಿಯನ್ನು ಇರುವಂತೆ ಜಾರಿಗೆ ತರದೆ ಕಾಲ ತಳ್ಳುತ್ತಿದ್ದಾರೆ. ಇಂಥ ಒಂದು ಪರಿಸ್ಥಿತಿಯಲ್ಲಿ ನಮ್ಮ ಸರಕಾರದ ನಿರ್ಣಯವೇನು ಎಂಬುದನ್ನು ವಿಮರ್ಶಿಸೋಣ. ಪರಿಸ್ಥಿತಿ ಹೀಗಿರುವಾಗ ನಿಜಲಿಂಗಪ್ಪನವರು ಈ ರೀತಿ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆಂದು "ಡೆಕ್ಕನ್ ಹೆರಾಲ್ಡ್"ನಲ್ಲಿ ವರದಿಯಾಗಿದೆ. ಅದು ಈ ರೀತಿ ಇದೆ :

> "I expect the Central Government to take a stand on the Mahajan Commission Report before it is placed before Parliament."

ಪಾರ್ಲಿಮೆಂಟ್ ಮುಂದೆ ಈ ವರದಿ ಬರುವ ಮುನ್ನ ಕೇಂದ್ರ ತನ್ನ ನಿಲುವನ್ನು ತಾಳುವುದೆಂದು ಆಶಿಸಿ ಅವರು ತಮ್ಮ ಶಕ್ತಿಹೀನತೆಯನ್ನು ತೋರಿಸಿಕೊಂಡಿದ್ದಾರೆಂದು ಹೇಳಿದರೆ ಖಂಡಿತ ತಪ್ಪಾಗಲಾರದು. ಕೇಂದ್ರ ಸರಕಾರ ಮಾಡಿರುವುದು ಮತ್ತು ಶುಕ್ಲಾರವರು ಹೇಳಿರುವುದು ತಪ್ಪು ಎಂಬ ರೀತಿಯಲ್ಲಿ ಅವರು ಹೇಳಿಲ್ಲ. ಶುಕ್ಲಾರವರು ಹೇಳಿರಬಹುದು, ಆದರೆ ತೀರ್ಮಾನ ಮಾಡುವವರು ಕೇಂದ್ರ ಸರಕಾರದವರು ಎಂಬ ಭಾವನೆ ಹೊಂದಿದ್ದಾರೆ. ಆದರೆ ಚವಾಣರು ಮತ್ತು ಇಂದಿರಾಗಾಂಧಿಯವರನ್ನು ಬಿಟ್ಟು ಅವರಿಗೆ ವಿರೋಧವಾಗಿ ಯಾರೂ ಕೇಂದ್ರ ಸರಕಾರದಲ್ಲಿ ತೀರ್ಮಾನ ಕೈಕೊಳ್ಳುವಂತಿಲ್ಲ. ಶುಕ್ಲಾರವರ ಹೇಳಿಕೆಗೆ ಶಭಾಸಗಿರಿ ಕೊಡುವಂತೆ ಮಾತನಾಡಿರುವುದು ಅಸಾಮರ್ಥ್ಯ, ನಿರ್ವೀರ್ಯತೆ ಕಾಂಗ್ರೆಸ್ ನಾಯಕತ್ವದಲ್ಲಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಎಲ್ಲಾ ಆಗಿಹೋದಮೇಲೆ ಏನು ತಾನೆ ಮಾಡಲು ಸಾಧ್ಯ? ಮಾನ್ಯ ಶ್ರೀಕಂಠಯ್ಯನವರು ಹೇಳಿದ ಹಾಗೆ ಎಲ್ಲಾ ವಿಷಯಗಳಲ್ಲೂ ನಮ್ಮ ಸರಕಾರ ಹೀಗೆಯೇ ಮಾಡುತ್ತಿದೆ. ನದಿ ವಿವಾದ, ಕೃಷ್ಣ ಗೋದಾವರಿ ನೀರಿನ ಹಂಚಿಕೆ ಮುಂತಾದ ವಿಚಾರಗಳಲ್ಲೆಲ್ಲಾ ಇದೇ ರೀತಿ ಮಾಡುತ್ತಿದೆ. ಅರ್ಬಿಟ್ರೇಷನ್‌ಗೆ ಒಪ್ಪಿಸಬೇಕೆಂದು ಕೃಷ್ಣ-ಗೋದಾವರಿ ನೀರಿನ ವಿಚಾರದಲ್ಲಿ ಹೇಳುತ್ತಿದ್ದುದನ್ನು ಕಾರ್ಯರೂಪಕ್ಕೆ ತಂದಿಲ್ಲ. ಹೊಸಪೇಟೆ ಉಕ್ಕಿನ ಕಾರ್ಖಾನೆಯ ವಿಷಯದಲ್ಲೇನಾಯ್ತು ಎಂಬುದು ಎಲ್ಲರಿಗೂ ಕೂಡ ಗೊತ್ತಿದೆ. ಇದು ಮೈಸೂರು ಸರಕಾರದ ಅಸಹಾಯಕತೆಯನ್ನು ಪ್ರತಿಬಿಂಬಿಸುತ್ತದೆ. "ಊರು ಹೋದಮೇಲೆ ಕೋಟೆ ಬಾಗಿಲು ಹಾಕಿದಂತೆ" ಎಂಬುದಕ್ಕನುಗುಣವಾಗಿ ಶ್ರೀ ನಿಜಲಿಂಗಪ್ಪನವರು ನಡೆದುಕೊಳ್ಳುತ್ತಿದ್ದಾರೆ. ಇದನ್ನು ಯಾರೂ ಒಪ್ಪುವುದಕ್ಕಾಗುವುದಿಲ್ಲ. ಏಕೆ ಹೀಗಾಯ್ತು? ಚವಾಣರು ಮತ್ತು ಕೇಂದ್ರ ಸರಕಾರದವರು ಇಂತಹ ಪರಿಸ್ಥಿತಿಯನ್ನು ಹೇಗೆ ಉಪಯೋಗಿಸಿಕೊಳ್ಳುತ್ತಿದ್ದಾರೆಯೆಂದು ಯೋಚನೆ ಮಾಡಿದರೆ ಎಲ್ಲವೂ ಕೂಡ ಸ್ಪಷ್ಟವಾಗುತ್ತದೆ. ಕಾಂಗ್ರೆಸ್ಸಿನ ಪ್ರಭಾವ ಕುಸಿಯುತ್ತಿದೆ. ಹೋದ ಚುನಾವಣೆಯಲ್ಲಿ 8 ರಾಜ್ಯಗಳಲ್ಲಿ ಕಾಂಗ್ರೆಸ್ ಸರಕಾರ ಬರುವುದಕ್ಕೆ

(ಶ್ರೀ ಎಂ. ಎಸ್. ಕೃಷ್ಣನ್)

ಸಾಧ್ಯವಾಗಲಿಲ್ಲ. ಇದರಿಂದ ರಾಜಕೀಯದಲ್ಲಿ ಬಹಳ ಬಿಕ್ಕಟ್ಟು ಉಂಟಾಗಿದೆ. ರಾಜ್ಯಗಳಲ್ಲಿ ಮಾತ್ರ ವಲ್ಲದೆ ಕೇಂದ್ರದಲ್ಲೂ ಬಿಕ್ಕಟ್ಟಿದೆ ಅಲ್ಲಿ ಕೇವಲ 45 ಜನರ ಬಹುಮತವಿದೆ. ಜೊತೆಗೆ ಆರ್ಥಿಕ ಬಿಕ್ಕಟ್ಟು ಕೂಡ ಇದೆ. ಈ ಎರಡೂ ಇರುವುದರಿಂದ, ಬಿಕ್ಕಟ್ಟನ್ನು ಬಗೆಹರಿಸಲು ಸರಕಾರದಲ್ಲಿ ಅಸಾಮರ್ಥ್ಯತೆಯಿಂದ ಕಾಂಗ್ರೆಸ್ಸಿನ ಪ್ರಭಾವ ಕಡಿಮೆಯಾಗುತ್ತಿದೆ. ಮೊನ್ನೆ ಪಾರ್ಲಿಮೆಂಟಿನಲ್ಲಿ ಭಾಷಾಗೊಂದಲ ನೋಡಿದರೆ ಪರಿಸ್ಥಿತಿ ಹೇಗಿದೆಯೆಂಬುದು ಗೊತ್ತಾಗುತ್ತದೆ. ಕಾಂಗ್ರೆಸ್ ಅಧ್ಯಕ್ಷರು ಯಾರಾಗಬೇಕು ಎಂಬ ವಿಚಾರದಲ್ಲಿ ಕೂಡ ಎಷ್ಟು ಗೊಂದಲವಾಗಿದೆಯೆಂಬುದನ್ನು ನೋಡಬಹುದು. ನಂದಾ, ನಿಜಲಿಂಗಪ್ಪ ಸುಖಾಡಿಯಾ ಮುಂತಾದವರ ಹೆಸರುಗಳೆಲ್ಲಾ ಅಧ್ಯಕ್ಷಸ್ಥಾನಕ್ಕೆ ಕೇಳಿಬರುತ್ತಿದ್ದವು. ಇದೆಲ್ಲವನ್ನೂ ನಿದರ್ಶನ ಕೊಡುವುದಕ್ಕಾಗಿ ಹೇಳುತ್ತಿದ್ದೇನೆ. ಕಾಂಗ್ರೆಸ್ಸನ್ನುಳಿಸಿಕೊಳ್ಳುವುದಕ್ಕೆ ಮೈಸೂರು ಮಹಾರಾಷ್ಟ್ರದ ಗಡಿ ವಿಚಾರ ಮೊದಲಾದುವನ್ನು ತೆಗೆದುಕೊಂಡು ಕೇಂದ್ರದಲ್ಲಿ ಕೆಲವರನ್ನು ತೃಪ್ತಿಪಡಿಸಲು ಪ್ರಯತ್ನ ನಡೆದಿದೆ. ಎಲ್ಲ ಕಡೆಯೂ ಪಿತೂರಿ ಎದ್ದು ಕಾಣುತ್ತಿದೆ. ನನ್ನಭಿಪ್ರಾಯದಲ್ಲಿ ಕೇಂದ್ರದಲ್ಲಾಗಲೀ, ಚವಾಣರಾಗಲೀ ಅಥವಾ ಶುಕ್ಲಾರವರಾಗಲೀ, ಯಾರೇಆಗಲೀ, ಮಹಾರಾಷ್ಟ್ರ ಕಾಂಗ್ರೆಸ್ಸಾಗಲೀ, ಮೈಸೂರು ಕಾಂಗ್ರೆಸ್ಸಾಗಲೀ ಇರುವ ವಿವಾದವನ್ನು ಪೂರ್ಣವಾಗಿ ಬಗೆಹರಿಸಬೇಕು ಎಂಬ ಅಭಿಪ್ರಾಯ ಇಟ್ಟುಕೊಂಡು ಸೀರಿಯಸ್ಸಾಗಿ ಕೆಲಸ ಮಾಡುತ್ತಿರುವಂತೆ ಕಾಣುತ್ತಿಲ್ಲ. ಸೀರಿಯಸ್ಸಾಗಿದ್ದರೆ ತೀರ್ಮಾನ ಮಾಡಲು 10 ವರ್ಷ ಕಾಯುತ್ತಿರಲಿಲ್ಲ.

ಶ್ರೀ ಬಿ. ಡಿ. ಜತ್ತಿ (ಆಹಾರ ಮತ್ತು ನಿತ್ಯೋಪಯೋಗಿ ಸರಬರಾಜು ಶಾಖೆಗಳ ಮಂತ್ರಿಗಳು).—ಕಾಂಗ್ರೆಸ್ ಪರವಾಗಿ ಇದನ್ನೆಲ್ಲಾ ಹೇಳುತ್ತಿದ್ದೀರಾ ? ನಿಮಗೆ ಆಥರೈಜ್ ಮಾಡಿದ್ದಾರೆಯೇ ?

Sri M. S. KRISHNAN.—I am only saying all this to expose that all of you are only interested in seeing that the disputes continue so that fissiferous tendencies continue in the country, and so that you can stick on to power.

Sri B. D. JATTI.—It is very good of the hon. member that he is so much interested in our stability.

Sri M. S. KRISHNAN.—I am not interested. I am intersted in you getting out just because I am not interested in your continuing. I want that a finality should be given to this report.

12-30 P.M.

ನನ್ನ ಅಭಿಪ್ರಾಯದಲ್ಲಿ ಇದು ವರದಿ ತೀರ್ಮಾನವಲ್ಲ ಆದರೆ ಈ ವರದಿ ಬೈಂಡಿಂಗ್ ಆಗಿದೆ. ಪಂಜಾಬ್ ಹರಿಯಾಣ ವಿಷಯ ಬಂದಾಗ ಕಮಿಷನ್ ಮಾಡುವುದಕ್ಕೆ ಮುಂಚೆ ಒಪ್ಪಿಗೆ ಆಗಿತ್ತು, ಇಬ್ಬರೂ ಮುಂಬರುವ ವರದಿಯನ್ನು ಒಪ್ಪಿಕೊಳ್ಳಬೇಕು ಅಂತ, ಅದೇ ರೀತಿ ಪಟಾಸ್ಕರ್ ತೀರ್ಮಾನವಾದಾಗಲೂ ಕೂಡ ಮೊದಲು ಒಪ್ಪಿಗೆ ಪಡೆಯಲಾಗಿತ್ತು. ಆದರೆ ಮೈಸೂರಿನಲ್ಲಿ ಮಾತ್ರ ಚವಾನರಿಂದ ಹಿಡಿದು ಮಹಾರಾಷ್ಟ್ರದ ನಾಯಕರೆಲ್ಲರೂ ಮೊದಲು ಯಾರು ಒಪ್ಪಿಕೊಂಡಿದ್ದರೋ ಅವರೆಲ್ಲರೂ ಹಿಂದಕ್ಕೆ ಹೋಗಿದ್ದಾರೆ ಇದು ಬಹಳ ಆಶ್ಚರ್ಯಕರವಾದ ಸಂಗತಿ, ಅವರು ದೇಶದ ಸಮಗ್ರತೆ, ಐಕ್ಯತೆಯನ್ನು ಅಳಿಸುವುದಕ್ಕೆ ನಿಜವಾಗಿಯೂ ಪ್ರಯತ್ನ ಪಡುತ್ತಾ ಇದ್ದಾರೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಬೆಳಗಾಂ ಮತ್ತು ಕಾಸರಗೋಡಿನ ವಿಷಯಗಳನ್ನು ಈ ವರದಿಯಲ್ಲಿ ಹೇಳಿದ್ದಾರೆ, ನನ್ನ ಅಭಿಪ್ರಾಯದಂತೆ ಇದು ಬಹಳ ಸಮರ್ಪಕವಾದ ವರದಿ, ಇದು ಎಲ್ಲರಿಗೂ ಅನುಕೂಲವಾಗಿದೆ ಎಂದು ನಾನು ಹೇಳುವುದಿಲ್ಲ. ಇದನ್ನು ಒಪ್ಪಿಕೊಳ್ಳದಿದ್ದರೆ ಅಪಾಯ ಕಾಣುತ್ತಾ ಇದೆ. ಅದನ್ನು ತಪ್ಪಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ಇದನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ. ಮೊದಲನೆಯ ಅಪಾಯ, ಸ್ಟೇಟಸ್ ಕೋ ಇದ್ದರೆ ಏನಾಗುತ್ತದೆ ಎಂದರೆ, ಮಹಾರಾಷ್ಟ್ರಿಯರಿಗೂ ಕನ್ನಡಿಗರಿಗೂ ಘರ್ಷಣೆ ಥಕ್ಕೆ ತಪ್ಪಿದ್ದಲ್ಲ, ಖಂಡಿತವಾಗಿಯೂ ಮುಂದುವರಿಯುತ್ತದೆ, ಗೊಂದಲವಾಗುತ್ತದೆ. ಯಾವ ಪ್ರಶ್ನೆ ಮೇಲೆ ಒಂದು ಗಮನ ಹರಿಸಬೇಕೋ ಅದು ಸಾಧ್ಯವಾಗದೇ ಬೇರೆ ಕಡೆಗೆ ಗಮನ ಹರಿಯುತ್ತದೆ. ಎಸ್ ಆರ್. ಸಿ. ಆದಮೇಲೆ ಹತ್ತು ವರ್ಷಗಳ

ನಂತರ ಇವತ್ತು ಅನೇಕ ಕಡೆ ಭಾಷಾವಾರು ಪ್ರಾಂತ ಏಕೆ, ಜೋನ್‌ಗಳನ್ನು ಮಾಡೋಣ ಎಂಬ ಅಭಿಪ್ರಾಯ ಬರುತ್ತಿದೆ. ಆ ರೀತಿಯ ಅಭಿಪ್ರಾಯವನ್ನು ಅನೇಕರು ವ್ಯಕ್ತಪಡಿಸಿದರು ಎಂದು ಹೇಳಿ ಮಹಾಜನ್‌ರವರೂ ಕೂಡ ಹೇಳಿದ್ದಾರೆ. ಇವತ್ತಿನ ದಿವಸ ಶ್ರೀ ಕೊರಾವಳೆಯವರೂ ಕೂಡ ಅದೇ ರೀತಿ ಹೇಳಿದರು, ಭಾಷಾವಾರು ಪ್ರಾಂತ್ಯ ರಚನೆಯಿಂದ ಗೊಂದಲ ಉಂಟಾಗಿದೆ ಎಂದು ಅನೇಕರ ಅಭಿಪ್ರಾಯವಾಗಿದೆ, ಪ್ರಜಾಪ್ರಭುತ್ವದಲ್ಲಿ ನಂಬಿಕೆ ಹೋಗಿದೆ. ಭಾಷೆಯ ಆಧಾರದಮೇಲೆ ಎಲ್ಲಾ ಪ್ರಾಂತ್ಯಗಳ ರಚನೆ ಮಾಡಬೇಕು, ಜನಗಳಿಗೆ ಹೆಚ್ಚು ಅನುಕೂಲ ಮಾಡಿಕೊಡಬೇಕು, ಅದರಿಂದಾಗಿ ಪ್ರಜಾಪ್ರಭುತ್ವ ಬೆಳೆಯಬೇಕೆಂಬ ದೃಷ್ಟಿಯಿಂದ ಮೊದಲು ಭಾಷಾವಾರು ಪ್ರಾಂತ್ಯವನ್ನು ರಚನೆ ಮಾಡಿದರು. ಇದು ಸರಿಯಾದದ್ದು ಇದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಇವತ್ತಿನ ದಿವಸ ಅದಕ್ಕೆ ಕೊಡಲಿ ಪೆಟ್ಟು ಬೀಳುವ ರೀತಿಯಲ್ಲಿ ನಡೆಯುತ್ತಾ ಇದೆ. ಅದ್ದರಿಂದ ಅದಕ್ಕೆ ಒಂದು final solution ಇರಬೇಕೆಂದು ಹೇಳುತ್ತೇನೆ. ನಾನು ಈ ಸಂದರ್ಭದಲ್ಲಿ ಕಾಂಗ್ರೆಸ್‌ನವರಿಗೆ ಅಪೀಲು ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ ಏಕೆಂದರೆ ಅವರಿಗೆ ಅಪೀಲು ಮಾಡಿ ಪ್ರಯೋಜನವಿಲ್ಲ, ವಿರೋಧ ಪಕ್ಷಗಳಲ್ಲಿ ಹಾಗೂ ಮಹಾರಾಷ್ಟ್ರದ ವಿರೋಧಿ ಪಕ್ಷಗಳಿಗೆ ನಾನು ಅಪೀಲ್‌ಮಾಡಿಕೊಳ್ಳುವುದೇನೆಂದರೆ, ಈ ಪ್ರಶ್ನೆಯನ್ನು ಮುಂದುವರಿಸಿದರೆ ಅವರಿಗೆ ಯಾವ ರೀತಿಯಿಂದಲೂ ಅನುಕೂಲವಾಗುವುದಿಲ್ಲ. ಕಾಂಗ್ರೆಸ್‌ನವರೇ ಇದರ ಅನುಕೂಲವನ್ನು ಪಡೆಯುತ್ತಾರೆ ಎಂದು ಹೇಳುತ್ತೇನೆ. ಏಕೆಂದರೆ ಹೋದ ಸಲ ಆದ ಚುನಾವಣೆಯ ಫಲಿತಾಂಶವನ್ನು ನೋಡಿ, ಅದರ ಹಿಂದಿನ ಸಲದ ಫಲಿತಾಂಶವನ್ನೂ ನೋಡಿ, ಸಂಪೂರ್ಣ ಏಕೀಕರಣ ಸಮಿತಿಯ ಸದಸ್ಯರು ಬಹಳ ಕಡಿಮೆ ಜನ ಚುನಾಯಿತರಾಗಿ ಬಂದಿದ್ದಾರೆ. ಆದ್ದರಿಂದ ನಿಜವಾಗಿಯೂ ಅನುಕೂಲವಾಗುವುದು ವಿರೋಧಪಕ್ಷದವರಿಗೆ ಅಲ್ಲ. ಅನುಕೂಲವಾಗುವುದು ಆಳುವ ಪಕ್ಷದವರಿಗೆ, ಕಾಂಗ್ರೆಸ್‌ನವರಿಗೆ ಯಾರು ನಮ್ಮ ದೇಶವನ್ನು ಹೆಚ್ಚು ಹೆಚ್ಚು ಅಧೋಗತಿಗೆ ತರುತ್ತಾ ಇದ್ದಾರೋ ಅವರಿಗೇ ಅನುಕೂಲವಾಗುತ್ತದೆ. ಆದ್ದರಿಂದ ನಾನು ಅವರನ್ನು ಕೇಳಿಕೊಳ್ಳುವುದೇನೆಂದರೆ, ಈ ರೀತಿ ವಿರೋಧ ಮಾಡುವುದನ್ನು ಬಿಡಿ, ಅವರ ಗುರಿ ಕಾಂಗ್ರೆಸ್ ಪಕ್ಷವನ್ನು ತೆಗೆದುಹಾಕಬೇಕೆಂದು ಇದ್ದರೆ, ಕಾಂಗ್ರೆಸ್‌ನವರ ಪ್ರತಿಗಾಮಿ ನೀತಿಯನ್ನು ಖಂಡಿಸಿ, ಪ್ರಗತಿಗಾಮಿ ನೀತಿಯನ್ನು ಅನುಸರಿಸಬೇಕೆಂದು ಇದ್ದರೆ ಈ ವರದಿಯನ್ನು ಎಷ್ಟೇ ಅಸಮರ್ಪಕವಾಗಿದ್ದರೂ ಸಹ ಅವರು ಒಪ್ಪಿಕೊಳ್ಳಬೇಕೆಂದು ಮನವಿ ಮಾಡುತ್ತೇನೆ. ಹೀಗಿರತಕ್ಕ ಸನ್ನಿವೇಶದಲ್ಲಿ ಆಹಾರ ಉದ್ಯೋಗ ಮತ್ತು ಇತರ ಬೇರೆ ಪ್ರಶ್ನೆಗಳ ಬಗ್ಗೆ ಹೋರಾಟ ನಡೆಸುವುದರ ಕಡೆಗೆ ಕಾಂಗ್ರೆಸ್ ಸರ್ಕಾರವನ್ನು ಕಿತ್ತು ಹಾಕುವ ಕಡೆಗೆ ತಮ್ಮ ಗಮನವನ್ನು ಹರಿಸುವುದಕ್ಕೆ ಮುಂದೆ ಬರಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಮುಖ್ಯಮಂತ್ರಿಯವರು ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷರಾಗಿ ಹೋಗುವವರಿದ್ದಾರೆ. ಅವರು ಯಾವ ಟ್ರೆಡಿಷನ್ ಅನುಸರಿಸುತ್ತಾರೆ ಎಂಬುದನ್ನು ನೋಡಬೇಕಾಗಿದೆ. ಕಾಮರಾಜ ನಾಡರ ಪರಂಪರೆಯನ್ನು ಅನುಸರಿಸಿ ಪ್ರತಿಯೊಂದು ವಿಷಯದಲ್ಲೂ ಪಾರ್ಕಲಾಂ ಅಂತ ಹೇಳುತ್ತಾರೆಯೇ ಅಥವಾ ಏನು ಮಾಡುತ್ತಾರೆ ಎಂಬುದನ್ನು ಗಮನಿಸಬೇಕಾಗಿದೆ. ಕಾಮರಾಜರಂತೆಯೋ ಪಾರ್ಕಲಾಂ ಅಂತ ಹೇಳುವುದಾದರೆ ಬಹಳ ಅನ್ಯಾಯವಾಗುತ್ತದೆ. ಮಾಡೋಣ, ನೋಡೋಣ, ಮಾಡಬಹುದು ಎಂದು ಹೇಳುತ್ತಾ ಹೋದರೆ ಇವತ್ತಿನ ದಿವಸ ಯಾರಿಗೂ ಅನುಕೂಲವಾಗುವುದಿಲ್ಲ, ಜನರ ಪ್ರಶ್ನೆಗಳ ಕಡೆಗೆ ಅವರ ಗಮನವನ್ನು ಹರಿಸಿ ಇಂತಹ ವಿಷಯದಲ್ಲಿ ಫೈನಲ್ ಸೊಲ್ಯೂಷನ್ ಕಂಡುಹಿಡಿಯುವುದಕ್ಕೆ ಧೈರ್ಯ ಮಾಡುತ್ತಾರೆ ಎಂದು ನಂಬಿ, ಕಾಮರಾಜರು ಹೇಗೆ ಆದರೋ ಹಾಗೆ ಆಗಕೂಡದು ಎಂದು ಆಶಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಐ. ಸೋಮಶೇಖರಪ್ಪ (ಹೊಸನಗರ).—ಮಾನ್ಯ ಸಭಾಧ್ಯಕ್ಷರೇ, ಈ ಸಭೆಯ ಮುಂದೆ ಮಹಾಜನ್‌ರವರ ವರದಿ ಬಗ್ಗೆ ಸಾಕಾದಷ್ಟು ಚರ್ಚೆಯಾಗಿದೆ. ನನಗೆ ಅನಿಸುತ್ತದೆ ಈಗ ಕೆಲವು ದಿವಸಗಳಿಂದ ಚರ್ಚೆ ಮಾಡಿದ್ದೇವೆ. ಇನ್ನೂ ಕೆಲವು ಗಂಟೆಗಳ ಕಾಲ ಈ ವರದಿಮೇಲೆ ಚರ್ಚೆ ಆಗಲಿದೆ, ಈ ಚರ್ಚೆಯಿಂದ ಏನಾದರೂ ಉಪಯೋಗ ಉಂಟೇ? ಇದರ ಪರಿಣಾಮ ಕೇಂದ್ರ ಸರ್ಕಾರದ ಮಂತ್ರಿ ಮಂಡಲದ ಮೇಲಾಗಲೀ ಕೇಂದ್ರ ಗೃಹ ಮಂತ್ರಿಗಳಾದ ಚವಾನ್‌ರವರ ಮೇಲಾಗಲಿ ಆಗುವುದಕ್ಕೆ ಸಾಧ್ಯವೇ, ಎಂದು ಯೋಚನೆ ಮಾಡಬೇಕಾಗಿದೆ. ಏಕೆಂದರೆ ಇವತ್ತು ಬೆಳಗಿನ ಒಂದು ಪತ್ರಿಕೆಯ ವರದಿಯ ಪ್ರಕಾರ ವಿರೋಧ ಪಕ್ಷದ ನಾಯಕರನ್ನು ಅವರು ಬರಮಾಡಿಕೊಂಡಿದ್ದಾರೆ, ಅವರ ಪ್ರಭಾವವನ್ನು ಬೀರಿ, ಮಹಾರಾಷ್ಟ್ರದವರ ಬಗ್ಗೆ ಒಂದು ನೀತಿಯನ್ನು ಅನುಸರಿಸುತ್ತಾ ಇದ್ದಾರೆ. ಆದ್ದರಿಂದ ಕೇಂದ್ರದ ಗೃಹಮಂತ್ರಿಗಳು ಎಲ್ಲಿಯವರೆಗೆ ಕೇಂದ್ರದಲ್ಲಿ ತಮ್ಮ ಒಂದು ಪ್ರಭಾವವನ್ನು ಬೀರಿ ಆ ಒಂದು ಸ್ಥಾನದಲ್ಲಿರುತ್ತಾರೋ ಅಲ್ಲಿಯವರೆಗೂ ಕರ್ನಾಟಕಕ್ಕೆ ದೊರೆಯ

(ಶ್ರೀ ಐ. ಸೋಮಶೇಖರಪ್ಪ)

ಬೇಕಾದ ಒಂದು ನ್ಯಾಯ ದೊರೆಯಲಾರದು ಎಂದು ನಾನು ತಿಳಿದುಕೊಂಡಿದ್ದೇನೆ. ಮಹಾರಾಷ್ಟ್ರದವರು ಕರ್ನಾಟಕದ ಜನರಲ್ಲಿರತಕ್ಕ ಔದಾರ್ಯ ಮತ್ತು ಹೊಂದಾಣಿಕೆಯನ್ನು ಒಂದು ದೌರ್ಬಲ್ಯ ಎಂದು ತಿಳಿಯುವ ಮನೋಭಾವ ಅವರಲ್ಲಿ ಬೆಳೆದುಕೊಂಡು ಬಂದಿದೆ. ಅದನ್ನು ನಾವು ಹೋಗಲಾಡಿಸಬೇಕಾಗಿದೆ. ಮಹಾರಾಷ್ಟ್ರೀಯರು ಯಾವ ಒಂದು ನೀತಿಯನ್ನು ಅನುಸರಿಸುತ್ತಾ ಇದ್ದಾರೆ ಎಂಬುದನ್ನು ಮಹಾಜನ್‌ರವರ ವರದಿಯ 71ನೇ ಪುಟದಲ್ಲಿ ಹೇಳಿದ್ದಾರೆ; ಅದು ಈ ರೀತಿ ಇದೆ.

> "Territorial claims on the basis of language or any other religious or non-tangible and unsecular basis is sure to lead to the kind of claim that the Muslim League made for Pakistan."

ಅಖಂಡ ಭಾರತದ ವಿಭಜನೆ ಆಗುವುದಕ್ಕಿಂತ ಮುಂದೆ ಮುಸ್ಲಿಂಲೀಗ್‌ನವರು ಯಾವ ನೀತಿಯನ್ನು ಅನುಸರಿಸುತ್ತಾ ಇದ್ದರೋ ಆ ಒಂದು ನೀತಿಯನ್ನು ಮಹಾರಾಷ್ಟ್ರೀಯರು ಅನುಸರಿಸುತ್ತಾ ಇದ್ದಾರೆ, ಇದು ರಾಷ್ಟ್ರದಲ್ಲಿ ಬಹಳ ಕೆಟ್ಟ ಪರಿಣಾಮವನ್ನುಂಟು ಮಾಡುತ್ತದೆ ಎಂಬುದನ್ನು ಅವರು ತಿಳಿಯಬೇಕಾಗಿದೆ. ಇದೇ ಸಂದರ್ಭದಲ್ಲಿ ಶ್ರೀ ನಂಬೂದರಿಪಾದ್ ಅವರು ಒಂದು ಮಾತನ್ನು ಹೇಳಿದ್ದಾರೆ—ಅದೂ ಕೂಡ ಇದೇ ವರದಿಯಲ್ಲಿದೆ. ಅವರು ಈ ಅವಾರ್ಡನ್ನೇ ಕೊನೆಯದೆಂದು ಹೇಳುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಆ ಮಾತಿನಲ್ಲಿ ಸ್ವಲ್ಪ ಹುರುಳಿದೆ. ಈ ಹಿಂದೆ 1956 ರಲ್ಲಿ ಭಾಷಾವಾರು ರಾಜ್ಯಗಳ ವಿಂಗಡಣೆಯಾದ ಕಾಲಕ್ಕೆ ಒಂದು ವರದಿ ಬಂದಿತ್ತು. ಆ ಕಾಲದಲ್ಲಿ ಮಹಾರಾಷ್ಟ್ರೀಯರ ಒತ್ತಾಯ ಈ ಬೆಳಗಾಂ ಬಗ್ಗೆ ಇಷ್ಟಿರಲಿಲ್ಲ. ಇದನ್ನು ಆ ಕೇಂದ್ರ ಮಂತ್ರಿಮಂಡಲದಲ್ಲಿಯೂ ಸಹ ಯಾರೂ ಅಷ್ಟು ಪ್ರಾಮುಖ್ಯವಾದುದೆಂದು ಇದನ್ನು ಪರಿಗಣಿಸಿರಲಿಲ್ಲ. ಆ ನಂತರ ಬೊಂಬಾಯಿ ಅಸೆಂಬ್ಲಿಯಲ್ಲಿ ಸಹಾ ಎಲ್ಲರೂ ಸುಮ್ಮನಿದ್ದರು. ಯಾರೂ ಎಲ್ಲಿಯೂ ಈ ಬೆಳಗಾಂ ಪ್ರಶ್ನೆಯನ್ನು ಎತ್ತಿರಲಿಲ್ಲ. ಹಾಗೂ ಬೊಂಬಾಯಿ ಅಸೆಂಬ್ಲಿಯ ಸದಸ್ಯರೆಲ್ಲಾ ಬೆಳಗಾಂ ಕರ್ಣಾಟಕದ್ದೆಂದೇ ಒಪ್ಪಿಕೊಂಡಿದ್ದಾರೆ.

> "Belgaum population is entirely cosmopolitan in character. Maharashtra's claim is of very recent origin".

ಅದರೆ ಯಾವಾಗ ಆ ಮಹಾರಾಷ್ಟ್ರೀಯರಿಗೆ ಈ ನೆಲದಾಹ ಪ್ರಾರಂಭವಾಯಿತೋ ಆಗಿನಿಂದಲೂ ಅವರೊಂದು ಹೊಸ ಸೃಷ್ಟಿಯನ್ನೇ ಮಾಡುವುದಕ್ಕೆ ಹೊರಟಿದ್ದಾರೆ. ನಾನು ಈ ಹಿಂದೆ 1954 ರಲ್ಲಿ ಬೆಳಗಾಂನಲ್ಲಿ ಲಾ ಓದುತ್ತಿದ್ದಾಗ ಈ ಬೆಳಗಾಂ ಮಹಾರಾಷ್ಟ್ರಕ್ಕೆ ಸೇರಬೇಕೆಂಬ ಕೂಗನ್ನು ನಾನೆಂದೂ ಕೇಳಿರಲಿಲ್ಲ. ಆದರೆ ಬೆಳಗಾಂ ಕರ್ನಾಟಕಕ್ಕೆ ಸೇರಬೇಕೆಂಬ ಕೂಗನ್ನು ಆಗಿನಿಂದಲೂ ಕೇಳುತ್ತಿದ್ದೇನೆ. ಚವಾಣರು ಯಾವಾಗ ಬೊಂಬಾಯಿನಲ್ಲಿ ಮುಖ್ಯಮಂತ್ರಿಗಳಾದರೋ ಅಂದು ಈ ಕೂಗಾಟ ಪ್ರಾರಂಭವಾಯಿತು. ಅಂದಿನಿಂದಲೂ ಕನ್ನಡಿಗರು ಅದನ್ನು ವಿರೋಧಿಸುತ್ತಲೇ ಬಂದಿದ್ದಾರೆ. ನಾವು ಈ ದಿವಸ ಆ ಮರಾಠಿಯವರ ಒಂದು ಒತ್ತಾಯಕ್ಕೆ ಮಣಿಯುವುದಾದರೆ ಅವರಿಗೆ ಈ ಕರ್ಣಾಟಕವನ್ನು ಇಡೀ ನುಂಗಿ ನೀರು ಕುಡಿದರೂ ಸಾಲದೆಂದೇ ಹೇಳುತ್ತಾರೆ. ಈ ದಿವಸ ಅವರಿಗೆ ಅಷ್ಟು ನೆಲದಾಹ ಉಂಟಾಗಿದೆ. ಅವರ ಈ ನೆಲದಾಹವು ಎಂದಿನವರೆಗೆ ಕೇಂದ್ರದಲ್ಲಿ ಆ ಚವಾಣರು ಗೃಹಮಂತ್ರಿಗಳಾಗಿರುವರೋ ಮತ್ತು ಎಂದಿನವರೆಗೆ ಅವರು ಆ ಪಾರ್ಲಿಮೆಂಟಿನ ಸದಸ್ಯರನ್ನು ಅವರ ಒಂದು ಪ್ರಭಾವಕ್ಕೆ ಒಳಪಡಿಸಿಕೊಳ್ಳುವರೋ ಅಂದಿನವರೆಗೂ ಅವರಲ್ಲಿ ಈ ನೆಲದಾಹ ತಪ್ಪುವುದಿಲ್ಲ. ಅವರೀ ದಿವಸ ಅಭಿನವ ಶಿವಾಜಿಯ ಪ್ರಕಾರ ನಡೆಯುತ್ತಿದ್ದಾರೆ. ಅವರ ಪ್ರಭಾವದಿಂದ ಕರ್ಣಾಟಕಕ್ಕೆ ಬಹಳ ಅನ್ಯಾಯವಾಗುತ್ತಿದೆ. ನಾವು ಇನ್ನಾದರೂ ಎಚ್ಚೆತ್ತುಕೊಳ್ಳದೆ ಹೋದರೆ ಇನ್ನು ಕೇವಲ 10 ವರ್ಷಗಳಲ್ಲೇ ಆ ಮರಾಠಿಯವರು ಹರಿಹರ ಮತ್ತು ದಾವಣಗೆರೆಗಳನ್ನೂ ಕೂಡ ತೆಗೆದುಕೊಳ್ಳಲು ಸನ್ನಾಹ ಮಾಡಬಹುದೆಂದು ನನಗನಿಸುತ್ತಿದೆ. ಆದರೆ ನಾನು ಕೊನೆಯದಾಗಿ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ: ಅದೇನೆಂದರೆ— ಎಲ್ಲಿಯವರೆಗೂ ಕರ್ಣಾಟಕದಲ್ಲಿ ಒಂದು ಒಗ್ಗಟ್ಟು ಹಾಗೂ ಒಂದು ಶಕ್ತಿ ಇದೆಯೆಂಬುದನ್ನು ನಾವು ಆ ಕೇಂದ್ರದಲ್ಲಿರತಕ್ಕವರಿಗೆ ತೋರಿಸಿಕೊಡುವುದಿಲ್ಲವೋ ಅಂದಿನವರೆಗೆ ಆ ಕೇಂದ್ರ ಸರ್ಕಾರದಿಂದ ನಮಗೆ ಯಾವ ನ್ಯಾಯವೂ ದೊರೆಯುವುದಿಲ್ಲ ಎಂಬುದನ್ನು ನಾವೆಲ್ಲರೂ ಮನಗಾಣಬೇಕಾಗಿದೆ. ಮನಗಂಡು ಅಂಥಾ ಒಂದು ಒಗ್ಗಟ್ಟು ಹಾಗೂ ಶಕ್ತಿಯನ್ನು ಬೆಳಸಲಿಕ್ಕೆ ನಾವೆಲ್ಲರೂ ಸರ್ವಪ್ರಯತ್ನಗಳನ್ನೂ ಮಾಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

[MR. SPEAKER in the chair]

†Smt. WINNIFRED F. FERNANDES (Coondapur).—Hon'ble Speaker, before speaking on the report, I want to convey my heartfelt sympathy to the bereaved family of late Sri Mahajan and pray God that his soul may rest in peace.

In supporting the resolution regarding the Mahajan's report, I wish to say that this Commission was appointed because the Maharashtra Government insisted that a Commission should be appointed. It is also admitted that both the Chief Ministers of Mysore and Maharashtra agreed to abide by the recommendations. Now to say that the verdict of the Commission is perverse, wrong and not based on sound principles and so not binding on them and it is not going to be accepted by them, is, I have to say that they are not accepting it just because the Commission has not given them the Belgaum City. It is similar to the saying that head I win and tail you lose. Such is the attitude of the responsible Government and that too Congress Government and we can only pity such a Government and I must say it is a shame. By dividing our country into linguistic States, the Congress has created more problems than it has solved. People were made to forget that they were Indians first and that national interests should have precedence over State interests. I may say that poor citizens of many places in the disputed areas are more concerned of their daily needs than staying in this State or that State. Wherever he is, he is still an Indian and that is more important than whether he is a Mysorean or Maharashtrian or a Keralite. Two days back an hon'ble member from this side stated that Konkani is a dialect of Marathi. It is far from truth. My mother tongue is Konkani and I know more about Konkani than the hon'ble member. Of course Konkani has got its origin and it is independent language but it has no script of its own. What Sri Mahajan has stated in his report is quite correct and what they say that Konkani is a dialect of Marathi is because of their self-interest and so I do not agree to what they say. Also about the Siva Sena I can say it is not Siva Sena but *Satan Sena* because their actions, their attitude are devilish. Yesterday, my hon'ble friend on this side Sri Bhaskar Shetty has given a clear picture about Siva Sena and its character. I want to say in this connection that two months back I had received one letter from an agent of Siva Sena warning me not to criticise the activities of Siva Sena, not to speak about it and if I speak or criticise the people of Coondapur—according to statistics there are 5,000 people—living in Bombay will be harassed and put to trouble and they will be just packed to South. Of course I have not given much importance to it because barking dogs seldom bite. But, I think if we take the same attitude as this Siva Sena, what will be the position of the people who have come here from Maharashtra? We are not so narrow minded as they are. They, in their self-interest and by their meanness, I can say, stoop to such mean activities. Of

(SMT. WINNIFRED F. FERNANDES)

course I can say that they have lost moral value to the extent of 95 paise in a rupee and I pray God that he may enlighten their minds.

About Kasargod I can say that a blunder was committed by the States. Reorganisation Commission. It is a part and parcel of Karnataka. Majority of the people of Kasargod are Kannada-speaking people, and also even though there are Malayalees there, they too want that this Kasargod should be included in the Mysore State. In view of the reorganisation, all the people of Kasargod have sent memorandums, represented themselves, sent delegations, but our Government had kept its eyes shut; they were calm and quiet. It is high time now that our Government should take an active step and have this Report of the Commission put into action......

Lastly, I can conclude by putting two questions, *viz.*, (1) why was this Commission appointed and what was the attitude of the Maharashtra Chief Minister then ?, and (2) if it was intended not to implement the Report of the Commission, why appoint it and spend so much money and energy ? Now that the Commission has made its recommendations, and even though Mysore is a loser in many respects, *i.e.*, income and many other aspects, as men of goodwill and understanding and with a view to settle the matter once for all, it is a sacred duty to urge the Centre to accept the recommendations in toto and implement the same without the least delay. If the Maharashtra Government is not agreeable, then it is the duty of the Centre to make them to agree, and even then if they do not agree, the only alternative is to continue the status quo.

With these few words, I thank the Hon'ble Chair.

† ಶ್ರೀ ಜಿ. ಬಸವಣ್ಣಪ್ಪ.—(ಶಿಕಾರಿಪುರ) ಸನ್ಮಾನ್ಯ ಸಭಾಪತಿಗಳೇ, ಈಗಾಗಲೇ ನಾಲ್ಕು ದಿವಸಗಳಿಂದ ಮಹಾಜನ್ ಅಯೋಗದ ವರದಿ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಈ ವಿಷಯದಲ್ಲಿ ಅಷ್ಟು ದೀರ್ಘವಾಗಿ ಹೇಳದೆ ಕೆಲವು ಮುಖ್ಯ ಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಮಹಾಜನ್ ಅಯೋಗ ರಚನೆ ಬಗ್ಗೆ ಒಂದು ವಿಷಯ ಹೇಳುವುದಾದರೆ, ಮಹಾರಾಷ್ಟ್ರದ ನಾಯಕರ ಹಟವಾರಿತನದಿಂದ ಅಯೋಗ ರಚನೆ ಆಯಿತು ಎಂದು ಹೇಳಬಹುದು. ಈ ಮಹಾಜನ್ ಅಯೋಗ ರಚನೆಯನ್ನು ಮಹಾರಾಷ್ಟ್ರದವರು ಮತ್ತು ಮಹಾರಾಷ್ಟ್ರ ಸರ್ಕಾರದವರು ಸ್ವಾಗತಿಸಿದರು. ಆದರೆ ಮಹಾಜನ್ ಆಯೋಗದ ವರದಿ ಹೊರಬಿದ್ದ ನಂತರ ಮಹಾರಾಷ್ಟ್ರದ ನಾಯಕರು, ಮಹಾರಾಷ್ಟ್ರದ ಜನತೆ ಅದನ್ನು ಹೊರದೂಡಿದರು. ಇದು ವಾಸ್ತವವಾದ ಸಂಗತಿ. ಶ್ರೀ ವಿ.ಪಿ. ನಾಯಕರು ಈ ವರದಿಯನ್ನು ತಿರಸ್ಕರಿಸಿ ವಿಧಾನಸಭೆಯಲ್ಲಿ ನಿರ್ಣಯವನ್ನು ಮಂಡಿಸಿದ್ದು ನಮ್ಮ ಪ್ರಜಾಪ್ರಭುತ್ವಕ್ಕೆ ದ್ರೋಹ ಎಸಗಿದಂತಾಗಿದೆ. ಅದೂ ಅಲ್ಲದೆ ಮಹಾರಾಷ್ಟ್ರದವರ ವರ್ತನೆ ಎಷ್ಟು ಕೀಳು ಮಟ್ಟದ್ದಾಗಿದೆ ಎನ್ನುವ ವಿಷಯವನ್ನು ಒಂದು ರೀತಿಯಲ್ಲಿ ತಿಳಿಸುವುದಾದರೆ ಷೋಲಾಪುರದ ಭೀಮಾನದಿಯ ಯೋಜನೆ ಪ್ರಾರಂಭವಾಗಿ 3 ಸಾವಿರ ಜನ ಕೆಲಸ ಮಾಡುತ್ತಾ ಇದ್ದರು. ಈ ಯೋಜನೆಯ ವೆಚ್ಚ 50 ಕೋಟಿ ರೂಪಾಯಿಗಳು. ಇದರಿಂದ 50 ಲಕ್ಷ ಎಕರೆಗಳಿಗೆ ನೀರಾವರಿ ಸೌಕರ್ಯವನ್ನು ಒದಗಿಸತಕ್ಕಂಥಾದ್ದನ್ನು ಕಂಡು ಮಹಾರಾಷ್ಟ್ರ ಸರ್ಕಾರ ಇಂಜನೀಯರಿಂಗ್ ಡಿಪಾರ್ಟಮೆಂಟಿಗೆ ಕೆಲಸ ನಿಲ್ಲಿಸಿ ಎಂದು ಹೇಳಿದರು. ಇದು ನಾವು ಹೋರಾಡಿದ್ದು, ನಮಗೆ ಸೇರಬೇಕಾದಂಥಾದ್ದು ಎಂದು ಹೇಳುತ್ತಾರೆ, ಇದು ಅನಗತ್ಯವಾದ ಹೇಳಿಕೆ. ಇದರಿಂದ ನಮ್ಮ ರಾಜ್ಯಕ್ಕೆ ನಷ್ಟ ಎಷ್ಟು ಹೆಚ್ಚಾಗಿದೆ ಎನ್ನುವುದರ ಬಗ್ಗೆ ಕೆಲವು ಅಂಶಗಳನ್ನು ಹೇಳುತ್ತೇನೆ.

ಈ ಆಯೋಗದ ವರದಿಯಿಂದ ನಾವು ಫಲವತ್ತಾದ ಭೂಪ್ರದೇಶವನ್ನು ಕಳೆದುಕೊಳ್ಳಬೇಕಾಗಿದೆ. ಮತ್ತು 2 ಕೋಟಿಯಷ್ಟು ವರಮಾನ ಬರತಕ್ಕಂಥ ಜಿಲ್ಲೆಯನ್ನೂ ಬಿಟ್ಟುಕೊಡಬೇಕಾಗಿದೆ. ಸುಮಾರು 3½ ಕೋಟಿ ವರಮಾನ ಇರತಕ್ಕಂಥ ನಿಪ್ಪಾಣಿಯನ್ನೂ ಸಹ ಬಿಟ್ಟುಕೊಡಬೇಕಾಗಿದೆ. ಹಾಗೆಯೇ ಖಾನಾಪುರ, ಚಂದಗಡ, ಜತ್ತ ತಾಲ್ಲೂಕು ಮುಂತಾದ ಪ್ರದೇಶಗಳನ್ನೂ ಕಳೆದುಕೊಳ್ಳಬೇಕಾಗಿದೆ. ಜತ್ತ ತಾಲ್ಲೂಕಿನಲ್ಲಿ ಸುಮಾರು 600 ಚದರಮೈಲಿಯಷ್ಟು ಬಂಜರು ಪ್ರದೇಶ ಬರಬೇಕಾಗಿದೆ. ಮಹಾರಾಷ್ಟ್ರದಿಂದ ನಮಗೆ ಸೇರಿರತಕ್ಕಂಥ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ಸೌಕರ್ಯಗಳು ಇಲ್ಲ, ರಸ್ತೆ ಸಾರಿಗೆ ವ್ಯವಸ್ಥೆ ಇಲ್ಲ, ನೀರಾವರಿ ಸೌಕರ್ಯ ಇಲ್ಲವೇ ಇಲ್ಲ. ನಾವು ಅದಕ್ಕೆ ಕೋಟ್ಯಾಂತರ ರೂಪಾಯಿ ದುಡ್ಡನ್ನು ಖರ್ಚು ಮಾಡಬೇಕಾಗುತ್ತದೆ. ಈ ಆಯೋಗದಿಂದ ನಮಗೆ ಹೆಚ್ಚಿನ ನಷ್ಟ ಉಂಟಾಗಿದ್ದರೂ ಕೂಡ ನಾವು ಈ ಆಯೋಗದ ವರದಿಯನ್ನು ಒಪ್ಪಲೇ ಬೇಕಾಗಿದೆ. ಈ ಒಳಜಗಳಗಳಿಗೆ ಒಂದು ಮಿತಿ ಇದೆ. ಆದರೂ ಈ ಪ್ರಜಾಪ್ರಭುತ್ವದ ಬೆಳವಣಿಗೆಗಾಗಿ, ರಾಷ್ಟ್ರದ ಹಿತದೃಷ್ಟಿಯಿಂದ ನಮಗೆ ಅನ್ಯಾಯವಾಗಿದ್ದರೂ ಇದನ್ನು ಒಪ್ಪಿಕೊಳ್ಳಬೇಕಾಗಿದೆ. ಶ್ರೀ ಮೆಹರ್‌ಚಂದ್ ಮಹಾಜನ್ ರವರು ಶ್ರೇಷ್ಠ ನ್ಯಾಯಾಧೀಶರು, ಶ್ರೇಷ್ಠ ವ್ಯಕ್ತಿ. ಇಂತಹ ನ್ಯಾಯಪಟುಗಳು ಕೊಟ್ಟಿರತಕ್ಕಂಥ ವರದಿಯನ್ನು ನಾವೆಲ್ಲರೂ ಒಪ್ಪಲೇ ಬೇಕು. ಮಹಾರಾಷ್ಟ್ರ ಸರ್ಕಾರ, ಮತ್ತು ಮಹಾರಾಷ್ಟ್ರದ ಜನತೆ ಆಡಿರುವ ಮಾತುಗಳನ್ನು ನೋಡಿದರೆ, ಇನ್ನುಮುಂದೆ ಕೇಂದ್ರ ಸರ್ಕಾರದವರು ಯಾವುದಾದರೂ ಒಂದು ಆಯೋಗ ರಚನೆ ಮಾಡಿದರೆ, ಅದಕ್ಕೆ ನ್ಯಾಯಪಟುಗಳನ್ನು ನೇಮಕ ಮಾಡಿದರೆ ಅವರು ಕೊಟ್ಟಂತಹ ಬರವಣಿಗೆಗೆ ಬೆಲೆಬಾರದಂತಹ ಕಟುವಾದ ಮಾತುಗಳನ್ನು ಆಡಿದ್ದಾರೆ. ಇದು ಮಹಾರಾಷ್ಟ್ರದ ಜನರಿಗೆ, ಮಹಾರಾಷ್ಟ್ರ ಸರ್ಕಾರದವರಿಗೆ ತಕ್ಕುದಲ್ಲ. ಏನೇ ಇರಲಿ ಈ ಆಯೋಗದ ವರದಿಯನ್ನು ನಾವು ಒಪ್ಪಲೇಬೇಕಾಗಿದೆ. ಮಹಾರಾಷ್ಟ್ರ ಜನತೆಯೂ ಮತ್ತು ಮಹಾರಾಷ್ಟ್ರ ಸರ್ಕಾರವೂ ಇದನ್ನು ನ್ಯಾಯದೃಷ್ಟಿಯಿಂದ ನೋಡಿ ಈ ವರದಿಯನ್ನು ಒಪ್ಪುತ್ತಾರೆ ಎಂದು ನಂಬಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಬಸವರಾಜು (ಕೃಷ್ಣರಾಜ ನಗರ).—ಸನ್ಮಾನ್ಯ ಸಭಾಪತಿಗಳೇ, ಈ ಒಂದು ಗಡಿ ಪ್ರಶ್ನೆಯ ತೀರ್ಮಾನ ಏನು ಇದೆ ಅದನ್ನು ಆಳುವ ಪಕ್ಷಕ್ಕೆ ಕೊಟ್ಟಿದ್ದೇವೆ. ಅವರು ಈ ಹೊತ್ತು ಒಂದು ನಿರ್ಣಯ ರೂಪದಲ್ಲಿ ಈ ಪ್ರಶ್ನೆಯ ಬಗ್ಗೆ ನಮ್ಮ ದೇಶದ ಮುಂದೆ ಇಟ್ಟಿದ್ದಾರೆ. ಅದರ ಪ್ರತಿಫಲವನ್ನು ಈ ದಿವಸ ಮೈಸೂರಿನ 2½ಕೋಟಿ ಜನ, ಕೇರಳದ 1½ಕೋಟಿ ಜನ, ಮತ್ತು ಮಹಾರಾಷ್ಟ್ರದ 3 ಕೋಟಿ ಜನ ಇದನ್ನು ಅನುಭವಿಸುತ್ತಿದ್ದಾರೆ. ನಮ್ಮ ನಮ್ಮಲ್ಲಿಯೇ ಕಹಿ ವಾತಾವರಣ ಉಂಟಾಗಿದೆ. ಈ ಗಡಿಯ ತೀರ್ಮಾನಕ್ಕೆ ಸಂಬಂಧಪಟ್ಟಂತೆ ನಾನು ಒಂದು ವಿಷಯವನ್ನು ಹೇಳುತ್ತೇನೆ. ಈ ವರದಿಯಲ್ಲಿ ಎರಡು ವಿಚಾರ ಇದೆ. ಒಂದು ಬಾರ್ಡರ್ ಡಿಸ್ಪ್ಯೂಟ್, ಇನ್ನೊಂದು ಟೆರಿಟೋರಿಯಲ್ ಡಿಸ್‌ಪ್ಯೂಟ್. ಅದನ್ನು ಈಗ ಇನ್ನೊಂದು ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಹೊರಟಿದ್ದಾರೆ. ಅದು ಸೆಲ್ಫ್ ಕ್ರಿಟಿಸಿಸಮ್. ನಮ್ಮ ಲೀಡರ್‌ಷಿಪ್ ಏನು ಇದೆ, ಮತ್ತು ಕನ್ನಡ ಜನತೆಯ ನಿಲುವು ಏನು ಇದೆ, ಅದರ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳುತ್ತೇನೆ.

ನಮ್ಮ ಕನ್ನಡನಾಡಿನ ನಾಯಕರುಗಳು ಏನು ಇದ್ದಾರೆ ಅವರು ನಿರ್ದಿಷ್ಟವಾದ ಒಂದು ನಿಲುವನ್ನು ತೆಗೆದುಕೊಳ್ಳದೆ, ಒಂದು ಸಾರಿ ಒಂದು ಮಾತು ಹೇಳಿ, ಇನ್ನೊಂದು ಸಾರಿ ಇನ್ನೊಂದು ಮಾತು ಹೇಳಿ ಮತ್ತೊಂದು ಸಾರಿ ಅದನ್ನು ಅಷ್ಟಕ್ಕೆ ಬಿಟ್ಟು ಬಿಟ್ಟು ಈ ರೀತಿ ಮಾಡುತ್ತಿದ್ದಾರೆ. ನಮ್ಮ ಕನ್ನಡ ಜನತೆಯ ದೃಷ್ಟಿಯಿಂದ ತಮ್ಮ ನಿಲುವು ಏನು ಇದೆ ಎಂಬುದನ್ನು ಸ್ಪಷ್ಟವಾಗಿ ಈ ಸಭೆಯಲ್ಲಿ ಹೇಳಬೇಕಾಗಿತ್ತು. ಮಹಾಜನ್ ವರದಿಯಲ್ಲಿ ಆ ವಿಷಯ ಹೇಳಿದ್ದಾರೆ. ಅದು ಹೀಗಿದೆ— "Consistency, however, is a virtue that cannot be insisted in matters political".

Mr. SPEAKER.—The House stands adjourned to meet again at 3-00 P.M.

The House rose at One of the clock to re-assemble again at Three of the clock. The House reassembled at Three of the clock.

———

(MR. SPEAKER in the chair).

ಶ್ರೀ ಎಂ. ಬಸವರಾಜು.—ಸ್ವಾಮಿ, ಕಳೆದ ಇಪ್ಪತ್ತು ವರ್ಷಗಳಿಂದಲೂ ಆರ್ಥಿಕ ಕ್ಷೇತ್ರದಲ್ಲಿ ಬಹುವಾಗಿ ನಮ್ಮ ರಾಷ್ಟ್ರೀಯ ಸರಕಾರ ಸಾಧಿಸಿರುವುದು ಏನೂ ಇಲ್ಲ ಎಂದೇ ಹೇಳಬಹುದು. ಕಳೆದ ನೂರಾರು ವರ್ಷಗಳಿಂದಲೂ ನಮ್ಮ ದೇಶದ ಜನತೆ ಎಷ್ಟೋ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ, ಅದರಲ್ಲೂ ಆರ್ಥಿಕ ಕ್ಷೇತ್ರದಲ್ಲಿ ಬಹಳ ಕಷ್ಟಪಡುತ್ತಲಿದ್ದರೂ ಅದನ್ನು ನಿವಾರಣೆ ಮಾಡಿ ದೇಶದ ಜನತೆ ಸುಖಜೀವನವನ್ನು ಮಾಡುವಂತೆ ಸಹಾಯವಾಗಲು ಯಾವ ಯೋಜನೆಗಳನ್ನೂ ನಮ್ಮ ರಾಷ್ಟ್ರೀಯ ಸರಕಾರ ಕೈಗೊಳ್ಳದೇ ಇರುವುದು ತುಂಬಾ ಅನ್ಯಾಯವಾಗಿದೆ. ಕಳೆದ ಇಪ್ಪತ್ತು ವರ್ಷಗಳಿಂದಲೂ ಬೇಸತ್ತ ಜನತೆ ಯಾವೊಂದು ಸರಕಾರದ ಯೋಜನೆಗಳೇ ಆಗಲಿ ಅದನ್ನು ಪ್ರತಿಪಾದನೆ ಮಾಡುವ ಒಂದು ಹಂತಕ್ಕೆ ಬಂದಾಗ ಹಾಗೆ ಪರಿವರ್ತನೆ ಮಾಡುವ ಕಾಲದಲ್ಲಿ ಜನತೆಯ ಅಭಿಪ್ರಾಯಗಳಿಗೆ ಪ್ರಾಶಸ್ತ್ಯ ಕೊಡದೇ ಅದರಲ್ಲಿ ಅನುಕೂಲಗಳೇ ಆಗಲೀ ಅನಾನುಕೂಲಗಳೇ ಆಗಲಿ ಅವನ್ನು ಒಂದೂ ಗಮನಕ್ಕೆ ತೆಗೆದುಕೊಳ್ಳದೇ ಇರಲು ಕಾರಣ ಈಗಿರುವ ರಾಷ್ಟ್ರೀಯ ಸರಕಾರದ ಮುಖಂಡತ್ವದಿಂದಾಗಿ ಇಲ್ಲದ ಅಡ್ಡಿ ಆತಂಕಗಳು ಬರುತ್ತಿವೆ. ಇಂತಹವುಗಳಲ್ಲಿ ಈ ಬಾರ್ಡರ್ ಡಿಸ್‌ಪ್ಯೂಟ್ ಎಂದರೆ, ಗಡಿವಿವಾದ ಎನ್ನುವುದೂ ಒಂದು. ಏಕೆಂದರೆ ಜನತೆಯ ಹಿತದೃಷ್ಟಿಯಿಂದ ಎಲ್ಲಾ ದೇಶಗಳಲ್ಲಿಯೂ ಪ್ರತಿಯೊಂದು ಕಡೆ ಇರುವ ಹಳ್ಳಿಗಳಲ್ಲಿಯೂ ಕೂಡ ಇಂತಹ ಭಾಷೆಗಳ ರಾಜ್ಯವಾಗಬೇಕು ಎಂದು ಒತ್ತಡ ಬರಲು ರಾಷ್ಟ್ರೀಯ ಸರಕಾರದ ಮುಖಂಡತ್ವವೇ ಕಾರಣವಾಗಿದೆ. ಇಂತಹ ಅವಕಾಶಗಳನ್ನು ಜನತೆಯೂ ಉಪಯೋಗಿಸಿಕೊಂಡು, ಪಟ್ಟಭದ್ರ ಹಿತ ಎಂದರೆ ವೆಸ್ಟೆಡ್ ಇಂಟರೆಸ್ಟ್ ಎಂದು ಏನು ಹೇಳುತ್ತೇವೋ ಅಂತಹವರಿಂದ ಜನತೆಯ ಹಿತಸಾಧನೆ ಸಾಧಿಸುವುದಕ್ಕೆ ಆಗುವುದಿಲ್ಲ. ಹಿಂದೆ ಭಾಷಾವಾರು ಪ್ರಾಂತಗಳಾಗಬೇಕು ಎಂಬ ಬೇಡಿಕೆ ಜನರಿಂದ ಬಂದಾಗ ಜನತೆಯ ಅಭಿಪ್ರಾಯದಂತೆ ಬೌಂಡರಿಗಳನ್ನು ಸಿರ್ಧಾರಮಾಡಬೇಕು ಎಂದು 1952ರಲ್ಲೇ ಮಹಾರಾಷ್ಟ್ರದಲ್ಲಿ, ಆಂಧ್ರದಲ್ಲಿ, ಕೇರಳದಲ್ಲಿ ಹಾಗೂ ಕರ್ಣಾಟಕದಲ್ಲಿ ಚಳುವಳಿಗಳು ನಡೆದು 1956ರಲ್ಲಿ ಒಂದು ರೀತಿಯಾದ ರಾಜ್ಯಗಳಾದವು. ಅದರಿಂದೀಚೆಗೆ ರಾಷ್ಟ್ರೀಯ ಸರಕಾರದ ಮುಖಂಡತ್ವ ಸಡಿಲವಾಗುತ್ತ ಬರುತ್ತಿದೆ. ಆದಕಾರಣ ಇಂದು ಈ ಗಡಿ ವಿವಾದಗಳುಂಟಾಗಿವೆ. ಇದು ಹೇಗಿದೆ ಎಂದರೆ, ಕಳ್ಳತನ ಮಾಡುವವನು ಒಂದು ಅಂಗಡಿಗೆ ಲಾರಿಯಲ್ಲಿ ಬಂದು ಆ ಅಂಗಡಿಯ ಬಾಗಿಲನ್ನು ಮಾತ್ರ ತೆಗೆದು ಅಂಗಡಿಯ ಮುಂದೆ ಲಾರಿ ನಿಲ್ಲಿಸಿಕೊಂಡು ರಿಪೇರಿ ಮಾಡುತ್ತಿರುವಾಗ ಅಂಗಡಿಯೊಳಗೆ ಕಳ್ಳತನ ನಡೆಯುತ್ತಲೇ ಇರುತ್ತದೆ. ಅಂತಹ ಸಂದರ್ಭದಲ್ಲಿ ಸಾಮಾನುಗಳನ್ನು ತೆಗೆದುಕೊಂಡು ಹೋಗಲು ಯಾರೋ ಬಂದಿದ್ದಾರೆ ಎಂದು ಜನ ತಿಳಿದುಕೊಳ್ಳುತ್ತಾರೆ. ಏಕೆಂದರೆ ವಾಹನ ಸುಮ್ಮನೆ ಅಂಗಡಿ ಮುಂದೆ ನಿಂತಿದೆ ಎಂದು ನೋಡುವವರಿಗೆ ಕಾಣುತ್ತೆ. ಆದರೆ ಒಳಗಡೆ ಕಳ್ಳತನ ನಡೆಯುವುದು ನಡೆಯುತ್ತಲೇ ಇರುತ್ತದೆ. ಹೀಗೆ ಇಂದು ದೇಶದಲ್ಲಿರುವ ರಾಷ್ಟ್ರೀಯ ಸರಕಾರದ ಮುಖಂಡತ್ವ ಇರುವುದನ್ನು ನಾನು ತುಂಬಾ ಪ್ರತಿಭಟಿಸುತ್ತೇನೆ. ಹೀಗೆ ಆಗಬಾರದಾಗಿತ್ತು. ಈಗ ಮೈಸೂರಿನ ಮುಖಂಡತ್ವ ಏನಿದೆಯೋ ಅದರಲ್ಲಿ ನಮ್ಮ ಕರ್ಣಾಟಕದ ಹಿತವನ್ನು ಯಾವ ರೀತಿಯಲ್ಲಿ ಸಮರ್ಥಿಸಬೇಕೋ ಆ ರೀತಿಯಲ್ಲಿ ಮಾಡದೆ ಅದನ್ನು ಸರಿಯಾಗಿ ಒಂದು ನಿರ್ದಿಷ್ಟವಾದ ರೂಪದಲ್ಲಿಯೂ ಮಾಡದೇ ಕರ್ಣಾಟಕಕ್ಕೆ ಇಂತಹ ಪರಿಸ್ಥಿತಿ ಉಂಟಾಗಿದೆ. ಮೈಸೂರಿನ ಒಂದು ಧೋರಣೆಯಲ್ಲಿ Inconsistency ಎಂಬುದನ್ನು ಎತ್ತಿ ತೋರಿಸುತ್ತದೆ. ರಾಜಕೀಯದಲ್ಲಿ consistency ಎಂಬ ಪದಕ್ಕೆ ಅರ್ಥ ಇವರು ಸರಿಯಾಗಿ ತಿಳಿದುಕೊಂಡಿಲ್ಲವೆಂಬುದನ್ನು ಮೈಸೂರು ಮುಖಂಡತ್ವದ ಒಂದು ದಿವಾಳಿತನ ಎತ್ತಿ ತೋರಿಸುತ್ತದೆ. ಮೈಸೂರು ಜಿಲ್ಲೆಯ ಪಕ್ಕದಲ್ಲಿರುವ ನೀಲಗಿರಿ ಜಿಲ್ಲೆ ಕೊಂಚ ಭಾಗ, ಹಾಗೂ ತಾಳವಾಡಿ ಫಿರ್ಕಾ-ಇವುಗಳನ್ನು ಮೊದಲಿನಿಂದಲೂ ಕೈಬಿಟ್ಟಿರುವುದಕ್ಕೆ ಈ ರಾಜ್ಯದ ಮುಖಂಡತ್ವವೇ ಕಾರಣ. ಇನ್ನು ಮಹಾಜನ್ ಕಮಿಷನ್ ಅವರ ವರದಿಯಲ್ಲಿ ಮಹಾರಾಷ್ಟ್ರದ ಮುಖಂಡರು ಏನೇನು ಹೇಳಿದ್ದಾರೋ ಎಂಬುದನ್ನು ನೋಡಿದರೆ ಹಲವು ವಿಷಯಗಳಲ್ಲಿ ಮಹಾರಾಷ್ಟ್ರದವರು ದ್ರೋಹ ಮಾಡಿದ್ದಾರೆ. ಆದರೆ ಅದರಲ್ಲಿ ನಿರ್ದಿಷ್ಟವಾದ ಕಾರಣಗಳಿಲ್ಲ. ಮಹಾಜನ್ ಅವರ ವರದಿಯನ್ನು ನಾವು ಕೂಲಂಕಷವಾಗಿ ವಿಚಾರಮಾಡಿದರೆ ಮಹಾರಾಷ್ಟ್ರದವರು ಏನು ತೊಂದರೆಯಾಗಿದೆ ಎಂಬುದಾಗಿ ಹೇಳುತ್ತಿದ್ದಾರೋ ಅದೇ ರೀತಿಯಲ್ಲಿ ನಮ್ಮ ಕರ್ಣಾಟಕಕ್ಕೂ ಹಲವು ವಿಚಾರಗಳಲ್ಲಿ ಈ ವರದಿ ಅನುಕೂಲವಾಗಿಲ್ಲ. ನಮಗೆ ವಿರೋಧ ರೀತಿಯಲ್ಲಿಯೇ ಇದೆ. ಮಹಾರಾಷ್ಟ್ರ ಸರ್ಕಾರ ಹಾಗೂ ಮಹಾರಾಷ್ಟ್ರ ಏಕೀಕರಣ ಸಮಿತಿಯವರ ವಾದವನ್ನು ನೋಡಿದರೆ 1951ರ ಸೆನ್ಸಸ್ ಪ್ರಕಾರ ಇದನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಕೆಲವು ಕಾಲದ ಹಿಂದೆ ಹೇಳುತ್ತಿದ್ದರು. ಈಗ ಅದರಿಂದ ಅನುಕೂಲವಾಗಿಲ್ಲ ಪ್ರತಿಕೂಲವಾಗಿದೆಯೆಂದು 1961ನೇ ಸೆನ್ಸಸ್ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಇದು ನಿರ್ದಿಷ್ಟವಾದ ನಿಲುವು ಅಲ್ಲ. ಪ್ರಾರಂಭದಲ್ಲಿ ಜಿಲ್ಲಾವಾರು, ತಾಲ್ಲೂಕಾ

ವಾರು ತೆಗೆದುಕೊಳ್ಳಬೇಕೆಂದು ಹೇಳಿ, ಈಗ ಪಾಟಸ್ಕರ್ ಅವಾರ್ಡ್ ಪ್ರಕಾರ ವಿಲೇಜ್ ಯೂನಿಟ್ ಆಗಿ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಮೊದಲನೆಯ ಹಂತದಲ್ಲಿ ಜಿಲ್ಲಾವಾರು ಕ್ಲೈಮಿಟ್ಟಿದ್ದಾರೆ, ಎರಡನೆಯ ಹಂತದಲ್ಲಿ ತಾಲ್ಲೂಕಾವಾರು ಕ್ಲೈಮಿಟ್ಟಿದ್ದಾರೆ. ಕೊನೆಗೆ ಎಂ. ಇ. ಎಸ್. ಕೇಳಿದಂಥ ವಿಲೇಜ್ ಯೂನಿಟ್ ಸಹ ಕ್ಲೈಮಿಟ್ಟರು. 1958ನೇ ಇಸವಿಯಲ್ಲಿ ಪಂಚಾಯಿತ್ ರಾಜ್ಯ ವ್ಯವಸ್ಥೆ ಬಂದಾಗ 20 ಸಾವಿರ ಪ್ರಜಾಸಂಖ್ಯೆಗೆ ಒಂದು ಯೂನಿಟ್ ಎಂದು ಮಾಡಿದ್ದಾರೆ. ಅದನ್ನು ಅವರು ಆ ರೀತಿ ಶಿಫಾರಸ್ಸು ಮಾಡಿದ್ದಾರೆ. ಒಂದು ಕಡೆ ಮಹಾರಾಷ್ಟ್ರದವರಿಗಾಗಲೀ ಅಥವಾ ಕರ್ಣಾಟಕದವರಿಗಾಗಲೀ ಯಾರಿಗೂ ಸಹ ದ್ರೋಹ ಬಗೆದಂತೆ ಮಾಡದೆ ಪ್ರತಿಯೊಬ್ಬರಿಗೂ ಅನುಕೂಲವಾಗುವ ರೀತಿಯಲ್ಲಿ ಶಿಫಾರ್ಸು ಮಾಡಿದ್ದಾರೆ. ಎಂ. ಇ. ಎಸ್ ಅವರು ಹೇಳಿದಂತೆ ನಾನು ವಿರೋಧ ಮಾಡುವುದಿಲ್ಲ. ಮಹಾರಾಷ್ಟ್ರ ಜನತೆ ಮಹಾರಾಷ್ಟ್ರ ಮುಖಂಡರ ಮಧ್ಯೆ ಕೂತಿರುವಾಗ ನಾವು ನಮ್ಮ ಪ್ರಾಂತಗಳನ್ನು ಉಳಿಸಿಕೊಳ್ಳದೆ ಕೈಕಟ್ಟಿಕೊಂಡು ಇರತಕ್ಕ ಪರಿಸ್ಥಿತಿ ನಮಗೆ ಬಂದಿದೆ. ಆದ್ದರಿಂದ ಕೇಂದ್ರದ ಮುಖಂಡರು ಹಾಗೂ ನಮ್ಮ ಕನ್ನಡ ಜನತೆ ಒಗ್ಗಟ್ಟಾಗಿ ಈ ಸಭಾ ಸದಸ್ಯರೊಡಗೂಡಿ ಈಗಿನ ಒಂದು ಮಹಾರಾಷ್ಟ್ರದ ನಿಲುವನ್ನು ನಮ್ಮ ಒಂದು ದೃಢವಾದ ನಿಲುವಿನಿಂದ ಪ್ರತಿಭಟಿಸಿ ಈ ವರದಿಯ ಬಗ್ಗೆ ಪೂರ್ಣವಾಗಿ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಮಹಾಜನ್ ಸಮಿತಿ ವರದಿಯ ಮೇಲೆ ಈಗಾಗಲೇ ಸಾಕಷ್ಟು ಜನರು ಮಾತನಾಡಿದ್ದಾರೆ. ಆದರೆ ಇವತ್ತು ಈ ವರದಿಯ ವಿಷಯದಲ್ಲಿ ನಾನು ಬಹಳ ದೂರ ಆಲೋಚನೆ ಮಾಡುವ ಸಂದರ್ಭ ಬಂದಿದೆ. ಶ್ರೀಮಾನ್ ಚವಾಣ್ ಅವರು ಗೃಹಸಚಿವರಾಗಿ ಕೇಂದ್ರದಲ್ಲಿ ಇದ್ದುಕೊಂಡು ಅನೇಕವೇಳೆ ಇಂತಹ ಕೆಲವು ಸನ್ನಿವೇಶಗಳನ್ನು ರಾಷ್ಟ್ರದ ಮುಂದೆ ಎತ್ತಿದ್ದಾರೆ. ಎಲ್ಲರಿಗೂ ತಿಳಿದಿರುವ ಹಾಗೆ ಗೋವಾ ವಿಷಯದಲ್ಲಿ ರೀಓಪನ್ ಮಾಡಬಾರದು ಎಂದು ಹೇಳಿದರೂ ಅದನ್ನು ಪ್ರಾರಂಭಿಸಿ ಇನ್ನೂ ಮುಂದುವರಿಸಿಕೊಂಡು ಕರ್ಣಾಟಕಕ್ಕೆ ಹೊರಟರು. ತಮಗೆಲ್ಲಾ ಗೊತ್ತಿರುವ ಹಾಗೆ 23-5-66ರಲ್ಲಿ ವರ್ಕಿಂಗ್ ಕಮಿಟಿಯಲ್ಲಿ ಇದರ ಬಗ್ಗೆ ಚರ್ಚೆಯಾಗಿ ಒಂದು ತೀರ್ಮಾನ ಮಾಡಿಕೊಂಡಾಗ ಅದು ಅವರ ಗಮನಕ್ಕೆ ಬಂದಾಗ ಕಮಿಷನ್ನಿಗೆ ಅವರೇ ಒಪ್ಪಿದ್ದಾರೆ. ಅಂದಮೇಲೆ ಈಗ ಪದೇ ಪದೇ ಈ ಕರ್ಣಾಟಕ ವಿಷಯದಲ್ಲಿ ಅವರು ಮೇಲಿಂದ ಮೇಲೆ ಇರತಕ್ಕ ಸ್ಥಳಗಳನ್ನು ಕೇಳುವುದು ತಮಗೆಲ್ಲರಿಗೂ ಗೊತ್ತಿದೆ. ಇದು ಎಷ್ಟು ವಿಷಾದಕರವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇಷ್ಟೊಂದು ದೊಡ್ಡ ಪದವಿಯಲ್ಲಿ ಅವರು ಕೂತು ಪ್ರಾಂತೀಯ ಭಾವನೆಯಿಂದ ಕೂಡಿದ ಮಾತುಗಳನ್ನು ಆಡುವುದು ಸರಿಯಲ್ಲ. ಈ ದೇಶದಲ್ಲಿ ಈಗ ಒಗ್ಗಟ್ಟು ಬೇಕಾಗಿರುವ ಸಂದರ್ಭದಲ್ಲಿ ಅವರು ಮೇಲಿಂದ ಮೇಲೆ ಈ ಒಂದು ತೀರ್ಮಾನಕ್ಕೆ ಒಪ್ಪಿಕೊಂಡಿಲ್ಲವೆಂದು ಹೇಳುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಈ ವರದಿಯ ಪ್ರಕಾರ ಮಹಾರಾಷ್ಟ್ರದವರಿಗೆ 262 ಗ್ರಾಮಗಳನ್ನು ಕೊಟ್ಟಿದ್ದಾರೆ. ನಮಗಿಂತಲೂ 15 ಗ್ರಾಮಗಳನ್ನು ಹೆಚ್ಚಿಗೆ ಮಹಾರಾಷ್ಟ್ರಕ್ಕೆ ಕೊಟ್ಟಿದ್ದಾರೆ. ಅಲ್ಲಿಗೂ ಅವರಿಗೆ ಸಮಾಧಾನವಿಲ್ಲ. ಹಿಂದಿನಿಂದಲೂ ಇಂಡಿಯಾ ದೇಶದಲ್ಲಿ ಭಾಷಾವಾರು ಪ್ರಾಂತ ಮಾಡಬೇಕೆಂದು ಪ್ರಯತ್ನಪಟ್ಟು, ಒಂದು ಸಮ್ಮತವಾದ ರೀತಿಯಲ್ಲಿ ಆಡಳಿತ ನಡೆಸಿಕೊಂಡು ಹೋಗಬೇಕು ಎಂಬುದಾಗಿ ಪ್ರಯತ್ನಪಟ್ಟರು. ಅಂತಹವರೇ ಈಗ ಅದಕ್ಕೆ ವಿರೋಧ ಹೋಗುವ ಸಂದರ್ಭ ಬಂದಿದೆ. ಸಾಮಾನ್ಯವಾಗಿ ಪ್ರತಿಯೊಬ್ಬರೂ ಈಗ ಬೆಂಗಳೂರಿನಲ್ಲಿ ತಮಿಳು ಮಾತನಾಡುವವರಾಗಿಯೇ ಇದ್ದಾರೆ. ಇದೇ ರೀತಿ ಪ್ರಚೋದನೆಯನ್ನು ನಾವು ಅವರ ಹಾಗೆ ಮಾಡುತ್ತಾ ಬಂದರೆ ಭಾಷಾವಾರು ಪ್ರಾಂತಗಳಲ್ಲಿ ಏನೇನು ಗೊಂದಲಗಳು ಬರುತ್ತವೋ ಗೊತ್ತಿಲ್ಲ. ಇನ್ನು ಅಮೇರಿಕಾ ದೇಶದ ಅಂದಾಜನ್ನು ನಾವು ತೆಗೆದುಕೊಂಡರೆ, 17 ಕೋಟಿ 93 ಲಕ್ಷ ಪ್ರಜಾಸಂಖ್ಯೆ ಇದ್ದರೆ ಅಲ್ಲಿ 50 ಸ್ಟೇಟುಗಳಾಗಿ ಮಾಡಿದ್ದಾರೆ. ಅದು ಬಹಳ ಐಶ್ವರ್ಯವಂತ ರಾಷ್ಟ್ರವಾಗಿದೆ. ನಮ್ಮ ರಾಷ್ಟ್ರದಲ್ಲಿ ಸಣ್ಣ ಸಣ್ಣ ಅಡ್ಮಿನಿಸ್ಟ್ರೇಟಿವ್ ಯೂನಿಟ್ಟುಗಳಾಗಲಿ ಎನ್ನುವ ಮನೋಭಾವನೆ ಹಾಗೂ ಕಲ್ಪನೆ ಮಾಡುವುದಕ್ಕೆ ಮಹಾರಾಷ್ಟ್ರದವರು ಹೊರಟಿದ್ದಾರೆ. ಅವರ ಆ ಪ್ರಯತ್ನವೂ ಸಫಲವಾಗುವ ರೀತಿಯಲ್ಲಿ ಮುಂದುವರಿಯುತ್ತಿದೆ. ನಮ್ಮ ಮುಖಂಡರು ಆ ರೀತಿ ಆಗಲು ಅವಕಾಶ ಕೊಡಕೂಡದು.

ಈ ಎಲ್ಲಾ ದೃಷ್ಟಿಯಿಂದಲೂ ಈ ಕಮಿಷನ್ನಿನ ವರದಿಯ ಬಗ್ಗೆ ಪುನರ್ ಪರಿಶೀಲನೆ ಮಾಡುವುದಕ್ಕೆ ಅವಕಾಶವನ್ನು ಕೊಡಬಾರದು. ಮತ್ತೆ ಏನಾದರೂ ಈ ಗಡಿ ಪ್ರಶ್ನೆಯನ್ನು ಎತ್ತುವುದಾದರೆ ನಮ್ಮ ದೇಶವನ್ನು ಅಡ್ಮಿನಿಸ್ಟ್ರೇಟೀವ್ ಯೂನಿಟ್ ಆಗಿ ಪರಿವರ್ತನೆ ಮಾಡತಕ್ಕ ಸಂದರ್ಭ ಬರಬಹುದು. ಕೇಂದ್ರ ಸರ್ಕಾರದವರು ಇದನ್ನು ವಿಮರ್ಶೆ ಮಾಡದೇ ಹೋದರೆ ಈ ಗೊಂದಲಗಳು ಮುಕ್ತಾಯ

(ಶ್ರೀ ಕೆ. ಎನ್. ವೀರಪ್ಪಗೌಡ)

ವಾಗುವುದಿಲ್ಲ. ಒಗ್ಗಟ್ಟಿಗೆ ಅವಕಾಶವಿಲ್ಲದ ರೀತಿಯಲ್ಲಿ ಆಗುತ್ತದೆ. ಮಹಾರಾಷ್ಟ್ರದ ನಾಯಕರು ಇದನ್ನು ಒಂದು ಇಡೀ ರಾಷ್ಟ್ರದ ಐಕ್ಯತೆಯ ದೃಷ್ಟಿಯಿಂದ ಯೋಚನೆ ಮಾಡಬೇಕು. ಈ ಗೊಂದಲಮಯ ವಾತಾವರಣವನ್ನು ಪುನಃ ಪುನಃ ತಂದು ಹಾಕಿ ಮುಂದಿನ ಜನಾಂಗದಲ್ಲಿ ಭಾಷಾವಾರು ಪ್ರಾಂತ್ಯವನ್ನು ತೆಗೆದುಹಾಕಿ ಅಡ್ಮಿನಿಸ್ಟ್ರೇಟೀವ್ ಯೂನಿಟ್ ಮಾಡಿದರೆ ಒಳ್ಳೆಯದಾಗುತ್ತದೆ ಎನ್ನುವ ಕಲ್ಪನೆಗೆ ಅವಕಾಶವನ್ನು ಕೊಡಬಾರದು. ನಮ್ಮ ನಾಯಕರೇ ಹೇಳಿದ್ದಾರೆ, ಭಾಷಾವಾರು ಪ್ರಾಂತದಿಂದ ಅಷ್ಟೊಂದು ಅನಾನುಕೂಲಗಳು ಆಗತಕ್ಕಂಥ ಸಂದರ್ಭ ಬಂದರೆ ಅಡ್ಮಿನಿಸ್ಟ್ರೇಟೀವ್ ಯೂನಿಟ್ ಮಾಡುವುದು ಸೂಕ್ತ ಎಂದು ಅನಿಸುತ್ತದೆ ಎಂದು ಹೇಳಿದ್ದಾರೆ. ಆದ್ದರಿಂದ ಇಡೀ ರಾಷ್ಟ್ರಕ್ಕೆ ಈ ಅಭಿಪ್ರಾಯ ಬರುವುದರಿಂದ ಈ ರೀತಿ ಅಭಿಪ್ರಾಯ ಬಾರದೆ ಇರುವಹಾಗೆ ಮಾಡತಕ್ಕಂಥ ಮನೋಭಾವ ಮಹಾರಾಷ್ಟ್ರದವರಲ್ಲಿ ಬರಬೇಕು. ಈ ಸಭೆಯ ಮೂಲಕ ನಾನು ಎಚ್ಚರಿಕೆಯ ರೂಪದಲ್ಲಿ ಹೇಳುತ್ತೇನೆ, ಪುನಃ ಯಾವ ಕಾರಣದಿಂದಲೂ ಇದನ್ನು ರೀ ಓಪನ್ ಮಾಡುವುದಕ್ಕೆ ಅವಕಾಶವನ್ನು ಕೇಂದ್ರ ಸರ್ಕಾರದವರು ಕೊಡಬಾರದು ಎಂದು ನಾನು ಹೇಳುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† Sri H. M. CHANNABASAPPA (Periyapatna).—Mr. Speaker Sir, it is to be regretted that an issue of this kind should be the subject matter for discussion in this august House. I am really surprised why exactly so much of heat has been developed all over the country. Many of the issues which should have been given a quietus have been roused and I do not know what reasons—roused to such an extent that these things are developing hatred between people of the same country speaking different languages. Incidentally, developmental activities and programmes are second-rated. All these things indicate Sir, want of statesmanship at different levels all over the country. We can very well appreciate if discussions take place on constructive programmes, development programmes, which will make the country self-sufficient. But these are things which will actually disintegrate the unity of the country. In place of statesmanship, political activities calculated to serve self-interest calculated to grab power, money and things of the kind—they are getting encouragement indirectly. The States Reorganisation should have been done Sir, according to me, on the basis of administrative convenience. It is a crime against the nation that division of the country should have taken place on the basis of language and on the basis of community. At that time many people warned that such fissiperous tendencies should not be allowed to develop. But rightly or wrongly things have happened. After a great deal of consideration and deliberation and a great deal of commotion, the States Reorganisation Commission came into being and in 1956, several States were created, boundaries defined and the Act was passed by Parliament. Things settled down. I fail to understand why the Question of States Reorganisation should again rise up for discussion in such forums today. There must be a finality to these things if the country has to develop. If the so-called leaders of the country themselves become partisans and foment communalism to flourish, regionalism and linguism I am afraid the country will have no future and democracy will die very soon.

Sir, there is a constitutional provision in the S. R. Act to deal with any dispute that may arise in connection with boundaries defined by the S. R. Act. I fail to understand why this provision has not been used to have a settlement of any one of these disputes. If there was a dispute between Kerala–Mysore and Mysore–Maharashtra, this dispute could have been considered by the Zonal Council created under the S. R. Act and if it were possible for the Zonal Council to settle these matters, that could have been done by mutual agreement. Otherwise, they could have made recommendations to the Government of India which could have considered the recommendations of the Zonal Council. If they could not come to any decisions in regard to those recommendations, they could have suggested the appointment of a Commission to go into these matters. None of these things have been done. The Zonal councils have become dead bodies. They are not functioning properly. When there is a provision in the law, why exactly this Commission was created, I fail to understand. This is mere polities. Potti Sriramulu died, Andhra was created over-night. Bapat said he would die, the Commission was appointed. If somebody dies, something else will happen. If that is the State of affairs in India, Sir, I ask you with all respect......

(*Interruption by Sri S. D. Kothavale*)

I hope Mr. Kothavale will not say, I will die if Nipani goes. He was speaking only marathi at the time he came into Mysore. Now of course, he can speak kannada.

Mr. SPEAKER.—I must say that we have no time now for anything other than the debate.

Sri H. M. CHANNABASAPPA.—I fail to understand Sir, why this Commission was appointed by the Government of India to consider the boundary between Mysore-Maharashtra and Mysore-Kerala. All of a sudden, there was an announcement and Mysore opposed it tooth and nail. Mysore said: we stand for *status quo*. They later said, we are agreeable to minor adjustments in accordance with the provisions of law, and now all of a sudden, I fail to understand, the ex-Chief Minister my old friend, once my leader—even now my leader........

Sri B. D. JATTI.—I am not old, Sir.

Sri H. M. CHANNABASAPPA.—Leader is always a leader. A leader cannot be led.

Mr. SPEAKER.—So many leaders are deposed. It was once said, 'once a widow, always a widow'.

Sri H. M. CHANNABASAPPA.—I fail to understand the reason for tabling a motion of this kind entailing criminal waste of public funds. What happened? Mahajan Commission was opposed by Mysore, Mysore wanted *status quo* to continue, Mysore insisted that they are not co-operating with the Mahajan Commission and by the time

(SRI H. M. CHANNABASAPPA)

the Mahajan Commission Report was submitted, they say all of a sudden, we will adopt it. What is the rationale behind it? Maharashtra welcomed this Mahajan Commission and today, they say, we do not want this report. Mysore which did not want this Commission, it has been saying that we will have to adopt it. All these things look rather curious. Once the Commission report was submitted to the Govenment what did the Chief Minister do here?

3-30 P.M.

He jumped and said "Well, we accept it wholeheartedly." And now, he is summoning the Ligislature to express its opinion. What for is this opinion? It looks like a children's game. I can understand if the Chief Minister had told: "Before I express an opinion on the Commission Report on behalf of the State, I would like to confer with all the leaders of public opinion in Mysore. I would like to consult the Legislature and then give my opinion." Then, there would have been more grace, more responsiveness and greater responsibility. Without consulting the Legislature, without consulting anybody whatsoever, he welcomed and stated that it must be accepted. And now, how does he expect any man with any self-respect in this House to go in for debate on an issue which is already dead? It is something ridiculous. I cannot understand the sense in it. What are we to say? If we say, don't accept, is the Chief Minister going to change it? The matter is over. Where is the fun in criminally wasting public funds and simply making a discussion on the Report and make this Assembly a laughing stock? People outside this House read whatever transpires here with amazement because the thing is already over and the Government has accepted the Report. They are asking, why are these people debating on a dead matter? This is the feeling of the people outside. I have been outside all these days; I have been able to feel the pluse of the people. They are all laughing at the way things are going on.

The next thing is, this Resolution or this motion, as it is worded, cannot be accepted. What does it say? It says that some of the recommedations are injurious to the interests of the State. Then, why accept it? In spite of the fact that the Commission had failed to recognise the just claims of Mysore and in spite of the fact that some of its recommendations are quite injurious to the legitimate interests of the State of Mysore, why accept? When the Government is so firmly of the opinion that this Mahajan Commission's recommendations have overlooked the legitimate claims of Mysore and their acceptance is going to be injurious to the interests of the State, any responsible House of this kind cannot make recommendation to accept such a Report.

SRI S. D. KOTHAVALE (Sankeshwar).—An award or recommendation of a Commission is not likely to be satisfactory to both sides.

There will be some dissatisfaction to one side or the other. To put an end to this dispute, the Report is recommended for acceptance however injurious it may be.

SRI H. M. CHANNABASAPPA.—I do understand. If the Resolution had said, we will accept the Report *in toto* I would have had no objection.

MR. SPEAKER.—There is an amendment to that effect.

SRI H. M. CHANNABASAPPA.—That is a different matter. The Motion says that these recommendations are clearly injurious to the legitimate interests of the State. Are you really responsible to the State of Mysore to accept certain things which are injurious to the legitimate claims of Mysore ? Can a responsible House of this kind make a recommendation to accept things which are positively harmful to the State of Mysore ? I for one object to be a party to this bad decision.

The portion of the Resolution says that this House "Vehemently opposes any proposal or suggestion for obtaining 'National Consensus' or taking 'Opinion Poll'' . Where is the need for us to say that we oppose the 'National Consensus' ? What is the 'National Consensus' in a matter of this kind ? Somebody makes a statement. That is also an irresponsible statement. I do not want to comment on that. Somebody on behalf of the Home Ministry suggests 'national consensus' and 'opinion poll'. Well, it is not worth the paper on which it is written. What is more surprising is that the Home Minister, Government of India, who has to play a key role in all these matters, he is also a partisan to this issue right from the beginning. He has been taking a lead to summon all the Opposition leaders to develop a 'national consensus.' If there is any regard for good conventions, for democracy, I call upon him to resign to day on the action he has taken to convene a conference. He is a responsible man holding a key portfolio in the Government of India, who has got to shape the devlopments in regard to this matter. He wants to take a lead to summon the Opposition leader to have a consensus of opinion on the Commission's Report. Is it right that a person of his status, of his responsibility, to take this action ? All these things only indicate lack of statesmanship in this country and that only politics is being played.

MR. SPEAKER.—Fifteen minutes allotted to the hon. Member are over.

SRI H. M. CHANNABASAPPA.—There was a statement made by the Chief Minister some time ago that this Report should be accepted as a finality. Well, I fail to understand the sense in it. There has already been a finality. The Parliament has already passed the Act, the States Reorganisation Act, giving finality ; and to-day our Chief Minister says, "All right, as a matter of finality, we will accept." I ask him, who is to guarantee this finality ? Who is to guarantee ? Does he guarantee ? Tomorrow he is going away as

(SRI H. M. CHANNABASAPPA)

the President of the A. I. C. C. and will say, "I say, look here; if I were the Chief Minister, I would have made it a finality. What shall I do? Now I am President of the All-India Congress." If an Act of Parliament does not give finality in regard to this matter, can the resolution we are doing give finality? If, tomorrow somebody begins to fast, the Central Government will yield. As we know, both the State and Central Governments are subject to political pressure. This Commission is the outcome of practically pressure tactics. Pressure tactics do make them yield at every stage. Therefore, there can be no finality. If it is reasonable and if it is going to strengthen national integrity, strengthen the country, then I have no objection. This is going to do positive harm. People in the country are fighting like casts and dogs. They are saying, I am a Tamilian, I am a Maharashtrian, I am a Kannadiga, I am an Andhra. At this rate, where is going to be integration and the nation? There cannot be anything like integration. All talk of integration and national consensus is not worth the paper on which it is written; it is not worth the tongue through which it is spoken.

MR. SPEAKER.—The member's time is over.

SRI H. M. CHANNABSAPPA.—I do not like to go into details. I am dealing with Constitutional points and the way in which the whole thing has been handled. I for one would not be a party to this resolution because it is clearly stated that we accept the recommendations with our eyes open, mouth shut and ears closed. We accept the Report because it gives finality. It is not going to do any good to the country. I am for continuing the *status quo*. The States Reorganistation Act is the final thing. There can be no change from it. That is the Mysore stand even from the beginning. If any minor changes have to take place in the border, it should be in accordance with the provisions of the Constitution and the law.

MR. SPEAKER.—There is also an amendment to that effect.

SRI H. M. CHANNABASAPPA.—I am expressing my opinion. If any change is going to be made beyond the provisions of the S.R. Act and the provisions empowering the Zonal Council, I warn to-day that there can be no finality about any of the actions that have been taken so far. Otherwise, there should be umpteen committees appointed and umpteen discussions. Then, what should happen to the developmental works of the country? This will disintegrate the country and divide the whole of India into different units which will be fighting for all times. Therefore, I appeal to the House to accept the amendments, whoever may have sent them, that the *status quo* must continue. The States Reorganisation of 1956 alone should be final. We have already taken a decision that Mysore is not for the appointment of any Commission. How can you with the same voice say that we are going to

accept this report? Many people offered satyagraha and sacrified so much. It is ununderstandable that we should be a party to this resolution and accept this resolution.

Mr. SPEAKER.—All this has been said though not in the inimitable way that he is putting it.

Sri H. M. CHANNABASAPPA.—I am glad to hear from the Chair that all these things have been said and I am sure that I have a volume of opinion in my favour. Therefore, Sir, it is best that we stick to *status quo* and I take this opportunity to warn the Government of India not to play with this fissiparous tendency, to be a little more responsible and to be more statesman-like and have the solidarity of the country in view in all their actions. After all, to-day's Prime Minister may not be a Prime Minister tomorrow. Prime Ministers may come and go and Home Ministers may come and go. But, they should not continue this fissiparous tendency to continue which will not pay them either in kind or coin.

† Sri H. C. LINGA REDDY (Malur).—Sir, I rise to accord my support to the substitute motion moved by the hon. Minister for Food and while so doing, I would like to say a few words. The other House has already debated on this subject for one week and we are debating from three days. Having regard to what is going on in Delhi that the Home Minister saying that he will have a conference of the leaders of all parties to have a national consensus and on another occasion the Deputy Prime Minister saying that Government of India is thinking of having a poll and all that, I do not know what purpose this discussion of ours will serve. When I see that the Home Minister who hails from Maharashtra and who has interest in this matter, being in charge of this report, I do not think that any justice will be done to us, especially in view of the fact that he has not been fair to Mysore. In all fairness it would have been better if he had left this work to some other Minister. I remember, at the time when he became the Home Minister, it was understood that he would not handle matters relating to settlement of disputes between Maharashtra and Mysore. But, we actually see that he is evincing very keen interest and the interest which he showed earlier at the time of the setting up of the Commission to give a report and we feel now that he is altogether a different person. In this context I would request our Chief Minister who happens to be President-elect of the Indian National Congress, who is at present in Delhi, to use his good offices with the Prime Minister to see that somebody else handles this report regarding the dispute between Maharashtra and Mysore. It is only then that Mysore will get justice and not till then. I would also appeal to the Home Minister Sri Chavan, through you, in all fairness that he should leave this matter to some other Minister. He should request the Prime Minister to deal with this matter.

Sir, hon'ble members of this House and the other House have made a number of suggestions. If these suggestions have to bear any fruit,

(SRI H. C. LINGA REDDY)

I feel that a high power delegation of both the Houses should be sent to the Central Government to make them see the urgency and the necessity for accepting the Mahajan Commission Report in the interest of settlement of dispute between this State and Maharashtra State and the Kerala State. This Commission's Report is a report that has come into being as a result of the efforts of the Maharashtrian leaders. It is their own baby. Now, they are throwing away this baby; they do not want this baby, the reason being that it is not acceptable to them. We did not want it and it is they that wanted it. This is nothing but blowing hot and cold in the same breath, Sir, the Maharashtrian leaders could have and should have pleaded for opinion poll or national consensus before the appointment of the Mahajan Commission. Now, supposing Government of India appoint another Commission and that report also is not acceptable to Maharashtra; where is the sanctity and finality to such reports then? How can we expect Chief Justices of the Supreme Court or High Courts to accept such a responsibility? How can judicial officers come forward to prepare reports when their reports or of no value in the hands of political leaders? In this context, I request the Maharashtrian leaders and the all-India leaders to consider the sanctity of these reports. I am afraid, we are only paving the way for a unitary state instead of a federal state which has been working so well. The reorganisation of the States on linguistic basis itself was something which was reluctently agreed to after a lot of excitement and the happenings of extraordinary events in the country though the principle had been accepted by our leaders earlier. After we attained independence, it was shelved. But due to extraordinary things that happened in this country, States were reorganised and they are making progress. At such a juncture, we are quarreling that we are Kannadigas, we are Maharashtrians and so on. Sir, are we feeling that we are Indians? I am afraid, we are not. We should create an atmosphere in the country that we are Indians first and Indians last.

Complete reorganisation of States with unilingual language is a must in the country. Therefore some schemes were given and under those schemes the country has been reorganised. On account of the agitation carried on by the Maharashtrians we are having this commission and the Maharashtrians are not satisfied. We wanted our borders with Madras and Andhra to be settled and that was not agreed to. I would like to urge that when relationship between Maharashtra and Mysore and Mysore and Kerala are going to be settled, I hope the relationship between Madras and Mysore and Mysore and Andhra will also be settled. Why should Hosur with so many Kannadigas and Andhras who constitute about 70 per cent of the population be retained in Madras? If they want to come to Mysore, let us have them. Again in Andhra there is Madakasira. Then there is Gobichettipalayam in Coimbatore district. Let these questions be solved. Why should they be kept pending for any length of time? A time has come to settle all these problems

amicably and peace restored and we should work for the prosperity of the State, and the whole of India. Otherwise the steps that are taken by the Maharashtrians and some others will militate against the unity and solidarity of this nation. With these observations I welcome the substitute motion.

†ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಪತಿಗಳೇ, ಈಗಾಗಲೇ ಮೇಲ್ಮನೆಯಲ್ಲಿ ಮತ್ತು ಇಲ್ಲಿ ಮಹಾಜನ್ ವರದಿಯ ಬಗ್ಗೆ ಸಾಕಾದಷ್ಟು ಚರ್ಚೆ ನಡೆದಿದೆ. ಅನೇಕ ಮಾನ್ಯ ಸದಸ್ಯರು ಅದರ ಮೇಲೆ ಮಾತನಾಡಿದ್ದಾರೆ. ಈ ವರದಿಯ ಬಗ್ಗೆ, ಮಹಾಜನ್ ಅವರ ನ್ಯಾಯ ನಿಷ್ಠೆ ಬಗ್ಗೆ ಮತ್ತು ನಿಷ್ಪಕ್ಷಪಾತತೆಯ ಬಗ್ಗೆ ನನಗೆ ಅಪಾರವಾದ ಗೌರವವಿದೆ ಮತ್ತು ದೇಶದ ಸುಭದ್ರತೆಯ ದೃಷ್ಟಿಯಿಂದ ಒಂದು ಅಂತಿಮ ತೀರ್ಮಾನ ಆಗುವ ಹಾಗಿದ್ದರೆ ಈ ವರದಿಯನ್ನು ಒಪ್ಪಿಕೊಳ್ಳುವುದರ ಬಗ್ಗೆಯೂ ನನ್ನ ಅಡ್ಡಿ ಇಲ್ಲ. ಆದರೆ ಇದು ಕಾರ್ಯಗತವಾಗುವುದರ ಬಗ್ಗೆ ನನಗೆ ಬಲವಾದ ಸಂಶಯ, ಸಂದೇಹವಿದೆ.

ಮೊದಲನೆಯದಾಗಿ ಈ ವರದಿಯನ್ನು ಒಂದು ಚಕ್ರಕ್ಕೆ ಹೋಲಿಸುವುದಾದರೆ ರಥದ ನಾಲ್ಕು ಚಕ್ರಗಳಲ್ಲಿ ಮೂರು ಚಕ್ರಗಳು ಸಡಿಲವಾಗಿ ಕಳಚಿಕೊಂಡಿವೆ. ಉಳಿದ ಒಂದು ಚಕ್ರ ಎಷ್ಟೇ ರಭಸವಾಗಿ ಹೋಗಬೇಕು ಎಂದರೂ ಹೋಗುವುದಕ್ಕೆ ಸಾಧ್ಯವಿಲ್ಲ. ರಥದ ಮೂರು ಚಕ್ರಗಳು ಕುಂಟಾಗಿರುವಾಗ ನಾಲ್ಕನೇ ಚಕ್ರದಿಂದ ಮಾತ್ರ ಅದು ನಡೆಯುವುದಿಲ್ಲ. ಈ ಸಂದೇಹ ನನಗೆ ಇದೆ. ಅನೇಕ ಮಿತ್ರರು ಕೇಂದ್ರದಲ್ಲಿ ಎಲ್ಲಿಯವರೆಗೆ ಚವಾಣ್ ಅವರು ಗೃಹ ಮಂತ್ರಿಗಳಾಗಿರುತ್ತಾರೆಯೋ ಅಲ್ಲಿಯವರೆಗೂ ನ್ಯಾಯ ಸಿಕ್ಕುವುದಿಲ್ಲ ಎಂದು ಹೇಳುತ್ತಾರೆ. ಅದರ ಬಗ್ಗೆ ಸಾಕಾದಷ್ಟು ಮಾತನಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಹೇಳಬೇಕಾದರೆ ನಮ್ಮ ಮುಖ್ಯ ಮಂತ್ರಿಗಳಾದ ಮಾನ್ಯ ನಿಜಲಿಂಗಪ್ಪನವರು ಕೂಡ ಇದರಲ್ಲಿ ಕೈ ಹಾಕದೆ ಹೋದರೆ, ಇದಕ್ಕೂ ನನಗೂ ಸಂಬಂಧವಿಲ್ಲ ಎಂದು ಬೇರೆ ಯಾರಿಗಾದರೂ ಇದನ್ನು ವಹಿಸಿದರೆ ಆಗ ಕೆಲಸ ಸುಸೂತ್ರವಾಗಿ ನಡೆಯುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಶ್ರೀ ನಿಜಲಿಂಗಪ್ಪನವರು ಒಳ್ಳೆಯವರು, ಅವರೇ ನಾಡಿನ ನಾಯಕರು ಎಂದು ನಂಬಿಕೊಂಡಿದ್ದಾರೆ. ಆದರೆ ಅವರನ್ನು ನಂಬಿದರೆ ಯಾವ ಕೆಲಸವೂ ಆಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಗೋವಾ ಸಮಸ್ಯೆ ಬಂದಾಗ ಒಂದು ನಿಲುವು ಹೇಳಿದರು, ಅದನ್ನು ಕೈ ಬಿಟ್ಟರು; ಮಹಾಜನ್ ಕಮಿಷನ್ ನೇಮಕದ ವಿಷಯ ಬಂದಾಗ ಅದನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಹೇಳಿದರು, ಆಮೇಲೆ ಅದನ್ನು ಒಪ್ಪಿಕೊಂಡರು; ಕಾಂಗ್ರೆಸ್ ಅಧ್ಯಕ್ಷಗಿರಿ ಬೇಡ ಎಂದು ಹೇಳುತ್ತಿದ್ದವರು ಅದನ್ನೂ ಒಪ್ಪಿಕೊಂಡರು. ಇವರು ಬಹಳ ಸುಲಭವಾಗಿ ಒಪ್ಪಿಕೊಳ್ಳುತ್ತಾರೆ. ಇವರು ಕಾಂಗ್ರೆಸ್ ಅಧ್ಯಕ್ಷರಾಗಿ ಹೋದ ಮೇಲೆ ಯಾವುದಾದರೂ ಒಂದು ಸಂದರ್ಭದಲ್ಲಿ ಮೈಸೂರಿನ ಹಿತವನ್ನು ಕೈ ಬಿಡಬಹುದು. ನನಗೂ, ಈ ಗಡಿ ಸಮಸ್ಯೆಗೂ ದೂರ ಎಂದು ಅವರು ದೂರ ಇದ್ದರೆ, ಯಾರು ಈ ನಿಲುವನ್ನು ಬಲವಾಗಿ ತೆಗೆದುಕೊಂಡು ವಾದಿಸುತ್ತಾರೆಯೋ ಅವರಿಗೆ ಪಟ್ಟ ಕಟ್ಟಿದರೆ ಅನುಕೂಲವಾಗುತ್ತದೆ. ನಮ್ಮ ದುರಾದೃಷ್ಟವೇನೆಂದರೆ, ಕಾಂಗ್ರೆಸ್ ಪಕ್ಷದಲ್ಲಿ ಅನೇಕ ಮಿತ್ರರು ಜೀ ಹುಕುಂ ಜಾತಿಗೆ ಸೇರಿದವರಾಗಿದ್ದಾರೆ. ಶ್ರೀಮಾನ್ ನಿಜಲಿಂಗಪ್ಪನವರ ಮಾತು ಎಂದರೆ ಅವರಿಗೆ ವೇದ ವಾಕ್ಯ. ಅವರು ಎಂಥ ತಪ್ಪು ಮಾಡಿದರೂ ಅವರಿಗೆ ಕ್ಷಮೆ. ಅವರು ಹೇಳಿದ್ದಕ್ಕೆ ಎಲ್ಲದಕ್ಕೂ ಇವರು ಅಸ್ತು ಎನ್ನುತ್ತಾರೆ. ಶ್ರೀಮಾನ್ ನಿಜಲಿಂಗಪ್ಪನವರು ಹೋಗುವ ಅಧಿಕಾರ ಸ್ಥಾನದಲ್ಲಿ ಮೈಸೂರಿನ ಹಿತಕ್ಕೆ ಧಕ್ಕೆ ಬರುವುದಕ್ಕೆ ಹೆಚ್ಚು ಅವಕಾಶವಿದೆ. ಅವರು ಇದರಿಂದ ಕೈ ತೊಳೆದುಕೊಂಡು, ನನಗೂ ಇದಕ್ಕೂ ಸಂಬಂಧವಿಲ್ಲ ಎಂದರೆ ಇನ್ನೂ ಯಾರಾದರೂ ಇದನ್ನು ವಹಿಸಿಕೊಂಡರೆ ಅನುಕೂಲವಾಗಬಹುದು. ಶ್ರೀ ಚವಾಣ್ ಅವರನ್ನು ಹೇಗೆ ಗಡಿ ಸಮಸ್ಯೆಯಿಂದ ದೂರ ಇಡಬೇಕು ಎಂದು ಹೇಳುತ್ತಾರೆಯೋ ಅದೇ ಪ್ರಕಾರವಾಗಿ ಶ್ರೀ ನಿಜಲಿಂಗಪ್ಪನವರನ್ನೂ ದೂರ ಇಟ್ಟರೆ ಸಮಸ್ಯೆ ಬಗೆಹರಿಯುವುದಕ್ಕೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಮಹಾರಾಷ್ಟ್ರದವರು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಿದ್ಧರಾಗಿಲ್ಲ. ಒಂಟೆಗೆ ಡೇರೆಯೊಳಗೆ ಮೂತಿ ಇಡಲು ಅವಕಾಶ ಕೊಟ್ಟದ್ದಕ್ಕೆ ಅದು ಡೇರೆಯನ್ನು ಸಂಪೂರ್ಣವಾಗಿ ಅಕ್ರಮಿಸಿಕೊಂಡಿತು ಎಂದು ಹೇಳುವಂತೆ, ಮಹಾರಾಷ್ಟ್ರದವರಿಗೆ ಸ್ವಲ್ಪ ಜಾಗ ಕೊಟ್ಟರೆ ನಮ್ಮನ್ನೇ ಅವರು ಓಡಿಸುತ್ತಾರೆ. ಅವರಿಗೆ ಈಗ ಬೇಕಾಗಿದ್ದುದೆಲ್ಲ ಸಿಕ್ಕಿದೆ. ಇನ್ನು ಬೇಕಾದದ್ದು ಬೆಳಗಾಂ. ಬೆಳಗಾಂ ಸಿಕ್ಕಿದ ಮೇಲೆ ಕಾರವಾರ ಕೇಳುತ್ತಾರೆ. ಅದಾದಮೇಲೆ ಒಂದಾನೊಂದು ಕಾಲದಲ್ಲಿ ಷಾಜಿ ಬೆಂಗಳೂರಿನಲ್ಲಿ ಆಳುತ್ತಿದ್ದ, ಅದನ್ನು ಕೂಡ ನಮಗೇ ಕೊಡಿ ಎಂದು ಕೇಳುವ ಜನ ಅವರು.

(ಶ್ರೀ ಟಿ. ಆರ್. ಶಾಮಣ್ಣ)

ಅವರು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅವಕಾಶ ಕೊಡುವುದಿಲ್ಲ. ಅಂಥವರ ಜೊತೆಯಲ್ಲಿ ಇದು ಆಖೈರು ತೀರ್ಮಾನ ಎಂದು ಹೇಳಿದರೂ ಏನೂ ಆಗುವುದಿಲ್ಲ ಎಂದು ನನ್ನ ನಂಬಿಕೆ. ಅವರ ವಾದ ತಿರುಳಿಲ್ಲದ ವಾದ. ಅವರ ವಾದದಂತೆ ಹೋದರೆ ಬೆಂಗಳೂರನ್ನು ತಮಿಳರು ಮದ್ರಾಸಿಗೆ ಸೇರಿಸಿ ಎಂದು ಕೇಳಬಹುದು. ಬೆಂಗಳೂರಿನಲ್ಲಿ ಕಂಟೋನ್ಮೆಂಟ್ ಇದ್ದ ಹಾಗೆ ಬೆಳಗಾಂನಲ್ಲಿಯೂ ಇತ್ತು. ಬೆಂಗಳೂರು ಕಂಟೋನ್ಮೆಂಟಿನಲ್ಲಿ 80 ಪಾಲು ತಮಿಳರಿದ್ದಾರೆ. ಮಹಾರಾಷ್ಟ್ರದವರು ಬೆಳಗಾಂ ಬಗ್ಗೆ ಏನೇನು ವಾದ ಹೇಳುತ್ತಾರೆಯೋ ಅದರಂತೆ ಹೇಳುವುದಾದರೆ ನಮ್ಮ ಡಿ. ಎಂ. ಕೆ. ಮಿತ್ರರು ಬೆಂಗಳೂರು ಮದ್ರಾಸಿಗೆ ಸೇರಬೇಕು ಎಂದು ಹೇಳಬಹುದು. ಅವರು ಹೇಳುವುದನ್ನೆಲ್ಲ ಒಪ್ಪಿ ಕೊಳ್ಳುತ್ತ ಬಂದರೆ ಏನಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಬೆಂಗಳೂರು ನಗರ ದಲ್ಲಿ 33 ಪರ್ಸೆಂಟ್ ತಮಿಳರಿದ್ದಾರೆ, 25 ಪರ್ಸೆಂಟ್ ತೆಲುಗರಿದ್ದಾರೆ, ಕನ್ನಡಿಗರು ಅಲ್ಪ ಸಂಖ್ಯೆ ಯಲ್ಲಿದ್ದಾರೆ. ಮಹಾರಾಷ್ಟ್ರದವರು ಹೇಳುವ ವಾದವನ್ನು ಒಪ್ಪಿಕೊಂಡರೆ ನಾಳೆ ದಿವಸ ಶೇಕಡ 75ರಷ್ಟು ಜನರಿರುವ ಬೆಂಗಳೂರು ನಗರದ ಕಂಟೋನ್ಮೆಂಟ್ ಭಾಗವನ್ನು, ಅಲ್ಲಿ ತಮಿಳು ಶಾಲೆಗಳು ಹೆಚ್ಚಾಗಿವೆ, ಎಲ್ಲ ವಿಧದಲ್ಲಿಯೂ ಮದ್ರಾಸ್ ರಾಜ್ಯಕ್ಕೆ ಸೇರಿದ್ದ ಭಾಗ ಎಂದು ಹೇಳುತ್ತ ಹೋದರೆ ಏನಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿ. ಆದುದರಿಂದ ಮಹಾರಾಷ್ಟ್ರದ ಜನ ಹೇಳುವಂತೆ ನಡೆದುಕೊಂಡು ಹೋಗುವುದಕ್ಕೆ ಸಾಧ್ಯವೇ ಇಲ್ಲ. ಮಹಾರಾಷ್ಟ್ರದವರಿಗೆ ಜಾಗ ಪಡೆಯಬೇಕು ಎನ್ನುವ ದಾಹ ವಿಪರೀತವಾಗಿ ಇರುವುದರಿಂದ ಖಂಡಿತವಾಗಿಯೂ ನಾವು ಮಹಾಜನ್ ವರದಿಯನ್ನು ಒಪ್ಪಿಕೊಂಡು ಇದು ಅಂತಿಮ ತೀರ್ಮಾನವೆಂಬುದಾಗಿ ಹೇಳಬೇಕು, ಇಲ್ಲದೆ ಇದ್ದರೆ ನಾವೂ ಇದನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಹೇಳುವ ಮಟ್ಟಕ್ಕೆ ಬರಬೇಕು. ಮಾನ್ಯ ನಿಜಲಿಂಗಪ್ಪನವರು ಒಂದು ಅಂಗುಲ ಭೂಮಿಯನ್ನು ಬಿಟ್ಟು ಕೊಡುವುದಿಲ್ಲ ಎಂದು ಹೇಳುತ್ತಿದ್ದರು. ಅದೇ ರೀತಿ ಹೇಳು ತ್ತಿದ್ದರೆ ಮಹಾರಾಷ್ಟ್ರದವರು ಈಗ ದಾರಿಗೆ ಬರತ್ತಿದ್ದರು. ನಮ್ಮ ಮುಖ್ಯ ಮಂತ್ರಿಗಳು ಸ್ವಲ್ಪ ಸ್ವಲ್ಪ ಸಡಿಲ ಬಿಡುತ್ತಿದ್ದುದರಿಂದ ಎಲ್ಲ ಭಾಗವನ್ನೂ ಏಕೆ ಕಬಳಿಸಬಾರದು ಎಂದು ಹೊರಟಿ ದ್ದಾರೆ. ಇಲ್ಲಿರುವ ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರು ಎಷ್ಟೇ ವಾದಿಸಿದರೂ ಅವರು ನಮ್ಮವರು ಎನ್ನುವ ಅಭಿಮಾನವಿದೆ. ಮಹಾರಾಷ್ಟ್ರ ಸ್ನೇಹಿತರಿಂದ ನಾವು ಸಾಕಾದಷ್ಟು ಪಾಠವನ್ನು ಕಲಿತಿದ್ದೇವೆ. ಬೊಂಬಾಯಿ ಮಹಾರಾಷ್ಟ್ರದ ರಾಜಧಾನಿಯಾಗಬೇಕು ಎನ್ನುವಾಗ ಮೈನಾರಿಟಿ ಜನಗಳನ್ನು ಕಾಪಾಡುತ್ತೇವೆಂದು ಹೇಳಿದರು. ಈಗ ಅವರು ಮಾಡುತ್ತಿರುವ ಹಾವಳಿಯನ್ನು ನೋಡಿದರೆ, ನಾವೇನಾದರೂ ಈ ವರದಿಗೆ ನಮ್ಮ ಒಪ್ಪಿಗೆಯನ್ನು ಕೊಡುವುದಾದರೆ, ಮುಂದೆ ಮಹಾರಾಷ್ಟ್ರ ಜನರು ಕನ್ನಡ ದೇಶದ ಜನಗಳಮೇಲೆ ದಾಳಿಮಾಡಿ ಕನ್ನಡದಮಕ್ಕಳು ಕಷ್ಟಪಡಬೇಕಾದ ಪರಿಸ್ಥಿತಿ ಉಂಟುಮಾಡುತ್ತಾರೆ. ಅಂಥ ಪರಿಸ್ಥಿತಿ ಒದಗುವುದಕ್ಕೆ ಅವಕಾಶ ಕೊಡಕೂಡದು. ಖಡಾಖಂಡಿತವಾಗಿ ಈ ವರದಿಯನ್ನು ನಾವು ಒಪ್ಪುವುದಿಲ್ಲ ಎಂದು ಹೇಳಿದರೆ ಸ್ವಲ್ಪಮಟ್ಟಿಗೆ ಅವರನ್ನು ದಾರಿಗೆ ತರುವುದಕ್ಕೆ ಅವಕಾಶವಾಗಬಹುದು ಇಲ್ಲದೆ ಇದ್ದರೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅವಕಾಶವಾಗುವುದಿಲ್ಲ.

4-00 P.M.

ಮಹಾರಾಷ್ಟ್ರದವರು ತಮ್ಮ ರಾಜ್ಯದ ಹಿತವನ್ನು ಕಾಪಾಡಿಕೊಳ್ಳುವುವನ್ನೇ ಮುಖ್ಯವಾಗಿ ತಮ್ಮ ಗಮನದಲ್ಲಿಟ್ಟುಕೊಂಡಿರುವುದರಿಂದ ಮತ್ತು ತಮ್ಮ ರಾಜ್ಯವನ್ನು ವಿಸ್ತಾರ ಮಾಡಿಕೊಳ್ಳ ಬೇಕೆಂಬ ಅಭಿಲಾಷೆ ಹೊಂದಿರುವುದರಿಂದ ಈ ಸಮಸ್ಯೆಯು ಸುಲಭವಾಗಿ ಬಗೆಹರಿಯುವುದಿಲ್ಲ. ಅವರು ಹೇಳುವುದನ್ನು ನಾವು ಸಕಾರಣವಾಗಿಲ್ಲದಿದ್ದರೆ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಈಗ ನಮ್ಮ ಪಾರ್ಲಿಮೆಂಟ್ ಸದಸ್ಯರಮೇಲೆ ಹೆಚ್ಚು ಹೊಣೆ ಬಿದ್ದಿದೆ. ಅವರೆಲ್ಲರೂ ಸೇರಿ ಇರುವ ನಿಜ ಪರಿಸ್ಥಿತಿಯನ್ನು ಅರಿವು ಮಾಡಿ ನಮ್ಮ ನಿಲುವು ಏನೆಂಬುದನ್ನು ಖಚಿತವಾಗಿ ತಿಳಿಸಬೇಕು, ಅದಕ್ಕೆ ತಕ್ಕಷ್ಟು ಪ್ರಚಾರ ಕಾರ್ಯವಾಗಬೇಕು, ನಮಗೆ ಬರಬೇಕಾದುದನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನಮಾಡಬೇಕು ಎರಡನೆಯದಾಗಿ, ನಮ್ಮ ಮುಖ್ಯ ಮುಂತ್ರಿಗಳು ಒಂದು ಖಡಾಖಂಡಿತವಾದ ನಿಲುವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಈ ಸಮಸ್ಯೆಯಿಂದ ದೂರ ಇರಬೇಕು. ಸರಿಯಾದ ನಿಲುವನ್ನು ಅವರು ತೆಗೆದುಕೊಂಡರೆ ಈ ಸಮಸ್ಯೆ ಬಗೆಹರಿಯಬಹುದು. ಹಾಗಿಲ್ಲದೆ ಅವರು ಹೇಳಿದ್ದನ್ನು ಒಪ್ಪಿಕೊಳ್ಳೋಣ ಅಂದರೆ ಏನು ಪ್ರಯೋಜನವಾಗುವುದಿಲ್ಲ. ಹೀಗೆ ಒಂದು ಸ್ಪಷ್ಟ ನಿಲುವು ತಾಳಬೇಕು, ವರದಿಯನ್ನು ಒಪ್ಪಿಕೊಳ್ಳಬೇಕು, ಇಲ್ಲದಿದ್ದರೆ ಸ್ಟೇಟಸ್‌ಕೋ ಮೆಂಟೈನ್ ಮಾಡಬೇಕು, ಬದಲಾವಣೆಗೆ ಅವಕಾಶ ಕೊಡುವುದಿಲ್ಲ ಎಂದು ಖಚಿತವಾಗಿ ಹೇಳಿ ಇವರ ಬಗ್ಗೆ ಒಂದು ನಿರ್ಧಾರಮಾಡಲು ಅವಕಾಶಮಾಡಬೇಕು.

ವರದಿಯಲ್ಲಿ ಎರಡು ಸಲಹೆಗಳಿವೆ. ವರದಿಯ 173ನೆಯ ಪುಟದಲ್ಲಿ ಎರಡು ವ್ಯಾಪ್ತಿಗಳಿವೆ, ಮೈಸೂರು ಮತ್ತು ಮಹಾರಾಷ್ಟ್ರದ್ದು. ಇದರ ಬಗ್ಗೆ ತೀರ್ಮಾನಕ್ಕೆ ಬರಬೇಕೆಂದು ಹೇಳಿದ್ದಾರೆ. ತೀರ್ಮಾನ ವರದಿಯಲ್ಲಿಲ್ಲ. ಇದಕ್ಕೆ ಸಲಹೆ ಕೊಡಬೇಕು. ಎರಡನೆಯದಾಗಿ ಬೆಳಗಾಂ ನೀರು ಸರಬರಾಯಿ ವಿಚಾರದಲ್ಲಿ ತೊಂದರೆ ಬರುವ ಸಂಭವವಿದೆ. ಅದಕ್ಕೆ ಅವಕಾಶವಿಲ್ಲದಂತೆ ತೀರ್ಮಾನ ಮಾಡುವುದಕ್ಕೆ ಅವಕಾಶ ಕೊಡಬೇಕು. ಚವಾಣರು ಹೂಡಿರುವ ಆಟ ನಿಜವಾಗಿಯೂ ಕೂಡ ನಮ್ಮ ಕನ್ನಡಿಗರಿಗೆ ಧಕ್ಕೆ ತರುವುದು, ಅದು ಬೇಲಿಯೇ ಎದ್ದು ಹೊಲ ಮೇಯುವ ರೀತಿಯಲ್ಲಿದೆ. ನಿಜವಾಗಿಯೂ ಮರ್ಯಾದೆ, ಘನತೆ, ಗೌರವ ಇರುವುದಾದರೆ ಈ ವಿಷಯದಲ್ಲಿ ಆಸಕ್ತಿಯಿರುವ ಅಧಿಕಾರದಲ್ಲಿರುವ ವ್ಯಕ್ತಿಯು ಇದರಲ್ಲಿ ಪ್ರವೇಶಮಾಡಬಾರದು. ಹಾಗೆ ಮಾಡದೆ ಇದರ ಬಗ್ಗೆ ಒಂದು ನಾಟಕ ಹೂಡಿ ಈಗ ತಮ್ಮ ಹಿಡಿತದಲ್ಲಿ ಕೆಲವರೇನಿದ್ದಾರೆ, ತಮ್ಮ ಪರವಾಗಿ ಯಾರಿದ್ದಾರೆ ಅವರಿಂದ ತಮಗೆ ಅನುಕೂಲವಾದ ತೀರ್ಮಾನ ಪಡೆಯಲು ಪ್ರಯತ್ನಿಸುತ್ತಿರುವುದನ್ನು ಪೂರ್ಣವಾಗಿ ಪ್ರತಿಭಟಿಸಬೇಕು. ನಮಗೆ ಬರಬೇಕಾಗಿರುವುದರಲ್ಲಿ ಒಂದು ಅಂಗುಲ ಕೂಡ ಬಿಡುವುದಕ್ಕೆ ಸಿದ್ಧವಿಲ್ಲ ಎಂದು ಖಂಡಿತವಾಗಿ ಹೇಳಬೇಕು. ಹಾಗಿಲ್ಲದೆ ಚೌಕಾಸಿ ಮಾಡಿದರೆ ಅನಾನುಕೂಲ ವಾಗುವುದು. ಆದುದರಿಂದ ಹೀಗೆ ಮಾಡುವುದಾದರೆ ಮಾಡಬೇಕು, ಇಲ್ಲದಿದ್ದರೆ ತಮ್ಮ ನಾಯಕತ್ವವನ್ನು ಬೇರೆಯವರಿಗೆ ವಹಿಸಬೇಕು ಎಂದು ನಿಜಲಿಂಗಪ್ಪನವರನ್ನು ಕೇಳಿಕೊಂಡು ನನ್ನ ಮಾತನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಸಿ. ಎಂ. ಚುರ್ಚಿಹಾಳ್‌ಮಠ (ಮುಂಡರಗಿ).—ಮಾನ್ಯ ಸಭಾಪತಿಗಳೇ, ಈಗ ನಮ್ಮೆದುರಿಗೆ ಬಂದಿರುವ ಗಡಿ ವಿವಾದ ಮೈಸೂರು-ಮಹಾರಾಷ್ಟ್ರ ಮತ್ತು ಮೈಸೂರು ಕೇರಳ ಇವುಗಳ ಬಗ್ಗೆ ಬಂದಿರುವ ತೀರ್ಮಾನಗಳ ಬಗ್ಗೆ ಮಾತನಾಡಬೇಕೆಂದರೆ ಮಹಾಜನ್ ಕಮಿಷನ್‌ರವರು ಕೊಟ್ಟ ವರದಿ ಸಾಧಾರಣವಾಗಿ ನಮ್ಮ ಕರ್ಣಾಟಕಕ್ಕೆ ಎಲ್ಲ ರೀತಿಯಿಂದ ಬಹಳ ಲಾಭದಾಯಕವಾಗಿರುವ ಪ್ರದೇಶ ಮಹಾರಾಷ್ಟ್ರಕ್ಕೆ ಹೋಗಿ ಕೆಲವೇ ಗ್ರಾಮಗಳು ನಮ್ಮ ಕರ್ಣಾಟಕಕ್ಕೆ ಬಂದಿದ್ದು ನಿಜವಾಗಿಯೂ ಇದನ್ನು ವಿಚಾರ ಮಾಡಿದರೆ ಕರ್ಣಾಟಕಕ್ಕೆ ಅಪಾರವಾದ ಹಾನಿಯಾಗಿದೆ ಎಂಬ ಮಾತು ಸ್ಪಷ್ಟವಾಗಿ ಕಾಣುತ್ತದೆ. ಆದರೆ ಈ ಮಹಾಜನ್ ಅವರು ಯಾರು, ಅವರ ವ್ಯಕ್ತಿತ್ವವೇನು ಎಂಬುದರ ಬಗ್ಗೆ ಸಾಕಾದಷ್ಟು ಜನರು ಹೇಳಿದ್ದಾರೆ. ಅವರು ಕರ್ಣಾಟಕದ ಹಿತಸಂಬಂಧಿಗಳೂ ಅಲ್ಲ ಅಥವಾ ಮಹಾರಾಷ್ಟ್ರದ ದ್ವೇಷಿಗಳೂ ಅಲ್ಲ. ಇಂಥ ನಿಷ್ಪಕ್ಷಪಾತವಾದ ಮಹಾ ವ್ಯಕ್ತಿಯೊಬ್ಬರು ಈ ವರದಿಯನ್ನು ಒಳ್ಳೆಯ ಯೋಗ್ಯ ರೀತಿಯಲ್ಲ, ಸಮಂಜಸವಾದ ರೀತಿಯಲ್ಲಿ ಮಾಡಿದ್ದನ್ನು ನಮ್ಮ ಹಿರಿಯರು ಒಮ್ಮೆ ಇತ್ಯರ್ಥ-ಮಾಡಿಕೊಳ್ಳಬೇಕು ಎಂಬ ದೃಷ್ಟಿಯಿಂದ ಒಪ್ಪುವ ಪರಿಸ್ಥಿತಿಗೆ ಬಂದಿದ್ದಾರೆ. ಅವರು ಭಾಗ ಮಾಡುವಾಗ ಬರೇ ಭಾಷಾವಾರು ಪ್ರಶ್ನೆಯ ಮೇಲೆ ಅಷ್ಟು ಭಾಗ ಮಾಡದೆ, ಆಡಳಿತ ದೃಷ್ಟಿಯಿಂದ ಸಾಧಾರಣವಾಗಿ ಸಾಮಾಜಿಕ, ರಾಜಕೀಯ ಹಿತದೃಷ್ಟಿಯಿಂದ ವಿಚಾರ ಮಾಡಿ ಇತ್ಯರ್ಥ ಮಾಡಿ ವರದಿ ಮಾಡಿದ್ದಾರೆ ಎಂಬುದು ಅವರ ವರದಿಯನ್ನು ಓದಿದರೆ ಸ್ಪಷ್ಟವಾಗಿ ತಿಳಿಯುತ್ತದೆ. ಮಹಾರಾಷ್ಟ್ರದವರು ಇನ್ನೂ ಅನೇಕ ಕನ್ನಡ ಭಾಗಗಳು ತಮಗೆ ಬರಬೇಕು ಎಂದು ವಾದಿಸುತ್ತಿದ್ದಾರೆ. ಇದರಲ್ಲಿ ಅರ್ಥವಿಲ್ಲ. ಅವರು ಬೆಳಗಾಂ ಮೊದಲಾದ ದೊಡ್ಡ ಗ್ರಾಮಗಳು ಮಹಾರಾಷ್ಟ್ರಕ್ಕೆ ಸೇರಬೇಕು ಎಂದು ಹಿಂದೆ ಅನೇಕ ಸಲ ಹೇಳಿದ್ದಾರೆ, ಪ್ರಸ್ತಾಪ ಮಾಡಿದ್ದಾರೆ. ಹಾಗೆ ನೋಡಿದರೆ ನಮ್ಮ ಕನ್ನಡನಾಡು ಗೋದಾವರಿಯವರೆಗೆ ಇತ್ತೆಂದು ಓದಿದ್ದೇವೆ. ಅಷ್ಟೇ ಅಲ್ಲ, ಚಾಳುಕ್ಯ, ಹೊಯ್ಸಳ ಮೊದಲಾದವರ ಕಾಲಕ್ಕೆ ಸೊಲ್ಲಾಪುರ ನಮ್ಮ ದೇಶದಲ್ಲೇ ಇತ್ತು, ಈಗಲೂ ಸೊಲ್ಲಾಪುರ ಪ್ರದೇಶದಲ್ಲಿ ಶಿಲಾಶಾಸನ ಕನ್ನಡದಲ್ಲೇ ಇರುವುದನ್ನು ನೋಡಿದರೆ ನಿಜವಾಗಿಯೂ ಕೂಡ ಅದು ಕನ್ನಡನಾಡಿಗೇ ದೊರಕಬೇಕು ಎಂಬ ಮಾತು ಸ್ಪಷ್ಟವಾಗಿದೆ. ಮತ್ತು ಬ್ರಿಟಿಷರ ಆಳ್ವಿಕೆಯ ಕಾಲಕ್ಕೆ ಮುಂಬಯಿ ಪ್ರಾಂತದಲ್ಲಿ ಕರ್ಣಾಟಕ ಗೆಜೆಟಿಯರ್ 1893ರಲ್ಲಿ ಬಂದಿದೆ ಇದಕ್ಕೆ ಮುಂಬಾಯಿ ಕರ್ಣಾಟಕದ ಗೆಜಿಟೀಯರ್ ಎನ್ನುತ್ತಾರೆ ಇನ್ನೂ ಅನೇಕ ಇವೆ. ಅವುಗಳಲ್ಲಿ ಕರ್ಣಾಟಕ ಗೆಜಿಟಿಯರ್‌ನಲ್ಲಿ 4 ಜಿಲ್ಲೆಗಳನ್ನು ಸೇರಿಸಿದ್ದರು, ಕಾರವಾರ, ಬೆಳಗಾಂ, ಧಾರವಾಡ ಮತ್ತು ಬಿಜಾಪುರಗಳು ಮುಖ್ಯವಾಗಿದ್ದುವು. ಅಂದಮೇಲೆ ಇಂದಿಗೂ ಕಾರವಾರ, ಬೆಳಗಾಂ ಮುಂತಾದ ಜಿಲ್ಲೆಗಳು ಕರ್ಣಾಟಕದವು ಎಂದು ಸ್ಪಷ್ಟವಾಗಿ ಕಾಣುತ್ತದೆ. ಇನ್ನೂ ಇಷ್ಟಾದರೂ ಸಹ ಮಹಾರಾಷ್ಟ್ರದವರು ಜಿಗುಟುತನದಿಂದ ಅನೇಕ ವಿಷಯಗಳನ್ನು ಮುಂದುಮಾಡಿ ಕರ್ಣಾಟಕದ ಕೆಲವು ಪ್ರದೇಶಗಳನ್ನು ತೆಗೆದುಕೊಳ್ಳಬೇಕು, ಇಂದಲ್ಲ ನಾಳೆ ಅವನ್ನು ಪಡೆದುಕೊಳ್ಳಬೇಕು ಎಂಬ ದೃಷ್ಟಿಯಿಂದ ಇತ್ತೀಚೆಗೆ ಶಿವಸೇನೆ ಎಂಬ ಹೆಸರಿನಿಂದ ಒಂದು ಗುಂಪನ್ನು ಕಟ್ಟಿ ನಮ್ಮ ಜನರಿಗೆ ಹಿಂಸೆ ಕೊಡುತ್ತಿದ್ದಾರೆ ಎಂದು ಪತ್ರಿಕೆಗಳಲ್ಲಿ ಬರುತ್ತಿದೆ. ಮಹಾರಾಷ್ಟ್ರದಲ್ಲಿ ಹೀಗೆ ನಡೆಯುತ್ತಿದ್ದರೆ ಕೇಂದ್ರದಲ್ಲಿ ಚವಾಣರು ಅಪ್ರತ್ಯಕ್ಷವಾಗಿ ತಮ್ಮ ಯಾವ ಚಟುವಟಿಕೆಗಳನ್ನು ಮುಂದುವರೆಸುತ್ತಿದ್ದಾರೆಯೋ ಅಂತೆಯೇ ಹಿಂದೆ ಒಂದು ದಿನ ಹೈದರಾಬಾದು ರಾಜ್ಯದಲ್ಲಿ ರಜಾಕರರು ಕೂಡ ಇದೇರೀತಿಯ ಚಟುವಟಿಕೆಯನ್ನು ನಡೆಸಿದರೆಂದು ತಿಳಿದುಬಂದಿದೆ. ರಜಾಕರರು ಎಂದರೆ ದೇವರ ಸೇವಕರು ಎಂದು

(ಶ್ರೀ ಸಿ. ಎಂ. ಚುರ್ಚಿಹಾಳ್‌ಮಠ)

ಹೇಳುತ್ತಿದ್ದರು. ಆದರೆ ಅವರ ಕೃತಿಯೇ ಬೇರೆಯಾಗಿತ್ತು, ಜನರಿಗೆ ಬಹಳ ಹಿಂಸೆ ಕೊಟ್ಟರು. ಇಂದು ಶಿವಸೇನೆಯು ಮಾಡುತ್ತಿರುವ ಚಟುವಟಿಕೆ ಕೂಡ ಅದೇ ರೀತಿ ಇದೆ. ಅದು ಯಾವುದು, ಅದರ ಲಕ್ಷಣ ಏನು ಎಂಬುದನ್ನು ತಿಳಿಯಬೇಕಾದ ಪ್ರಸಂಗವಿದೆ.

ಇನ್ನು ಮುಂದೆ ಶಿವಸೇನೆಯು ಮಹಾರಾಷ್ಟ್ರದಲ್ಲಿ ತನ್ನ ಚಟುವಟಿಕೆಯನ್ನು ಮುಂದುವರಿಸಬೇಕಾದರೆ ಕರ್ಣಾಟಕದಲ್ಲಿರುವ ಮಹಾರಾಷ್ಟ್ರೀಯರು ನಮ್ಮೊಡನೆ ಸ್ನೇಹದಿಂದ ಬಾಳಬೇಕೆಂಬ ಸದುದ್ದೇಶವನ್ನಿಟ್ಟುಕೊಂಡು ಮುಂದುವರಿಸಬೇಕು. ಇಲ್ಲವಾದಲ್ಲಿ ಕರ್ಣಾಟಕದ ಜನತೆ ಒಂದಲ್ಲ ಒಂದು ರೀತಿಯಲ್ಲಿ ಯಾವದಾದರೂ ಸೇನೆಯನ್ನು ಕಟ್ಟಿ ತನ್ನ ಚಟುವಟಿಕೆಯನ್ನು ಮುಂದುವರಿಸಬೇಕಾದೀತು. ಒಂದು ಸಾರೆ ಈ ಗಡಿ ಸಮಸ್ಯೆ ಇತ್ಯರ್ಥವಾಗಲೇಬೇಕೆಂಬ ಉದ್ದೇಶದಿಂದ ನಾವು ಈ ವರದಿಯನ್ನು ಸ್ವಾಗತಿಸುತ್ತೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಶರಣಗೌಡ ಇನಾಂದಾರ್.—ಇಲ್ಲಿಯವರೆಗೂ ಅನೇಕ ಮಾನ್ಯ ಮಿತ್ರರು ಮಹಾಜನ್ ಕಮಿಷನ್ ರಿಪೋರ್ಟ್ ಮೇಲೆ ಮಾತನಾಡಿದ್ದಾರೆ. ಈ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕುವುದಕ್ಕಿಂತ ಮುಂಚಿತವಾಗಿ ಜಾತೀಯತೆಯ ಮೇಲೆ ನಮ್ಮ ಭಾರತ ಇಬ್ಭಾಗವಾದನಂತರ ಅನೇಕ ಸಲ ಇಂತಹ ಒಂದು ಪ್ರಸಂಗಗಳು ನಮಗೆ ಬಂದಿವೆ. ಅದಾದನಂತರ, ಸಣ್ಣಪುಟ್ಟ ಸಂಸ್ಥಾನಗಳು 614 ನಮ್ಮ ಭಾರತದಲ್ಲಿ ಸೇರಿಸಲ್ಪಟ್ಟಾಗ ಆಗಲೂ ಕೂಡ ಕೆಲವು ಸಣ್ಣಪುಟ್ಟ ಸಂಸ್ಥಾನಗಳನ್ನು ಈಗಿರತಕ್ಕ ಪ್ರದೇಶಗಳಲ್ಲಿ ಸೇರಿಸಬೇಕಾಯಿತು, ಈ ತರಹ ನಮ್ಮ ಭಾಗದಲ್ಲೂ ಕೂಡ, ಜತ್, ಸಾಂಗ್ಲಿ, ಮೀರಜ್, ಕುರಂದವಾಡ್, ರಾಮದುರ್ಗ, ಅಕ್ಕಲ್‌ಕೋಟ್ ಇವುಗಳನ್ನೆಲ್ಲಾ ತಾತ್ಪೂರ್ತಿಕವಾದ ಒಂದು ವ್ಯವಸ್ಥೆಯನ್ನು ಮಾಡಿ ಅಲ್ಲಲ್ಲೇ ಹತ್ತಿರ ಇರತಕ್ಕ ಪ್ರದೇಶಗಳಲ್ಲಿ ಸೇರಿಸಲಾಯಿತು. ಆಗಲೂ ಕೂಡ ಕೆಲವು ಜನರ ಮನಸ್ಸಿನಲ್ಲಿ ವಿರೋಧ ಇದ್ದರೂ ಕೂಡ ಆ ಒಂದು ಕಾರ್ಯವನ್ನು ಕೈಕೊಂಡರು, ಪುನಃ ಒಂದು ಭಾಷಾವಾರು ಪ್ರಾಂತ ರಚನೆಯಾದಾಗ ನ್ಯಾಯ ಸಿಕ್ಕುತ್ತದೆ ಎಂಬ ದೃಷ್ಟಿಯಿಂದ ಆ ರೀತಿ ಮಾಡಲಾಯಿತು. ಭಾಷಾವಾರು ಪ್ರಾಂತ ರಚನೆಗೆ ಒಮ್ಮೆ ನಾವು ಬೇಡಿದಾಗ ಎಸ್.ಆರ್. ಕಮೀಷನ್ ವರದಿ ಮೂಲಕ ಅದು ನಮಗೆ ದೊರಕಿದೆ. ಆ ಪ್ರಕಾರ ಒಂದು ಸಲ ಮಾಡಿಕೊಂಡಿದ್ದೇವೆ. ಎಸ್. ಆರ್. ಕಮೀಷನ್ ವರದಿ ಬಂದಾಗ ಅದು ಎಲ್ಲಾ ಕಡೆ ಚರ್ಚೆಯಾಗಿದೆ, ಅನಂತರ ಬಿಲ್ಲು ಬಂದಾಗಲೂ ಕೂಡ ಚರ್ಚೆಯಾಗಿ ಕೊನೆಗೆ ಪಾರ್ಲಿಮೆಂಟ್‌ನಲ್ಲಿ ಅದರ ಒಪ್ಪಿಗೆಯಾಗಿದೆ. ಪಾರ್ಲಿಮೆಂಟ್‌ನಲ್ಲಿ ಒಪ್ಪಿಗೆಯಾಗುವಾಗ ಈ ರೀತಿಯ ಒಂದು ಭರವಸೆಯನ್ನು ಹಿಂದೂಸ್ಥಾನ ಸರ್ಕಾರದಿಂದ ನಮಗೆ ಕೊಡಲಾಗಿತ್ತು. ಅದೇನೆಂದರೆ ಪುನಃ ನಾವು ಗಡಿ ಸಮಸ್ಯೆಯನ್ನು ಜೋನಲ್ ಕೌನ್ಸಿಲ್ ಮೂಲಕ ಬಗೆಹರಿಸಲಿಕ್ಕೆ ಆಸ್ಪದ ಮಾಡಿದ್ದೇವೆಯೇ ಹೊರತು ಈ ಪ್ರಶ್ನೆಯನ್ನು ಪುನಃ ಎಂದೂ ತೆರೆಯುವುದಿಲ್ಲ, ತೆರೆಯುವುದಕ್ಕೆ ಆಸ್ಪದ ಕೊಡುವುದಿಲ್ಲ ಎಂದು ಹೇಳಿದ್ದಾರೆ. ಆದರೆ ದುರ್ದೈವದಿಂದ ಜೋನಲ್ ಕೌನ್ಸಿಲ್‌ನಲ್ಲಿ ಯೋಗ್ಯ ರೀತಿಯಿಂದ ಆ ಕ್ರಮ ಕೈಕೊಳ್ಳಲಿಕ್ಕೆ, ಎಲ್ಲರೂ ಪ್ರಾಮಾಣಿಕತೆಯಿಂದ ಕೆಲಸ ಮಾಡಿಲ್ಲ ಎಂದು ಹೇಳಬೇಕಾಗಿದೆ. ಮೈಸೂರು ಸ್ಟೇಟ್ ಎರಡು ಜೋನಲ್ ಕೌನ್ಸಿಲ್‌ನಲ್ಲಿ ಸೇರಿತ್ತು. ವೆಸ್ಟರನ್ ಜೋನಲ್ ಕೌನ್ಸಿಲ್ ಮತ್ತು ಸದರನ್ ಜೋನಲ್ ಕೌನ್ಸಿಲ್ ಎರಡರಲ್ಲೂ ಇತ್ತು. ಸದರನ್ ಜೋನಲ್ ಕೌನ್ಸಿಲ್‌ನಲ್ಲಿದ್ದಾಗ ಆಂಧ್ರ, ತಮಿಳು ಮತ್ತು ಕೇರಳದಲ್ಲಿರತಕ್ಕ ಗಡಿ ಸಮಸ್ಯೆಗಳ ಬಗ್ಗೆ ಒಂದು ಕೌನ್ಸಿಲ್ ಮೀಟಿಂಗ್‌ನಲ್ಲೂ ಕೂಡ ಯಾರೂ ಏನನ್ನೂ ಹೇಳಲಿಕ್ಕೆ ಪ್ರಯತ್ನ ಮಾಡಲಿಲ್ಲ. ಒಂದು ವೇಳೆ ಮೈಸೂರು ಸರ್ಕಾರ ಎತ್ತಿದ್ದರೂ ಕೂಡ ಅದಕ್ಕೆ ಸರಿಯಾದ ತೀರ್ಮಾನ ಸಿಕ್ಕಲಿಲ್ಲ ಎಂದು ತಿಳಿದುಕೊಂಡು ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. ಆದರೆ ವೆಸ್ಟರನ್ ಜೋನಲ್ ಕೌನ್ಸಿಲ್‌ನಲ್ಲಿ ಮಾತ್ರ ಮಹಾರಾಷ್ಟ್ರದವರ ಒತ್ತಾಯದಿಂದ ಪದೇ ಪದೇ ಈ ಪ್ರಶ್ನೆಯನ್ನು ತರಲಾಯಿತು. ಆಗ ನಮ್ಮ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಜತ್ತಿ ಸಾಹೇಬರು ಒಂದು ನಿಲುವನ್ನು ತೆಗೆದುಕೊಂಡಿದ್ದರು. ಇದನ್ನು ಪುನಃ ಎತ್ತುವುದಿಲ್ಲ, ಒಂದು ವೇಳೆ ಈ ಪ್ರಶ್ನೆಯನ್ನು ಮತ್ತೆ ತೆರೆಯುವುದಾದರೆ ಮೈನರ್ ಅಡ್ಜಸ್ಟ್‌ಮೆಂಟ್ ಅಂತ ತಿಳಿದುಕೊಂಡು ಮಾತ್ರ ಮಾಡುತ್ತೇವೆ ಅಂತ ಹೇಳುತ್ತಾ ಬಂದರು. ಅದಕ್ಕನುಸಾರವಾಗಿ ಫೋರ್‌ಮ್ಯಾನ್ ಕಮಿಟಿ ಅಂತ ನೇಮಕ ಮಾಡಲಾಯಿತು. ಅದನ್ನು ಒಪ್ಪಿದಾಗ ಅದರ ಉದ್ದೇಶ ಇಷ್ಟೇ ಇತ್ತು, ಮೈನರ್ ಅಡ್ಜಸ್ಟ್‌ಮೆಂಟ್—ಫೋರ್‌ಮ್ಯಾನ್ ಕಮಿಟಿ ನೇಮಕ ಮಾಡುವ ಬಗ್ಗೆ ಪತ್ರ ಬರೆದಿದ್ದಾರೆ ಅದರಲ್ಲಿ ಏನಿದೆ ಎಂದರೆ :

"We have appointed this Four-Man Committee to submit a report, as to where they agree and where they do not agree, and where they disagree."

ಮೈಸೂರು ಸರ್ಕಾರದಿಂದ ಶ್ರೀಮಾನ್ ಚನ್ನಯ್ಯನವರು, ಮಳೀಮಠ್ ಸಾಹೇಬರು ಆ ಕಡೆ ಪಟಾಸ್ಕರ್ ರವರು, ಭಟ್ ಅಂತ ಅನ್ನುವವರನ್ನು ನೇಮಕ ಮಾಡಿ ಒಂದು ಸಮಿತಿ ಮಾಡಿದರು. ಪಟಾಸ್ಕರ್ ರವರು ಎಷ್ಟೋ ಸಲ ಬಾರ್ಡರ್ ವಿಷಯಕ್ಕೆ ಸಂಬಂಧಪಟ್ಟಂತೆ ಕೆಲಸ ಮಾಡಿದ್ದಾರೆ, ಭಟ್‌ರವರೂ ಕೂಡ ಸರ್ಕಾರದಲ್ಲಿ ದೊಡ್ಡ ಹುದ್ದೆಯನ್ನು ವಹಿಸಿಕೊಂಡಿದ್ದರು. ನಮ್ಮ ಕಡೆಯಿಂದ ನೇಮಕವಾಗಿದ್ದವರ ಪೈಕಿ ಒಬ್ಬರು ಪೊಲಿಟಿಕಲ್ ಲೀಡರ್, ಮತ್ತೊಬ್ಬರು ನಿವೃತ್ತ ಹೈಕೋರ್ಟ್ ನ್ಯಾಯಾಧೀಶರು, ಈ ಪ್ರಕಾರ ಇದ್ದ ಸಮಿತಿಗೆ ಯಾರೂ ಕಿವಿಗೊಡಲಿಲ್ಲ. ಅಷ್ಟೇ ಅಲ್ಲ ಅವರ ರಿಪೋರ್ಟನ್ನು ಸರ್ಕಾರಕ್ಕೆ ಒಪ್ಪಿಸುವುದಕ್ಕಿಂತ ಮುಂಚೆ ಕುಳಿತು ಮಾತನಾಡಿ "where they agree or where they disagree" ಎಂಬ ನಿರ್ಣಯವನ್ನು ತೆಗೆದುಕೊಳ್ಳುವ ಸೌಹಾರ್ದ ಕೂಡ ಅವರಲ್ಲಿರಲಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಇವತ್ತಿನ ದಿವಸ ರಾಜಕೀಯ ಒತ್ತಡ ಬಂದು ದೇಶದ ಸಂಪತ್ತು ಹಾಳಾಗುವ ಕೆಲಸಕ್ಕಾಗಿ, ಉಪಯೋಗವಿಲ್ಲದ ಕೆಲಸಕ್ಕಾಗಿ ಶ್ರಮವಹಿಸಿ ದೇಶಕ್ಕೆ ಅಪಾರ ಹಾನಿಯನ್ನು ಮಾಡುತ್ತಾ ಇದ್ದಾರೆ ಎಂಬ ಮಾತನ್ನು ಬಹಳ ವ್ಯಥೆಯಿಂದ ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಫೋರ್‌ಮ್ಯಾನ್ ಕಮಿಟಿ ನೇಮಕ ಮಾಡಿದಾಗ ಮಹಾರಾಷ್ಟ್ರ ಸರ್ಕಾರದ ಸಾಮಾನ್ಯ ಜನರ ದುಡ್ಡು, ಮೈಸೂರು ಸರ್ಕಾರದ ಸಾಮಾನ್ಯ ಜನರ ದುಡ್ಡು ಅಪಾರವಾಗಿ ಖರ್ಚು ಮಾಡಲಾಯಿತು. ಆ ರಿಪೋರ್ಟ್‌ನ್ನು ಇವತ್ತಿಗೂ ಕೂಡ ಸರಿಯಾಗಿ ಓದಿಲ್ಲ. ಅದಕ್ಕೆ ಗಮನಕೊಟ್ಟಿಲ್ಲ ಎಂದು ಧಾರಾಳವಾಗಿ ಹೇಳಬೇಕಾಗಿದೆ. ಏಕೆಂದರೆ, ಅವರು ಕೊಟ್ಟಿರತಕ್ಕ ಎಲ್ಲ ರಿಪೋರ್ಟುಗಳನ್ನು ಓದಿ ಕೇಂದ್ರ ಸರ್ಕಾರದವರು ಒಂದು ನಿರ್ಣಯಕ್ಕೆ ಬರಬಹುದಾಗಿತ್ತು, ಮಹಾಜನ್ ಕಮಿಷನ್‌ನ್ನು ನೇಮಕಮಾಡುವ ಅವಶ್ಯಕತೆ ಇರಲಿಲ್ಲ. ಈ ಬಗ್ಗೆ ಮೈಸೂರು ಸರ್ಕಾರದ ನಿಲುವು ಸ್ಪಷ್ಟವಾಗಿತ್ತು.

"We are not here to open any issue; only we are prepared to have minor adjustments."

ಅಡ್ಜಸ್ಟಮೆಂಟ್ ಅನ್ನತಕ್ಕ ಮಾತು ಬಹಳ ಸಮಂಜಸವಾಗಿದೆ, ಅದಕ್ಕೆ ನಾವು ಸಂಪೂರ್ಣ ಬೆಂಬಲ ಕೊಡುತ್ತಾ ಇದ್ದೇವೆ, ಏಕೆಂದರೆ ಈ ಗಡಿ ಸಮಸ್ಯೆ ಏನಿದೆ ಇದು ಕೊನೆಯವರೆಗೂ ಬಗೆಹರಿಯುವುದೇ ಇಲ್ಲ. even after the great First World War ಯೂರೋಪಿನಲ್ಲೂ ಕೂಡ ಗಡಿ ಸಮಸ್ಯೆಯನ್ನು ಬಗೆಹರಿಸಿದಾಗ: "village unit is not accepted by International Commission." ಅದೇ ರೀತಿ ಹಿಂದೂಸ್ಥಾನ್ ಪಾಕಿಸ್ತಾನ್ ಎಂದು ಹೇಳಿ ನಮ್ಮ ದೇಶವನ್ನು ಇಬ್ಭಾಗ ಮಾಡಿದಾಗಲೂ ಕೂಡ: village unit is not accepted even when India and Pakistan was formed.

Even today, village unit is quite impracticable and most unjust. ಆ ರೀತಿ ಮಾಡಲಾಯಿತು ಎಂದು ತಿಳಿದುಕೊಂಡು ನಾನು ಹೇಳಬೇಕಾಗಿದೆ, ಅದು ಇಂಪರ್‌ಫೆಕ್ಟ್, ಅದು ಸರಿಯೂ ಅಲ್ಲ. ವಿಲೇಜ್ ಯೂನಿಟ್ ಅಂತ ತಿಳಿದುಕೊಂಡು ಆ ರೀತಿ ಮಾಡುವುದು ಸರಿಯಲ್ಲ, ದೇಶದ ಜನರ ಸಂಪತ್ತನ್ನು ಸಂಸ್ಕೃತಿಯನ್ನು ಹಾಳು ಮಾಡತಕ್ಕ ಮನೋವೃತ್ತಿಯನ್ನು ಈ ರಾಜಕೀಯ ಗುತ್ತಿಗೆದಾರರು ಏನು ನಡೆಸುತ್ತಾ ಇದ್ದಾರೆ ಅದನ್ನು ಖಂಡಿತವಾಗಿಯೂ ನಿಲ್ಲಿಸಲಿಕ್ಕೇ ಬೇಕು. ವಿಲೇಜ್ ಯೂನಿಟ್ ಅಂತ ಬಹಳ ಜನ ಹೇಳುತ್ತಾ ಇದ್ದಾರೆ. ಕಾಂಗ್ರೆಸ್‌ನ ಕೆಲವು ಜನರು ಹೇಳುತ್ತಾರೆ, ಪಿ. ಎಸ್. ಪಿ. ನವರು ಹೇಳುತ್ತಾರೆ, ಎಸ್. ಎಸ್. ಪಿ. ನವರು ಹೇಳುತ್ತಾರೆ, ಕಮ್ಯೂನಿಸ್ಟರು ಹೇಳುತ್ತಾ ಇದ್ದಾರೆ, ಎಂ.ಇ.ಎಸ್.ನವರೂ ಕೂಡ ಹೇಳುತ್ತಾ ಇದ್ದಾರೆ. I am sorry to say that the leaders have not gone deep into the hearts of the people.

For village as a unit our Mysore Government has not accepted. ಪಾರ್ಲಿಮೆಂಟ್ ಕೂಡ ಒಪ್ಪಿಲ್ಲ.

Sri B. D. JATTI.—No Government, anywhere in this country, has accepted the village unit principle; not only Mysore State, but no Government has accepted it.

Sri SHARANA GOWDA INAMDAR.—Government as such has not accepted.

Sri B. B. SAYANAK.—What about Madras and Andhra?

Sri B. D. JATTI.—It was not accepted as a principle. It was a consent decree, you must know it.

Sri SHARANA GOWDA INAMDAR.—Pataskar formula is an agreed formula between the two States so far as minor adjustments are concerned. But, it is not open for any big area.

ಆ ದೃಷ್ಟಿಯಿಂದ ನಮ್ಮ ಸರ್ಕಾರದವರೂ ಒಪ್ಪಿಕೊಂಡಿಲ್ಲ, ಪಾರ್ಲಿಮೆಂಟೂ ಒಪ್ಪಿಕೊಂಡಿಲ್ಲ, ಕೇಂದ್ರ ಸರ್ಕಾರದವರು ಒಪ್ಪಿಕೊಂಡಿಲ್ಲ, ಅದನ್ನು ಯಾವ ಕಾಲಕ್ಕೂ ಯಾವ ದೇಶದಲ್ಲೂ ಒಪ್ಪಿಕೊಂಡಿಲ್ಲ, ಅಂಥಾದ್ದನ್ನು ನಮ್ಮ ತಲೆ ಮೇಲೆ ಹಾಕಿ ಇವತ್ತಿನ ದಿವಸ ದೇಶದಲ್ಲಿ ಸುಖವಾಗಿ, ಶಾಂತ ರೀತಿಯಿಂದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಸಂಪತನ್ನು ಬೆಳೆಸಿಕೊಂಡು ಬಂದು ದೇಶದ ಬೆಳವಣಿಗೆಗೆ ನಿರತರಾಗಿರತಕ್ಕ ಕಾಲದಲ್ಲಿ ಅಶಾಂತತೆಯನ್ನು ನಿರ್ಮಾಣ ಮಾಡತಕ್ಕ ಈ ಒಂದು ಸಮಸ್ಯೆ ಏನಿದೆ ಇದು ಕೊನೆಯವರೆಗೂ ನಿಲ್ಲಬಾರದು ಎಂಬ ದೃಷ್ಟಿಯಿಂದ ಇವತ್ತಿನ ದಿವಸ ಮಹಾಜನ್ ಕಮಿಷನ್ ನೇಮಕ ಮಾಡಿದರು. ಈ ಒನ್‌ಮ್ಯಾನ್ ಕಮಿಷನ್‌ಗೆ ಮೊದಲು ಕರ್ನಾಟದವರು ಒಪ್ಪದಿದ್ದರೂ ಕೂಡ ಒತ್ತಾಯದಿಂದ ಅದನ್ನು ನಮ್ಮ ಮೇಲೆ ಹೇರಿದರು ರಾಷ್ಟ್ರ ಹಿತದೃಷ್ಟಿಯಿಂದ ಅದನ್ನು ಒಪ್ಪಿಕೊಂಡಿದ್ದೇವೆ. ನಿಜವಾಗಿಯೂ ಪ್ರಜಾಪ್ರಭುತ್ವದಲ್ಲಿ ಮತ್ತು ಪಾರ್ಲಿಮೆಂಟರಿ ಟೈಪ್ ಆಪ್ ಡೆಮಾಕ್ರೆಸಿಯಲ್ಲಿ ಒಂದು Convention set up ಮಾಡಬೇಕಾಗಿರುವಾಗ, ನಮ್ಮ ಮುಂದಿನ ಜನಾಂಗಕ್ಕೆ ಮಾರ್ಗದರ್ಶನ ಮಾಡಬೇಕಾಗಿರುವಾಗ, ಇಂತಹ ಇಕ್ಕಟ್ಟಿನ ಪ್ರಶ್ನೆಯನ್ನು ಬಿಡಿಸುವಾಗ, ಸರ್ಕಾರ ಯಾವುದಾದರೂ ಒಂದು ಕಮೀಷನ್‌ನ್ನು ನೇಮಕ ಮಾಡಿದರೆ, ಒಬ್ಬ ಉನ್ನತ ನ್ಯಾಯಾಧೀಶರನ್ನು ಅದರ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಅವರು ಒಂದು ತೀರ್ಪು ಕೊಟ್ಟರೆ, ಅವರು ಕೊಟ್ಟಂಥ ತೀರ್ಪಿಗೆ ಮಾನ್ಯ ಮಾಡತಕ್ಕ ಒಂದು ಪದ್ಧತಿಯನ್ನು ಹಾಕಲಿಕ್ಕೆ ಇವತ್ತಿನ ದಿವಸ ಪ್ರಯತ್ನ ಮಾಡಬೇಕೇ ಹೊರತು ಅದನ್ನು ಬಿಟ್ಟು ವರದಿಯನ್ನು ಒಪ್ಪುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಅಂತಹ ಸಂದರ್ಭ ಬಂದಾಗ ಅಂತಹ ಎಲ್ಲಾ ಪ್ರಸಂಗಗಳನ್ನು ದೂರಮಾಡುವುದಕ್ಕೆ ಇನ್ನು ಮುಂದಾದರೂ ಯಾವ ಕುತಂತ್ರದ ವಿಚಾರವನ್ನೂ ಮಾಡದೆ, ಈಗ ಇದ್ದಂತೆಯೇ ಈ ವರದಿಯವನ್ನು ಒಪ್ಪಿಕೊಂಡು ಸರ್ಕಾರದವರು ಮುಂದೆ ಇಂತಹ ವಾದವನ್ನು ಎಂದೂ ಎತ್ತದಂತೆ ನೋಡಿಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. If the Government does like this and if they do not give any respect to the decisions that have been given by any judical authority, no gentleman or no retired judge will come forward to take up the responsibility of conducting an enquiry and give a report.

Mr. SPEAKER.—I can allow one more member from the opposition side and I do not know who he is......If the hon'ble member is not in his seat, he will loses his chance. Whenever a member is called up to speak, he should be ready to speak. It is the parliamentary procedure.

Sri J. P. SARWESH (Serum-Gulbarga) [In Hindi] .—

(*English version of Hindi Speech*)

I wish to say a few words on the Mahajan Report which is before the House for discussion. Sir, I am elected from Serum Assembly Constituency in Gulbarga District. Serum Taluk is on the border of Andhra Pradesh. In my constituency, in more than 60 Villages out of 105 villages Telugu is spoken. I very frankly wish to bring to the notice of all Hon'ble Members that the Telugu-speaking people in Sedam are living in utmost satisfaction. There are no grievances at all from them that they are illtreated or discriminated against or that their language is subjected to any kind of discrimination. In the Second and Third General Elections I was elected from the same constituency and I am very proud to state that never in the past 11 years I received any

complaint from the Telugu-speaking people that their language Telugu is either ignored or suppressed either by the authorities or by the Kannada-speaking people. There are two High Schools in the border Telugu-speaking areas of Gulbarga District where Telugu is the medium of instruction. I have not received any complaint of any kind that their areas are neglected or ignored. The fears entertained by my Marathi-speaking friends are all imaginary. It is all created by the leaders. They need not be afraid of the Kannada people. The Kannada people are very good and decent people, who have no hatred towards anybody. They are national-minded and are above narrow, regional and linguistic fanaticism.

I invited my friend Sri Sunthankar, the President of Maharashtra Ekikaran Samithi, while he was the member of this Hon'ble House to visit Sedam, my constituency and see with his own eyes how the Telugu and Kannada-speaking people are living like brothers in peace. I extend invitation to the Hon'ble Members of the Maharashtra Ekikaran Samithi of this House to visit Sedam and know the relations between the Kannada and Telugu people. If they think that their interests and their language would be suppressed or ignored, it would be wrong to think like that. The so-called border problem and the agitation of the Maharashtra Ekikaran Samithi is creating hatred and bad blood. The reaction of it we are seeing in Bombay City. It is really very strange and shameful to read in papers that the South Indian people are harassed, illitreated and subjected to insults, that their property is damaged and that they are made to suffer heavy loss. Their very existence in Bombay is threatened. Can we call ourselves a Nation? This would lead to the division of our country and would do great harm to our nation. Sir, it is very surprising that Sri Chavan, the Hon'ble Union Home Minister; forgetting his responsibility as Union Minister is openly advocating National Consensus. It is nothing but behaving like a narrow-minded and selfish layman who is interested in his own claims disregarding national interest. What are we going to loose if a few villages of Marathi-speaking people are added to Mysore State? Are there not Marathi-speaking people living happily in the midst of other language-speaking people?

Sir, I oppose the very appointment of the Mahajan Commission—with all due regards to the late Sri Mahajan. I strongly plead that status que be maintained. This alone would strengthen the national unity and would make our people learn to respect each other's languages. With these words I thank you, Sir.

4-30 P.M.

ಶ್ರೀ ಎಂ. ಮಲ್ಲಪ್ಪ (ಬೀರೂರು).—ಅಧ್ಯಕ್ಷರೇ, ಈ ಮಹಾಜನ್ ಕಮಿಟಿ ವರದಿಮೇಲೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಮಹಾಜನ್ ಕಮೀಷನ್ ನೇಮಕದ ಬಗ್ಗೆ ಕನ್ನಡಿಗರು ಸಹಸ್ರಾರು ಜನ ಸತ್ಯಾಗ್ರಹದ ಮೂಲಕ ತಮ್ಮ ಪ್ರತಿಭಟನೆಯನ್ನು ಕೂಡ ಸಲ್ಲಿಸಿದರು. ಇದನ್ನು ಅರಿತೂ ಮೈಸೂರಿನ ಮುಖ್ಯ ಮಂತ್ರಿಗಳು ಹಾಗೂ ಮೈಸೂರು ಸರ್ಕಾರ ಆ ನೇಮಕಕ್ಕೆ ಖಂಡಿತ ಒಪ್ಪಬಾರದಾಗಿತ್ತು. ಆದರೂ ಕೂಡ ಅವರು ಕೇಂದ್ರ ಸರ್ಕಾರದ ಮತ್ತು ಇಂಡಿಯನ್

(ಶ್ರೀ ಎಂ. ಮಲ್ಲಪ್ಪ)

ನ್ಯಾಷನಲ್ ಕಾಂಗ್ರೆಸ್‌ನ ಮುಖಂಡರ ಒತ್ತಾಯಕ್ಕೆ ಮಣಿದು ಅದಕ್ಕೆ ಒಪ್ಪಿದ್ದು ನಮ್ಮ ದುರಾದೃಷ್ಟವೆಂದು ಹೇಳಬೇಕಾಗಿದೆ. ಈ ಮಹಾಜನ್ ಕಮಿಟಿ ನೇಮಕವಾದಮೇಲೆ ಎ. ಐ. ಸಿ. ಸಿ. ಸೆಕ್ರಿಟರಿ ಸಾದಿಕ್ ಅಲಿಯವರು ಇದರ ಪರಿಣಾಮ ಏನಾಗುತ್ತದೆಂದು ಆಗಲೇ ಒಂದು ಹೇಳಿಕೆ ಇತ್ತರು. We will see that the decision of the commission will be final and it will be binding on both the parties ಎಂದು. ಈ ಕಮಿಟಿ ನೇಮಕವಾದ ಮಾರನೆಯ ದಿವಸವೇ ಈ ಅಭಿಪ್ರಾಯವನ್ನು ಅವರು ಸೂಚಿಸಿದರು. ಈ ರಾಜ್ಯಗಳ ಪುನರ್ವಿಂಗಡಣೆ 1956ನೇ ಇಸವಿಯಲ್ಲಿ ಆಯಿತು. 10 ವರ್ಷ ಕಾಲವಾದರೂ ಇನ್ನೂ ಸಣ್ಣಪುಟ್ಟ ಹೊಂದಾಣಿಕೆಗಳು ಆಗಬೇಕು, ಅದಕ್ಕೆ ನಾವು ಒಪ್ಪುತ್ತೇವೆ ಎಂದು ಮೈಸೂರು ಸರ್ಕಾರ ಹಾಗೂ ಮುಖ್ಯ ಮಂತ್ರಿಗಳು ಆಗಾಗ್ಗೆ ಹೇಳುತ್ತಾ ಬಂದರು. ಮಹಾರಾಷ್ಟ್ರದವರು ನಮ್ಮೊಡನೆ ಸುಖದುಃಖಗಳಲ್ಲಿ ಲಾಭನಷ್ಟಗಳಲ್ಲಿ ಎಲ್ಲದರಲ್ಲೂ ಸಮಭಾಗಿಗಳಾಗಿದ್ದಾರೆ. ಅಂತಹ ಜನ ಇವೊತ್ತಿನ ದಿವಸ ಈ ವರದಿಯನ್ನು ಒಪ್ಪುವುದಿಲ್ಲ ಎಂದು ಹೇಳಿದ್ದಾರೆ. ಈ ವರದಿಯ ಪ್ರಕಾರ ಎಷ್ಟೋ ಭಾಗ ನಮ್ಮ ಕೈಬಿಟ್ಟು ಹೋಗುವುದಿದೆ. ಇದರಿಂದ ನಮ್ಮ ಕನ್ನಡ ನಾಡಿಗೆ ನಷ್ಟವಾಗಿದೆಯೆಂದು ಆಲೋಚಿಸಬೇಕಾಗಿದೆ. 1956ರಲ್ಲಿ ರಾಜ್ಯ ಪುನರ್ವಿಂಗಡಣೆ ಆಯಿತು. 10 ವರ್ಷಗಳಾದಮೇಲೆ ಈ ವರದಿಯನ್ನು ಒಪ್ಪಿಕೊಳ್ಳುವುದರಿಂದ ಕನ್ನಡಿಗರಿಗೆ ಹಾನಿಯಾಗಿದೆ ಎಂದು ನಾನು ಹೇಳಬಯಸುತ್ತೇನೆ. ಕರ್ನಾಟಕದ ನೆರೆ ಪ್ರಾಂತದ ಜನ ತಮ್ಮ ಜೀವನದ ನಿರ್ವಹಣೆಗೆ ಬಂದವರು ಇವೊತ್ತಿನ ದಿವಸ ಕನ್ನಡ ನಾಡಿನಲ್ಲಿ ಕೆಲವು ಭಾಗಗಳಲ್ಲಿ ನೆಲೆಸಿದ್ದಾರೆ. ಹಾಗಿರುವಾಗ ಸಂಪತ್ತಿನಿಂದ ಕೂಡಿರತಕ್ಕಂಥ ಆ ಕನ್ನಡ ಭಾಗಗಳನ್ನು ಮಹಾರಾಷ್ಟ್ರಕ್ಕೆ ಬಿಟ್ಟುಕೊಡಬೇಕು ಎನ್ನುವುದರಲ್ಲಿ ನ್ಯಾಯವಿಲ್ಲ. ಈವೊತ್ತಿನ ದಿವಸ ಚಿತ್ರದುರ್ಗ ಜಿಲ್ಲೆ ಹಿರಿಯೂರಿನಲ್ಲಿ ತಮಿಳರೇ ಬಂದು ಸೇರಿಕೊಂಡಿದ್ದಾರೆ. ಅಲ್ಲಿನ ಪುರಸಭೆಗೆ 15 ಜನ ಆಯ್ಕೆಯಾಗಬೇಕಾದರೆ, 14 ಜನ ತಮಿಳರೇ ಆಯ್ಕೆಯಾಗಿದ್ದಾರೆ, ಹಾಗಾದರೆ ಇದು ತಮಿಳುನಾಡಿಗೆ ಹೋಗಬೇಕು ಎಂದರೆ ಹೇಗೆ? ಈ ಭಾಷಾವಾರು ಪ್ರಾಂತ ಆದದ್ದು ಆಡಳಿತದ ದೃಷ್ಟಿಯಿಂದ. ಆದ್ದರಿಂದ ನಾವು ಇದನ್ನು ಒಪ್ಪಿಕೊಂಡಿದ್ದೇವೆಯೋ ಹೊರತು, ಬೇರೆ ಇನ್ನಾವ ದೃಷ್ಟಿಯಿಂದಲೂ ನಾವು ಒಪ್ಪಿಕೊಂಡಿಲ್ಲ. ಇವೊತ್ತಿನ ದಿವಸ ಈ ಸಣ್ಣಪುಟ್ಟ ಹೊಂದಾಣಿಕೆಗಳನ್ನು ನಾವು ಒಪ್ಪಿಕೊಳ್ಳುವುದಕ್ಕೆ ಕಾರಣ ಇಷ್ಟೆ. ಒಬ್ಬ ಭಾರತದ ಶ್ರೇಷ್ಠ ನ್ಯಾಯಾಧೀಶರೂ ಹಾಗೂ ಉನ್ನತ ಮಟ್ಟದ ವ್ಯಕ್ತಿಗಳಾದ ಮಹಜನ್‌ರವರನ್ನು ಭಾರತ ಸರ್ಕಾರದವರು ನೇಮಕ ಮಾಡಿ ಅವರು ಒಂದು ತೀರ್ಪನ್ನು ಕೊಟ್ಟಮೇಲೆ ಅದರಲ್ಲಿ ನಮಗೆ ಅನುಕೂಲವಾಗಲಿಲ್ಲ, ಅದಕ್ಕೋಸ್ಕರ ನಾವು ಒಪ್ಪುವುದಿಲ್ಲ ಎಂದು ಹೇಳಿದರೆ ಅದು ನಿಜವಾಗಿಯೂ ರಾಷ್ಟ್ರದ್ರೋಹವಾಗುತ್ತದೆ, ಇದನ್ನು ಅಲಕ್ಷಿಸಬಾರದು; ಭಾರತ ಸರ್ಕಾರ ಇದನ್ನು ಚಾಚೂ ತಪ್ಪದೆ ಒಪ್ಪಬೇಕೆಂದು, ಈ ಒಂದು ನಿರ್ಣಯವನ್ನು ಕಳುಹಿಸುವುದರ ಜೊತೆಗೆ, ಶ್ರೀ ದೊಡ್ಡಮೇಟಿಯವರು ಹೇಳಿದಂತೆ ಇಂತಿಷ್ಟು ಕಾಲದಲ್ಲಿ ಈ ನಿರ್ಣಯವನ್ನು ಒಪ್ಪಬೇಕು ಎನ್ನತಕ್ಕಂಥಾದ್ದನ್ನು ಕಳುಹಿಸಬೇಕು. ಅವರು ಒಪ್ಪದೇ ಇದ್ದರೆ ಮುಂದೆ ಇಂತಹ ಗಡಿ ಪ್ರಶ್ನೆ ಬಂದಾಗ ನಾವು ಅದನ್ನು ಚರ್ಚಿಸುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ತಿಳಿಸಬೇಕು. ಈಗ ಕನ್ನಡ ಜನಕ್ಕೆ ಹಾನಿಯುಂಟಾಗಿದೆಯೇ ಹೊರತು ಲಾಭವಾಗಿಲ್ಲ. ಇದು ನಮ್ಮ ಮೂರ್ಖತನದಿಂದಲೇ ಆಗಿದೆ ಎಂದು ಹೇಳಬಹುದು. ನಮಗೆ ಸೇರಬೇಕಾದ ಮುಖ್ಯ ಭಾಗಗಳಾದ ನಿಪ್ಪಾಣಿ ಮುಂತಾದ ಪ್ರದೇಶಗಳು ಕೈಬಿಟ್ಟು ಹೋಗಲಿವೆ. ಭಾಷಾವಾರು ಸಮಸ್ಯೆ 10 ವರ್ಷಗಳಿಂದಲೂ ಇದೆ. ರಾಷ್ಟ್ರದ ಮುಂದೆ ಬೃಹತ್ ಸಮಸ್ಯೆಗಳು ಇರುವಾಗ ನಮ್ಮ ರಾಜ್ಯಕ್ಕೆ ಎಷ್ಟೇ ಹಾನಿಯಾಗಿದ್ದರೂ ಈ ವರದಿಯನ್ನು ಅನಿವಾರ್ಯವಾಗಿ ಒಪ್ಪಬೇಕಾಯಿತು. ಒಂದುವೇಳೆ ಮಹಾರಾಷ್ಟ್ರ ಸರ್ಕಾರದ ಮನವಿಗೆ ಕೇಂದ್ರ ಸರ್ಕಾರದವರು ಒಪ್ಪಿಗೆ ಇತ್ತರೆ, ನಾವು ಅದಕ್ಕೆ ಒಪ್ಪಿಗೆ ಕೊಡದೆ, ಎಲ್ಲರೂ ಒಗ್ಗಟ್ಟಿನಿಂದ ಅದನ್ನು ಪ್ರತಿಭಟಿಸಬೇಕೆಂದು ಮತ್ತೊಮ್ಮೆ ಹೇಳಬಯಸುತ್ತೇನೆ. ನನಗೆ ಅಧ್ಯಕ್ಷರು ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಶಿವಮೊಗ್ಗ).—ಸನ್ಮಾನ್ಯ ಸಭಾಧ್ಯಕ್ಷರೇ, ಈ ಸದನದ ಅನೇಕ ಮಾನ್ಯ ಸದಸ್ಯರು ಈಗಾಗಲೇ ಮೈಸೂರು—ಮಹಾರಾಷ್ಟ್ರ, ಮಹಾರಾಷ್ಟ್ರ—ಕೇರಳ ಇವುಗಳ ಗಡಿ ಸಮಸ್ಯೆ ಬಗ್ಗೆಯೂ ಮತ್ತು ಮಹಾಜನ್‌ರವರು ಕೊಟ್ಟಿರತಕ್ಕಂಥ ತೀರ್ಪಿನ ಬಗ್ಗೆಯೂ ಈಗಾಗಲೇ ಸಾಕಷ್ಟು ವಿಷಯಗಳನ್ನೊಳಗೊಂಡ ಅಭಿಪ್ರಾಯಗಳನ್ನು ಈ ಸದನದಲ್ಲಿ ತಿಳಿಸಿದ್ದರೆ. ನಾನು ಮಹಾಜನ್ ಕಮೀಷನ್‌ರವರ ವರದಿಮೇಲೆ ನಾನು ಭಾಷಣ ಮಾಡುವುದಕ್ಕೆ ಆಸೆ ಪಡುತ್ತೇನೆ. ಕಾರಣ ಇಷ್ಟೆ. ನಮ್ಮ ದೇಶದಲ್ಲಿ ಯಾವುದೇ ವ್ಯಾಜ್ಯಗಳು ಬಂದಾಗ, ತಂಟೆಗಳು ಬಂದಾಗ

ತೀರ್ಮಾನ ಮಾಡುವುದಕ್ಕೆ ಕೋರ್ಟಿನ ಮುಖಾಂತರವಾಗಿ ಒಂದು ದಾರಿಯನ್ನು ಕಂಡುಕೊಂಡಿದ್ದೇವೆ. ಆದರೆ ಈ ಗಡಿಯ ತಂಟೆ ತಕರಾರು ಬಂದಾಗ, ದೇಶದ ಸಮಸ್ಯೆಗೆ ತಂಟೆ ತಕರಾರುಗಳು ಬಂದಾಗ ಬಗೆಹರಿಸಬೇಕಾದರೆ ಬೇರೆ ರೂಪದಲ್ಲಿ ಅಂದರೆ ಒಂದು ಕಮೀಷನ್ ಮುಖಾಂತರ ಕಾನೂನುಬದ್ಧವಾಗಿ ತೀರ್ಮಾನ ಮಾಡುವುದಕ್ಕೆ ಸಾಧ್ಯ ಇದೆ. ಆ ರೀತಿ ಮಹಾಜನ್ ಕಮೀಷನ್ ನೇಮಕಮಾಡಿ ಅವರು ತೀರ್ಪು ಕೊಟ್ಟಿದ್ದಾರೆ. ಅವರ ತೀರ್ಪಿನಂತೆ ರಾಜ್ಯ ರಾಜ್ಯಗಳಲ್ಲಿರತಕ್ಕ ಗಡಿ ವಿವಾದಗಳನ್ನು ಶಾಂತರೀತಿಯಿಂದ ಬಗೆಹರಿಸುವುದಕ್ಕೆ ಸಾಧ್ಯ ಇದೆ. ಈ ಸಂದರ್ಭದಲ್ಲಿ ನಮ್ಮ ರಾಜ್ಯಸರ್ಕಾರದ ಬಗ್ಗೆ ಎರಡು ಮಾತುಗಳನ್ನಾಡಲು ಮತ್ತು ಕೇಂದ್ರ ಸರ್ಕಾರದ ಇಬ್ಬರು ಮಂತ್ರಿಗಳ ಬಗ್ಗೆ ಎರಡು ಮಾತುಗಳನ್ನಾಡಲು ಆಸೆ ಪಡುತ್ತೇನೆ.

ಮಹಾಜನ್ ಕಮೀಷನ್ ನೇಮಕ ಆಗುವ ಮೊದಲು ಮೈಸೂರು ರಾಜ್ಯ ಸರ್ಕಾರದ ಕ್ಲೈಮ್ಸ್ ಏನು ಇದೆ, ಮಹಾರಾಷ್ಟ್ರದ ಕ್ಲೈಮ್ಸ್ ಏನು ಇದೆ ಎನ್ನುವುದನ್ನೂ ಕಮಿಷನ್‌ನವರ ಮುಂದೆ ಇಡಬೇಕಾಗಿತ್ತು. ರಾಜ್ಯ ಸರ್ಕಾರದ ಒಂದು ನೀತಿ ಯಾವೊತ್ತಿಗೂ ಕೂಡ ಒಂದು ಹಾಸ್ಯಾಸ್ಪದವಾಗಿ ನಡೆದಿದೆ. ಯಾವ ವಿಷಯದಲ್ಲೂ ಕೂಡ ರಾಜ್ಯ ಸರಕಾರ ತನ್ನದೇ ಆದ ಒಂದು ಬಗೆಯ ಆಡಳಿತವನ್ನು ಯೋಚನೆ ಮಾಡಿದೆ. ನಮ್ಮ ರಾಜ್ಯದ ನಿಲುವು ಏನು ಎಂಬುದನ್ನು ಕಮೀಷನ್ ಮುಂದೆ ಕೊಟ್ಟಿಲ್ಲ. ಇಂಥಾದ್ದು ನೂರಾರು ಉದಾಹರಣೆಗಳು ಇವೆ. ಈ ಮಹಾಜನ್ ಕಮೀಷನ್ ನೇಮಕ ಆಗಬೇಕಾದರೆ ಶ್ರೀಮಾನ್ ನಿಜಲಿಂಗಪ್ಪನವರು ಅವರ ಮಂತ್ರಿಮಂಡಲದವರು ಇದಕ್ಕೆ ಒಪ್ಪಿಗೆ ಕೊಟ್ಟು ನಮ್ಮ ರಾಜ್ಯ ಸರ್ಕಾರದವರ ಅಭಿಪ್ರಾಯಗಳನ್ನು ಕಮೀಷನ್ ಮುಂದೆ ಇಟ್ಟು ನ್ಯಾಯವಾಗಿ ನಮ್ಮ ರಾಜ್ಯಕ್ಕೆ ಬರಬೇಕಾದಂಥ ಪ್ರದೇಶಗಳನ್ನು ಪಡೆಯಬೇಕಾಗಿತ್ತು. ಆದರೆ ಇವರು ಮೊದಲು ಒಪ್ಪದೆ ಆಮೇಲೆ ಕೇಂದ್ರ ಸರ್ಕಾರದವರ ಮಾತಿಗೆ ಮರುಳಾಗಿ ಒಪ್ಪಿದ್ದಾರೆ. ಈ ರೀತಿ ಕಮೀಷನ್ ನೇಮವಾಗಿದೆಯೇ ವಿನಾ, ಕಮೀಷನ್ ನೇಮಿಸಿಕೊಂಡು ಒಳ್ಳೆಯ ತೀರ್ಪನ್ನು ಪಡೆಯುತ್ತೇವೆ ಎನ್ನುವ ದೃಷ್ಟಿಯಲ್ಲಿ ಮಾಡಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿದೆ. ಯಾವುದೋ ಒಂದು ಒತ್ತಾಯಕೋಸ್ಕರ ಮಹಾಜನ್ ಕಮೀಷನ್ ಆಯಿತು. ಆದರೂ ನಮಗೆ ಯಾವ ಯಾವ ಪ್ರದೇಶಗಳು ಬರಬೇಕಾಗಿತ್ತೋ ಅವು ಬಾರದೆ ನಿಪ್ಪಾಣಿ ಮುಂತಾದ ಪ್ರದೇಶಗಳು ನಮ್ಮ ಕೈಬಿಟ್ಟು ಹೋದವು. ಮಹಾಜನ್ ಕಮೀಷನ್ ತೀರ್ಪು ಹೊರಬಿದ್ದ ಕೂಡಲೇ ರಾಜ್ಯ ಸರ್ಕಾರದವರು ತಮ್ಮ ಸ್ಪಷ್ಟವಾದ ನಿಲುವನ್ನು ತಿಳಿಸಬೇಕಾಗಿತ್ತು. ಆ ಸಮಯದಲ್ಲಿ ತಿಳಿಸಲಿಲ್ಲ. ನಾನು ಮೊದಲೇ ಹೇಳಿದಹಾಗೆ ಮಹಾಜನ್ ಕಮೀಷನ್ ನೇಮಕ ಆಗುವುದಕ್ಕೆ ಯಾವ ರೀತಿಯಿಂದ ಮಹಾರಾಷ್ಟ್ರದವರು ಒಪ್ಪಿಗೆ ಕೊಟ್ಟರೋ ಅದೇ ರೀತಿಯಾಗಿ ಅವರ ತೀರ್ಮಾನವನ್ನು ಒಪ್ಪಿಕೊಳ್ಳಬೇಕಾಗಿತ್ತು. ಆ ರೀತಿ ಮಾಡಿದ್ದಾರೆಯೇ ? ಇದನ್ನು ಕೇಂದ್ರಸರ್ಕಾರದ ನಾಯಕರು ಪಾರ್ಲಿಮೆಂಟ್‌ನಲ್ಲಿ ಇಟ್ಟು ಅವರ ಒಂದು ಒಪ್ಪಿಗೆಯನ್ನು ಪಡೆಯಬೇಕಾಗಿತ್ತು. ನಮ್ಮ ರಾಜ್ಯದ ಮಂತ್ರಿಮಂಡಲದವರು ಆದರಲ್ಲೂ ಕೂಡ ಶ್ರೀಮಾನ್ ನಿಜಲಿಂಗಪ್ಪನವರು ನಮ್ಮ ರಾಜ್ಯದಲ್ಲಿರತಕ್ಕ ಎಲ್ಲಾ ಪಕ್ಷಗಳ ಮುಖಂಡರನ್ನೂ ಕರೆದು ಇದರ ಬಗ್ಗೆ ಅವರ ಅಭಿಪ್ರಾಯಗಳನ್ನು ಪಡೆಯಬೇಕಾಗಿತ್ತು. ಆದರೆ ಅವರು ಆರೀತಿ ಮಾಡಲಿಲ್ಲ. ತಮ್ಮ ಮುಂದೆ ವರದಿ ಇದೆ ಎಂದು ಕಂಡಕೂಡಲೇ ಅದನ್ನು ಒಪ್ಪಿಕೊಳ್ಳಬೇಕೆಂದು ಹೇಳಿದರು. ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಲ್ಲದೇ ಬೇರೆ ಬೇರೆ ಪಕ್ಷಗಳೂ ಇವೆ. ಅವರ ನಿಲುವನ್ನೂ ಸ್ಪಷ್ಟಪಡಿಸಿಕೊಂಡು ನಂತರ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ನಾಯಕರಿಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕಾಗಿತ್ತು ಎಂದು ನನ್ನ ಅಭಿಪ್ರಾಯ.

ಸ್ವಾಮೀ, ಮಹಜನ್ ಕಮಿಷನ್‌ನವರು ಮಾಡಿರುವುದು ಒಂದು ತೀರ್ಪಲ್ಲ ಬರೀ ವರದಿ ಎಂದು ಸೆಂಟ್ರಲ್ ಗವರ್ನಮೆಂಟಿನವರು ಇದನ್ನು ಒಪ್ಪದೇ ಇರಬಹುದು ಎಂದು ತೀರ್ಮಾನ ಮಾಡುವುದಾದರೆ ಇನ್ನು ಮೇಲೆ ಯಾವ ಸರಕಾರವೂ ಉಳಿಯುವುದಿಲ್ಲ. ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಇಲ್ಲಿ ಹೇಳಿದಂತೆ ಇನ್ನು ಮುಂದೆ ಹೈಕೋರ್ಟಿನವರು ಅಥವಾ ಸುಪ್ರೀಂ ಕೋರ್ಟಿನ ನ್ಯಾಯಾಧೀಶರೇ ಆಗಲಿ ಇಂತಹ ಒಂದು ಕಮಿಷನ್ ಮಾಡುವಾಗ ಅವರನ್ನು ಸದಸ್ಯರಾಗಿ ಅಥವಾ ಅಧ್ಯಕ್ಷರಾಗಿ ಕೆಲಸ ಮಾಡಬೇಕೆಂದು ಕೇಳಿದರೆ ಅವರು ಒಪ್ಪುವುದಿಲ್ಲ ಎಂದು ಹೇಳುವ ಕಾಲವೂ ಬರಬಹುದು. ಅಂತಹ ಕಾಲ ಬರುತ್ತದೆ ಎಂದು ಇಲ್ಲಿ ನಮ್ಮ ಕಣ್ಣಿನ ಎದುರಿಗೇ ಕಾಣುತ್ತದೆ. ಮಾನ್ಯ ನ್ಯಾಯಾಧೀಶರಾಗಿದ್ದ ಶ್ರೀಮಾನ್ ಮಹಾಜನ್‌ರವರು ಜೀವಂತರಾಗಿದ್ದಾಗ ಕೇಂದ್ರ ಸರ್ಕಾರದವರು ಹಾಗೂ ಸಂಬಂಧಪಟ್ಟ ರಾಜ್ಯಸರ್ಕಾರಗಳು ಅವರ ವರದಿಯನ್ನು ತೀರ್ಪೆಂದು ಪರಿಪಾಲನೆ ಮಾಡುವುದಿಲ್ಲ ಎಂದು ಹೇಳುವುದಾದರೆ ಇನ್ನು ಮುಂದೆ ಜುಡಿಷಿಯರಿಗೆ ಏನೂ ಬೆಲೆ ಇಲ್ಲದಂತಾಗುತ್ತದೆ. ಇಲ್ಲಿಯವರಗೂ ಜನತೆ ಕೋರ್ಟಿನ ತೀರ್ಮಾನಗಳನ್ನು ಎಲ್ಲರೂ ಒಪ್ಪುತ್ತಾರೆನ್ನುವ ಒಂದು ಅಭಿಪ್ರಾಯಕ್ಕೆ ಬಂದಿದ್ದಾರೆ ಮತ್ತು ಕೋರ್ಟಿಗೆ ಇಂದು ದೇಶದಲ್ಲಿ ಬಹಳ ಹೆಚ್ಚಾಗಿ ಬೆಲೆ ಕೊಡುತ್ತಿದ್ದಾರೆ. ಇನ್ನು ಮುಂದೆ ಕೋರ್ಟಿನ ತೀರ್ಪನ್ನು ಒಪ್ಪದೇ ಹೋದರೆ ಮುಂದೆ ಯಾರೂ ಉಳಿಯುವಂತಿಲ್ಲ.

(ಶ್ರೀ ಎಸ್. ಬಂಗಾರಪ್ಪ)

ನ್ಯಾಯಾಧೀಶರುಗಳ ವಿಮರ್ಶೆಗೆ ಬೆಲೆಯೇ ಬರುವುದಿಲ್ಲ ಎಂದು ಮುಂದೆ ಏನಾದರೂ ಯಾವ ಸರಕಾರವೇ ಆಗಲಿ ಕಮಿಷನ್ ಮಾಡಬೇಕೆಂದು ನ್ಯಾಯಾಧೀಶರನ್ನು ಈ ಕೆಲಸಕ್ಕೆ ಕರೆದರೆ ಅವರೂ ಒಪ್ಪುವುದಿಲ್ಲ ಎಂದು ಹೇಳುವ ಕಾಲವೂ ಮುಂದೆ ಬರುತ್ತದೆ. ನಮ್ಮ ಮಹಾರಾಷ್ಟ್ರದಲ್ಲಿರುವ ಅಣ್ಣ ತಮ್ಮಂದಿರು ಯಾರೇ ಆಗಿರಲಿ, ಕರ್ಣಾಟಕದಲ್ಲೇ ಆಗಲೀ ಕೇರಳದಲ್ಲೇ ಆಗಲಿ ಅಥವಾ ಆಂಧ್ರದಲ್ಲೇ ಆಗಲೀ ಇದನ್ನು ಒಂದು ರಾಷ್ಟ್ರದ ಐಕ್ಯತೆಯ ಸಮಸ್ಯೆ ಎಂದು ಪರಿಹರಿಸುವುದಕ್ಕೆ ಸಾಧ್ಯವಾಗುತ್ತದೆ, ಇಲ್ಲದೇ ಇದ್ದರೆ ಇದು ಬಗೆಹರಿಯುವುದಿಲ್ಲ. ಕೊನೆಯದಾಗಿ ನಾನು ಹೇಳುವುದು ಇಷ್ಟೇ: ನಮ್ಮ ರಾಜ್ಯ ಸರ್ಕಾರದವರು ಯಾವ ರೀತಿಯಾಗಿ ಒಂದು ಹೇಳಿಕೆ ಕೊಟ್ಟಿದ್ದಾರೋ ಅದರಂತೆ ಇದನ್ನು ಒಂದು ತೀರ್ಪು ಎಂದು ಭಾವಿಸಿಕೊಂಡು ಇದನ್ನು ಎಲ್ಲರೂ ಒಪ್ಪಿಕೊಳ್ಳಬೇಕೆಂದು ಮಾಡಿ ಈ ತೀರ್ಪನ್ನು ಕಾರ್ಯಗತವಾಗುವಂತೆ ಮಾಡಬೇಕು. ಆದರೆ ಈ ತೀರ್ಪಿನ ಬಗ್ಗೆ ಮೈಸೂರಿನವರೇ ಆಗಲೀ ಮಹಾರಾಷ್ಟ್ರದವರೇ ಆಗಲಿ ಕೇಂದ್ರ ಸರ್ಕಾರದಲ್ಲಿರುವವರು ಇದರ ಬಗ್ಗೆ ಇಲ್ಲದ ಸಲ್ಲದ ಹೇಳಿಕೆಗಳನ್ನು ಕೊಡುವುದನ್ನು ನಿಲ್ಲಿಸಬೇಕು. ಉದಾಹರಣೆಯಾಗಿ ಹೇಳುವುದಾದರೆ, ಕೇಂದ್ರದಲ್ಲಿರುವ ಚವಾಣರು ಹಾಗೂ ಶ್ರೀ ಶುಕ್ಲರವರು ಈಚೆಗೆ ಕೊಟ್ಟಿರುವ ಹೇಳಿಕೆಗಳನ್ನು ನೋಡಿದರೆ ಅದರಲ್ಲಿ ಕಾನ್‌ಸೆನ್‌ಷನ್ ಒಪಿನಿಯನ್ ತೆಗೆದುಕೊಳ್ಳಬೇಕು ಹಾಗೂ ಒಪಿನಿಯನ್ ಪೋಲ್ ತೆಗೆದುಕೊಳ್ಳಬೇಕು ಎಂದು ಹೇಳುವುದು ಸರಿಯಲ್ಲ. ಕೇಂದ್ರದಲ್ಲಿರುವ ನಾಯಕರುಗಳು ಯಾರೇ ಆಗಿರಲಿ ಮಹಾರಾಷ್ಟ್ರಕ್ಕೆ ಸಂಬಂಧಿಸಿದಂತೆ ಅಥವಾ ಇತರ ರಾಜ್ಯಗಳಿಗೆ ಸಂಬಂಧಿಸಿದಂತೆ ಹೇಳಿಕೆಗಳನ್ನು ಕೊಡುವುದನ್ನು ಬಿಡಬೇಕು. ಇಲ್ಲದೇ ಇದ್ದರೆ ಸರಕಾರ ಇದರ ಬಗ್ಗೆ ಸೂಕ್ತ ಗಮನಕೊಟ್ಟು ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು. ಇದರ ಬಗ್ಗೆ ನಮ್ಮ ರಾಜ್ಯ ಸರಕಾರದವರೂ ಕೇಂದ್ರ ಸರಕಾರಕ್ಕೆ ತಿಳಿಸಿ ಈ ತೀರ್ಪನ್ನು ಒಪ್ಪುವಂತೆ ಮಾಡಿ ಇದನ್ನು ಕಾರ್ಯಗತ ಮಾಡಲು ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ಮಾನ್ಯ ಅಧ್ಯಕ್ಷರೇ, ಈಗ್ಗೆ ಎರಡು ಮೂರು ದಿನಗಳಿಂದಲೂ ನಮ್ಮ ಮಾನ್ಯ ಮಂತ್ರಿಗಳು ಇಲ್ಲಿ ತಂದಿರುವ ನಿರ್ಣಯದ ಬಗ್ಗೆ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ನನ್ನ ವೈಯಕ್ತಿಕ ಅಭಿಪ್ರಾಯವೇನೆಂದರೆ, ಸುಮಾರು ಮೂರು ದಿವಸಗಳಿಂದಲೂ ಇದಕ್ಕಾಗಿ ನಮ್ಮ ಮೈಸೂರು ರಾಜ್ಯದ ಹಣ ಮತ್ತು ವೇಳೆಯನ್ನು ವ್ಯರ್ಥವಾಗಿ ಕಳೆದಿದ್ದಾರೆ ಎನ್ನುವ ಒಂದು ಮಾತನ್ನು ನಾನು ಇಲ್ಲಿ ಹೇಳಬೇಕಾಗಿದೆ; ಮತ್ತು ಇದು ವ್ಯರ್ಥ ಎಂದೂ ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ನಮ್ಮ ಈ ಅಸೆಂಬ್ಲಿಯನ್ನು ಕರೆಯುವುದಕ್ಕೆ ಮುಂದೆ ನಮ್ಮ ಮುಖ್ಯ ಮಂತ್ರಿಗಳು ಮಹಾಜನ್‌ರ ವರದಿಯನ್ನು ಸಂತೋಷವಾಗಿ ನಾವು ಒಪ್ಪಿಕೊಂಡಿದ್ದೇವೆ ಎನ್ನುವ ಸಂಗತಿಯನ್ನೂ ವ್ಯಕ್ತಪಡಿಸಿದರು. ಆದರೆ ಈಗ ಇಂದಿನ ಸಮಸ್ಯೆಗಳನ್ನು ನೋಡಿದರೆ ಇನ್ನೂ ಮುಖ್ಯವಾದ ಎಷ್ಟೋ ಕಾರ್ಯಗಳಿವೆ. ರಾಜ್ಯದ ಆಹಾರ ಪರಿಸ್ಥಿತಿಯನ್ನು ಉತ್ತಮಪಡಿಸಬೇಕು ಮತ್ತು ಯೋಜನೆಗಳಂತೆ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಇಂತಹುದರಲ್ಲಿ ನ್ಯಾಷನಲ್ ಬಾರ್ಡರು ಹಾಗೂ ಸ್ಟೇಟು ಬಾರ್ಡರುಗಳ ಬಗ್ಗೆ ಇಲ್ಲದ ವಿಚಾರಗಳನ್ನು ಇಲ್ಲಿ ವಿಚಾರ ಮಾಡುವುದಕ್ಕೆ ಹೋದರೆ ನಿಜವಾಗಿಯೂ ಇದು ಸಾಧುವಲ್ಲ. ನನ್ನ ಮಿತ್ರರು ಒಬ್ಬರು ಇದು ಬರ್ನಿಂಗ್ ಪ್ರಾಬ್ಲಂ ಆಗಿದೆ ಎಂದು ಹೇಳಿದರು; ನಾನು ಇದನ್ನು Earning ಪ್ರಾಬ್ಲಂ ಎಂದು ಹೇಳಬೇಕಾಗಿದೆ. ಏಕೆಂದರೆ ಈಗ ಎಷ್ಟೋ ಲೀಡರುಗಳು ಇದ್ದಾರೆ. ಕರ್ಣಾಟಕದಲ್ಲಿ ಹಾಗೂ ಮಹಾರಾಷ್ಟ್ರದಲ್ಲಿರುವವರು ಆಂಧ್ರದಲ್ಲಿರುವವರು ಇನ್ನಿತರ ಕಡೆಗಳಲ್ಲಿ ಇರುವವರು ಇಂತಹ ಹೇಳಿಕೆಗಳನ್ನು ಕೊಟ್ಟು ತಮ್ಮ ಹೆಸರು ಎದ್ದು ಕಾಣಲಿ ಎಂದು ಒಂದು ನೆಪ ಮಾಡಿಕೊಂಡು ಇಂತಹ ಹೇಳಿಕೆಗಳನ್ನು ಕೊಡಹೊರಟಿದ್ದಾರೆ ಎಂದು ನಾನು ಹೇಳಬೇಕಾಗಿದೆ. ಇದೂ ಅಲ್ಲದೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ದೆಹಲಿಯಲ್ಲಿದ್ದಾರೆ ಮತ್ತು ಇವರುಗಳು ದೆಹಲಿಯಿಂದ ಹಿಂತಿರುಗಿದಮೇಲೆ ಇನ್ನೂ ಯಾವ ರೀತಿಯಾದ ಒತ್ತಾಯಗಳಿಗೆ ಮಣಿದು ಬರುತ್ತಾರೋ ಏತಕ್ಕಾಗಿ ಇದಕ್ಕೆ ಬಲಿಬೀಳಬೇಕಾಗುತ್ತೋ ಅದನ್ನು ನಾವೀಗಲೇ ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ, ಈಗ ನಮ್ಮಲ್ಲಿ ತುರ್ತು ಪರಿಸ್ಥಿತಿ ಇದೆ, ಈ ತುರ್ತು ಪರಿಸ್ಥಿತಿಯಲ್ಲಿ ಬೇರೆ ಅಭಿವೃದ್ಧಿ ಕಾರ್ಯಗಳು ಆಗುವುದಕ್ಕೆ ಹೆಚ್ಚು ಗಮನ ಕೊಡುವುದಕ್ಕೆ ಆಗುವುದಿಲ್ಲ ಮತ್ತು ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕಾದರೂ ದೇಶದಲ್ಲಿ ಒಕ್ಕಲುತನವನ್ನು ಅಭಿವೃದ್ಧಿ ಮಾಡಬೇಕು ಎಂದು ಹೇಳುತ್ತ ಬರುತ್ತಿದ್ದರು. ಇಂತಹ ಕೆಲಸಗಳನ್ನು ಮಾಡಿದರೆ ದೇಶದ ಹಿತಸಾಧನೆಯಾಗುತ್ತದೆ. ಇದನ್ನು ಬಿಟ್ಟು ಈಗ ಮಾಡುತ್ತಿರುವಂತಹ ಕೆಲಸಗಳನ್ನು ಮಾಡಬಾರದು. ಇದೇನಾಗುತ್ತದೆ ಎಂದರೆ, ದೇಶದ ಐಕ್ಯತೆಗೆ ಹಾಗೂ ಒಗ್ಗಟ್ಟಿಗೆ ಒಂದು ಕಿಡಿ ಬೆಂಕಿ ಹಾಕಿ ಇಲ್ಲದ

ಗೊಂದಲಗಳು ಏಳುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಈಗ ದೇಶದಲ್ಲಿ ಅಂತಹ ತುರ್ತು ಪರಿಸ್ಥಿತಿಯೂ ಇಲ್ಲದೇ ಇರುವುದರಿಂದ ಕೇಂದ್ರದ ಮಂತ್ರಿಗಳೇ ಆಗಲೇ ರಾಜ್ಯದ ಮಂತ್ರಿಗಳೇ ಆಗಲಿ ನಮ್ಮ ರಾಜ್ಯದ ಹಿತದೃಷ್ಟಿಯಿಂದ ಇಂತಹ ಹೇಳಿಕೆಗಳನ್ನು ಕೊಡುವುದು ಸರಿಯಲ್ಲ. ಅಲ್ಲದೆ ನಮ್ಮ ರಾಜ್ಯ ಈಗ ಇಲ್ಲಿರುವ ವರದಿಯಂತೆ ಇನ್ನೂ ಯಾವ ಭಾಗಗಳನ್ನು ಕಳೆದುಕೊಳ್ಳಬೇಕೋ ನನಗೆ ಗೊತ್ತಿಲ್ಲ. ಈಗೇನೋ ಬಹು ಫಲವತ್ತಾದ ನಿಪ್ಪಾಣಿ ಹಾಗೂ ಖಾನಾಪುರದ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಬಿಟ್ಟುಕೊಡಲೇಬೇಕೆಂದು ಇದರಲ್ಲಿದೆ. ಇದನ್ನು ನೋಡಿದರೆ ನನಗೇನೋ ಇದರಲ್ಲಿ ಒಂದು ರೀತಿಯಾದ ಪಾಲಿಟಿಕ್ಸ್ ಇದೆ ಎಂದು ಹೇಳಬೇಕಾಗಿದೆ. ಖಾನಾಪುರ ಹಾಗೂ ನಿಪ್ಪಾಣಿ ಇನ್ನಿತರ ತಾಲ್ಲೂಕುಗಳನ್ನು ಬಿಟ್ಟು ಕೊಡಲು ಕಾರಣ ಇಲ್ಲಿ ಮುಂದೆ ಕಾಂಗ್ರೆಸ್ ಪಕ್ಷದ ಜನರು ಚುನಾವಣೆಯಲ್ಲಿ ಬರುವುದಿಲ್ಲ. ನಮಗೆ ಬರುವ ಭಾಗಗಳಿಂದಲಾದರೂ ಕಾಂಗ್ರೆಸ್ಸಿಗೆ ಹೆಚ್ಚು ಜನರು ಬರಬಹುದು ಎನ್ನುವ ಒಂದು ಉದ್ದೇಶಕ್ಕಾಗಿ ಕಾಂಗ್ರೆಸ್ ಪಕ್ಷದವರೂ ಇದನ್ನು ಬಿಟ್ಟುಕೊಡಬೇಕೆಂದು ಮಾಡಿದ್ದಾರೆಂದು ಕಾಣುತ್ತದೆ. ಇದು ನನ್ನ ಭಾವನೆ. ಆದುದರಿಂದ ಈಗ ಇಲ್ಲಿ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಚನ್ನಬಸಪ್ಪನವರು ಈಗತಾನೇ ಏನೊಂದು ಅಭಿಪ್ರಾಯ ಕೊಟ್ಟರು ಎಂದರೆ ಸ್ಟೇಟಸ್ ಕೋ ಏನಿದೆ ಅದನ್ನು ಹಾಗೇ ಮುಂದುವರಿಸಿಕೊಂಡು ಹೋಗಬೇಕು ಎನ್ನುವ ಅವರ ವಾದವನ್ನು ನಾನೂ ಕೂಡ ಪುಷ್ಟೀಕರಿಸಿ ಅದಕ್ಕೆ ನನ್ನ ಅನುಮೋದನೆಯನ್ನೂ ಕೊಟ್ಟು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—Soon after the reply, I will ascertain which amendments are being pressed and not pressed, and put to vote.

Sri B. D. JATTI.—Mr. Speaker Sir, A number of Hon'ble Members on both sides have participated in the discussion on the Motion moved by me and all the Members who have participated have given the history of the unification of Karnataka And some of them have given all the details regarding the different Commissions appointed and have also discussed the Reports submitted by the different Commissions. I do not want to trace the history regarding the unification of Karnataka. I will try to be as brief as possible. I will try to reply to some of the points which have been raised during the course of the discussion.

The demand for the unification of Karnataka began from year 1919. Subsequently the agitation enlarged and sought for unification of all Kannada areas at different times and in different stages. The new State of Mysore came into existence on 1st November 1956 and it was only after the States Reorganisation Bill was passed in the Parliament and it became an Act. During the discussion in Parliament, number of amendments were moved by some hon. Members of the parliament regarding the boundary between Mysore and Maharashtra. Discussion took place in the Parliament and ultimately either the amendments were withdrawn or they were thrown out. After the passing of the Bill and after we got an Act, the Maharashtrians started again an agitation regarding the boundary. They were all along stating that there is scope for them for asking the Government of India to reopen the issue settled by the Act of Parliament and they were referring only to the speech of the then Union Home Minister Sri G. B. Pant.

If we refer to the speech made by late Sri G. B. Pant, he only stated at that time on the floor of the House that if there were minor adjustments to be made, then this question can by discussed in the Zonal Council and if the Zonal Council comes to a conclusion that certain recommendations are to be made, then, such recommendations may be

(SRI B. D. JATTI)

taken into consideration by the Government of India and finally pass in the form of an amendment in the Parliament and then only the changes should be made. Afterwards, the Government of Mysore all along was of the view that when once the States have come in existance, when the boundaries have been settled by an Act of the Parliament, it is unnecessary on the part of anybody to think of reopening the boundary issue. They told, there were some minor issues and if such minor issues are to be settled, they should be discussed across the table between the two representatives of the two States and if they do not come to unanimous conclusion, only such matters may be referred to the Government of India and then Government of India may send in the form of amendment. Status quo should remain, was the slogan of Government of Mysore all along. For eleven years we are saying the same thing. But, due to circumstances elsewhere, again this question came up for consideration and the Maharashtrians wanted that border issues should be reconsidered. As all are aware, this question was taken up in the A. I. C. C. session which was held in Bangalore. In 1965 a resolution was passed in Bangalore Session of the A. I. C. C. that inter-State disputes should be settled by mutual negotiations ; in case of failure of such efforts, Government of India should set up a proper machinery for speedy and final settlement of the disputes. In view of this decision, the Chief Ministers of Maharashtra and Mysore tried to negotiate with each other. They tried to come to some understanding but it was not possible for them to come to any amicable conclusion. So, they were again helpless. Then in May 1966 the Congress Committee recommended the Commission for Maharastra-Mysore-Kerala border dispute and in view of that decision the One-Man Commission was appointed. It was accepted by the Chief Ministers of Maharashtra and Mysore along with the Union Home Minister and also the Prime Minister of India. They were all members of the Working Committee and one or two who were not members of the Working Committee also participated in the discussion which took place in the Working Committee. They were parties to the resolution passed in the Working Committee. It was in October 1966 that the Congress Working Committee resolved :

> "Taking into consideration the fundamental basis of the Reorganisation of States in India and with a view to solving the existing border disputes between the States of Maharashtra and Mysore and the State of Mysore and Kera'a, the Working Committee requests the Government to set up a Commission which would hear the concerned parties and give its final decision".

SRI B. P. GANGADHAR (Tumkur).—Sir, I have a point of order. The Food Minister is making references vividly with respect to the decisions taken by the Chief Minister. Apart from that, he is making references to the decisions taken by A. I. C. C. and so on. It is all

a Party matter. How is a party matter important to this House? It is very funny. The Congress might have done whatever it liked. Congress has committed whatever sin that is possible. But, how are we concerned? It is irrelevant and I request you not to allow to refer to decisions of the Congress Working Committee or the discussion that took place in the A. I. C. C. meeting.

† Sri S. R. KANTHI (Minister for Law and Parliamentary Affairs).—Sir, it is very strange. After all, this House has its full freedom of expression. If that is so, how can the Hon. Member Sri Gangadhar say that what all the Minister for Food is saying ought not to have been said? What the Minister said is that the Working Committee made a representation to the Government of India to appoint a Commission nothing more than that.

Mr. SPEAKER.—The hon. member Sri B. P. Gangadhar raised a point that certain representations and arguments or reasons referred to or adverted to by the hon. Minister for Food in the course of his participation in the debate in reply to the speeches delivered in the House are not proper, that they relate to party affairs and that they have been unnecessarily magnified, that their importance is limited and therefore it should be held by me to be out of order.

A point of order always relates to an interpretation of a rule. He has never quoted that. Further, if he were present throughout the debate, he would have seen in the course of the speeches on either side, members referred to this resolution more than once. If that was permissible, then, I do not think I can hold that it is not permissible in reply. Apart from that, whether anybody has referred to it or not, the relevant circumstance has to be considered. I cannot say that it is irrelevant. On the other hand, time and again it is said that because of the party pressure, the Chief Minister yielded. Simply because one is sensitive, it should not be converted into a point of order. Point of order arises when there is violation of rule or any article of the Constitution relating to a procedure I am unable to uphold the point of order.

Sri B. D. JATTI.—Sir, in view of the recommendation made by the Working Committee, Sri Mahr Chand Mahajan Commission was appointed by Government of India on 25th October 1966. Hon. Sri Mahajan toured the States of Mysore, Maharashtra and Kerala and he recorded evidence of a number of people who appeared before him and a number of memorandums were submitted to him and after taking into consideration all these things, the Commission submitted a Report on 20th August 1967.

This report ought to have been immediately released but for reasons well-known to the Government of India, the report could not de releaed earlier. It was released on 4th November 1967. I do not want to go into the details regarding the different matters dealt with by the Commission in the report but I will confine myself to the main recommendations.

(SRI B. D. JATTI)

The report recommends transfer of 264 villages to Maharashtra and towns of Nippani, Khanapur and Nandagad covering 656.3 sq. miles, with ?,81,000 total population. Similarly, the report recommends transfer of 247 villages to Mysore covering an area of 1,?68 sq. miles. Tue population of the area recommended for transfer is 3,49,439.

5-00 P.M.

Regarding Kasargod area north of Chandragiri and Payaswini rivers is recommended for transfer to Mysore. The Commission while submitting its report has taken into consideration two guiding principles. One is fundmental basis of States reorganisation and two, linguistic homogeneity. In certain other matters where he has deviated to a certain extent there he has taken into consideration administrative convenience and practical difficulties of the people in the border areas and he has made slight alterations here and there. But he has kept in view the guidelines throughout the report. The term 'recommendations' used in the report do not alter the position that the report is vertually an award. Why I say like this is, the contending parties have agreed in principle to accept the report which was to be submitted by Sri Mahajan, Not only that. When Mahajan Commission was appointed, the respective representatives of the States particularly I am refering to the Chief Ministers of Maharashtra and Mysore, both of them have expressed their views openly, freely and frankly that the report will have to be accepted as if it is an Award. We do not say it is an award in legal terms. But the report has to be treated as if it is an award. That was the understanding and that was the impression of all the people here in our State and also in the State of Maharashtra. The Commission has given its decision regarding Konkani language also. The Commission concludes that Konkani is not a dialect of Marathi but an independent language. This view is expressed by a number of hon'ble members who have spoken here. While referring to the mother tongue of theirs, some of the hon'ble members said that their mother tongue is Konkani but it has nothing to do with Marathi. When the hon'ble members have expressed their opinion, I do not think there is any doubt left for others to express. Almost all the national papers of India have characterised the report as an Award. For the information of this House I may mention the names of papers which have expressed this view.

(i) The Hindu
(ii) Hindustan Times
(iii) The Statesman
(iv) The Western Times
(v) Deccan Hearld
(vi) Samyukta Karnataka
(vii) Amrit Bazar Patrika.

Well known leaders from Maharashtra have expressed that it should be treated as an award. When all these people accept it, I do not think there is any reason for some of the members of this House or outside to complain against Sri Mahajan. Some of the members from Maharashtra have gone to the extent of criticising Sri Mahajan. Whenever any Commission is to be appointed, it is fair for us to accept it particularly when a man of the eminence of Sri Mahajan has been appointed as the Commission. He is known for his justice and for other merits. It is not necessary for me to say anything about it. The Commission has laid down for itself certain criteria for demarcating the boundary, *i.e.*, compact area having a population of 20,000 with 60 per cent majority speaking one language. This principle has been observed throughout the report and wherever he has deviated from those principles he has given sufficient reasons for why he has done it. He has looked into some of the points such as administrative convenience or practical difficulties of the people in that particular area.

Regarding the minorities I will have to explain here that Mysore State has tried to give as many safeguards as possible for the Government. I am not saying that the Government has done it but the Commission appointed by the Government of India to look into the question of minorities and minority languages has expressed in its report that Mysore has tried to give maximum facilities or adequate facilities to the minorities. Even if there are difficulties, those difficulties can be solved by the Government of Mysore and better facilities can be given to the minorities who are either on this side or that side. I do not want to say about the Government of Maharashtra because it is up to them to give better facilities to those who are there. As far as we are concerned we have tried to give as much facilities as possible and if more facilities are to be given we are prepared.

SRI B. B. SAYANAK.—We are not for facilities ; we are for merger.

SRI B. D. JATTI.—His wishes will not be accepted unless majority expresses.

The previous Home Minister Sri G. L. Nanda when he introduced the Bill regarding the border of Punjab he himself has stated in the Parliament that wherever a Commission has been appointed and wherever the commission has come to an unanimous conclusion, such conclusions must be accepted and on the basis of such conclusions Bill should be prepared. If he has stated on the floor of the House and if on that basis the Bill was prepared, where is the difficuity for the Union Home Minister to accept the very principle and accept the decision of the report given by Sri Mahajan *i.e.*, pertaining to the border of Maharashtra-Mysore and Mysore and Kerala.

SRI H. SIDDAVEERAPPA (Harihara).—Even when the S.R.C. report was there the same principle was substantially adopted except in one or two cases.

Sri B. D. JATTI.—Here it is substantial. Sri G. L. Nanda moving the Bill to provide for the reorganisation of Punjab stated on the floor of the House: "we did appoint that commission and that commission reported on 31-5-1966. This was laid on the Table. The recommendations of the commission were unanimous except regarding Karar station. We decided to accept all unanimous recommendations of the commission and they have been embodied in the Bill." This is the statement made by Sri G. L. Nanda. Here, in our case a commission was appointed. This was one man commission. The report that has been submitted by the Commission is hundred per cent unanimous. If Sri Nanda has accepted the unanimous recommendations of the Shah Commission, what is the difficulty for the present Home Minister to accept the unanimous recommendation of the Mahajan Commission? I do not understand. Perhaps the Union Home Minister is trying to evade the issue and create an atmosphere in Maharashtra just to get some strength and to just evade the issue altogether. Therefore it is not fair on the part of the Government of India to think of any proposal or suggestion for obtaining national consensus or opinion poll. If this is done then we will have to come to the conclusion that the Government of India have different yardsticks for measuring different border issues. It is not correct and it will not be correct in another sense also. The Union Government is a Congress Government. the Government of Maharashtra and the Government of Mysore are Congress Government. All the important leaders have agreed to treat the report of the Commission as final and when they have accepted one definite policy in considering the reports submitted by other Commissions, pertaining to other States, what is the difficulty for the Union Home Minister or the Government of India to accept the very same principle and accept the report *in toto*? Under these circumstances I request the members of this House to accept the substitute motion which I have moved. Thank you.

Mr. SPEAKER.—I shall take up the amendments first. Is the hon. Member Sri Nanje Gowda withdrawing or pressing his amendment?

Sri H. N. NANJE GOWDA.—I wish to press my amendment.

Mr. SPEAKER.—Does the hon'ble Member Sri M. S. Krishnan want to press his amendment or withdraw it?

Sri M. S. KRISHNAN.—Sir, please allow me to say a few words on the amendment, because I was not called upon to speak on the motion.

Mr. SPEAKER.—I cannot allow at this stage. Members must know the procedure.

The question is:

Sri M. S. KRISHNAN.—My amendment may be held over Sir.

MR. SPEAKER.—The question is :

That at the end of the motion, the following shall be added—

"That this House further declares that in case the Government of India does not treat the report as an award between the parties and act thereby, then all the Members of the Assembly shall resign their membership."

The motion was negatived.

MR. SPEAKER.—Does the hon'ble Member Sri Sharanagouda want to press his amendment or withdraw it ? As the hon'ble Member is not present here, I will have to put it to vote.

The question is :

"That—

(i) In line 4 delete the word immediately

(ii) For the words beginning with 'inspite of' in line 5 to the words 'also in line 9 substitute treating it as an award.'

(iii) In line 10 before the word 'vehemently' insert 'further, this House'.

(iv) At the end up to the word 'poll' add 'in respect of this boundary disputes."

The amendment was negatived

MR. SPEAKER.—Does the hon'ble Member Sri Venkatagiriyappa want to press his amendment or withdraw it ?

SRI P. VENKATAGIRIYAPPA.—Sir, I beg leave of the House to withdraw my amendment.

MR. SPEAKER —Has the member leave of the House to withdraw his amendment ?

HON'BLE MEMBERS.—Yes.

Amendment was by leave of the House, withdrawn

MR. SPEAKER.—Does the hon'ble Member Sri M. S. Krishan want to press his amendment or withdraw it ?

SRI M. S. KRISHNAN.—Sir, before withdrawing my amendment, I would like to say that if the motion is passed as it is, we will be playing into the hands of Maharashtra Government and the Central Government. Anyway, in deference to the wishes of the Opposition and this House I beg leave to withdraw my amendment.

MR. SPEAKER.—Has the member leave to withdraw his amedment?

HON'BLE MEMBERS—Yes.

Amendment was by leave of the House, withdrawn

SRI DIGAMBAR RAO B. KALMANKAR.—I beg leave of the House to withdraw my amendment.

Mr. SPEAKER.—Has the member leave of the House to withdraw his amendment ?

HON'BLE MEMBER'S.—Yes.

Amendment was by leave of the House, withdrawn

Mr. SPEAKER,—I will now put the motion to the House.

The question is :

"This House, having considered the Report of the Mahajan Commission on Maharashtra-Mysore-Kerala Boundary Disputes urges upon the Central Government to immediately implement the recommendations of the Commission in spite of the fact that the Commission has failed to recognise the just claims of the State of Mysore and that some of its recommendations are quite injurious to the legitimate interests of the State of Mysore, and also vehemently opposes any proposal or suggestion for obtaining 'National consensus' or taking 'Opinion Poll'."

I think the Ayes have it, the Ayes have it... ..

Sri B. P. KADAM.—Sir, I claim division.

Division Bell was rung.

Mr. SPEAKER.—I will again put the main motion to vote of the House. The question is :

"That this House, having considered the report of the Mahajan commission on Maharastra-Mysore-Kerala Boundary Disputes urges upon the Central Government to immediately implement the recomendations of the commission inspite of the fact that the commission has failed to recognise the just claims of the State of Mysore and that some of its recommendations are quite injurious to the legitimate interests of the state of Mysore, and also vehemently opposes any proposal or suggestion for obtaining "National consensus or taking opinion poll."

(Counting was taken)

The result of the division is as follows : –

Ayes : 109 ; Noes : 4

(The motion was adopted.)

Sri B. P. KADAM.—Sir, my motion is there before the House. The House has to express its opinion on my motion.

Mr. SPEAKER.—The provision under Rule 279 is to take an opinion on the question. Opinion has been taken. So, I cannot go on ascertaining opinions on other questions. When once an opinion on the main motion is taken, the other substitute motion is not put to vote. I will give him the authority, so that he may satisfy himself.

Sri B. P. KADAM.—Sir, the House is seized of it.

Mr. SPEAKER.—There is nothing like the House being seized of it. Therefore, I cannot put it to the vote of the House.

Sri B. P. KADAM.—The motion which I have moved is not contradictory. My motion is clear and candid. It is to solve the dispute on democratic principles and to find a just solution. My motion is not contradictory to the motion which the Government has moved. My motion gives a clear, candid suggestion in explicit clear words that this dispute must be solved on democratic lines and it should be solved once for all. The motion moved by Government is different than mine. My motion has got a clear purpose behind it.

Mr. SPEAKER.—Would the member like to cite any authority or precedent ?

Sri B P. KADAM.—The House is seized of it.

Mr. SPEAKER.—If the member repeats what he has once said, I cannot possibly accept it. I have studied the matter. Is he aware that the House has already expressed its opinion on the main motion ? Now he is asking that this House having considered the report of the Mahajan Commission, urges upon the Central Government to reject the same *in toto*. One Resolution has been that it should be implemented immediately. Am I to put it to vote in part ? I am dealing only with the aspect of consistency or not. Under this particular Rule 279, how many times vote can be taken is a different matter. The member is under the impression that his motion is inconsistent and therefore the opinion taken on a prior occasion does not at all apply. Can the House vote like that, one in direct conflict with the other ?

5-30 P.M.

Sri B. P. KADAM.—My motion is very clear and altogether a different one.

Mr. SPEAKER. I have to take the Resolution as it is, and then, in its place, to find a solution on democratic lines accepting language, contiguity, wishes of the people. Even here, the House has expressed its opinion that this Report be implemented. But, the member wants something else. Can rejection come after acceptance ? You can also see Rule 342 of the Lok Sabha Rules, which corresponds to our Rule 279. "When substantive motions have been moved, the Speaker may in his discretion put them to the vote of the House." It is not like other motions. Whenever any substantive motion moved under this rule is carried, all other substantive motions which are not placed before the House shall be deemed to have been barred or negatived by the House, as the case may be.

It will be rediculous to put a matter which has been concluded by vote. I am sorry.

The work for the day is over. There is half-an-hour discussion on the agenda. If the House agress, we shall take it up.